ಪ್ರಬುದ್ಧ ಕರ್ಣಾಟಕ

ಸಂಪುಟ : ೮೦

ಸಂಚಿಕೆಗಳು : ೩೧೫-೩೧೮

೧೯೯೯

ಪ್ರಸಾರಾಂಗ: ಮೈಸೂರು ವಿಶ್ವವಿದ್ಯಾನಿಲಯ

ಪ್ರಬುದ್ಧ ಕರ್ಣಾಟಕ

ಸಂಪುಟ ೮೦ ಸಂಚಿಕೆಗಳು ೩೧೫–೩೧೮
(ಸಂಯುಕ್ತ)

ಬಹುಧಾನ್ಯ ಸಂವತ್ಸರ

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೧೯೯೯

PRABUDDHA KARNATAKA, a Kannada Quarterly of the University of Mysore, Volume 80, pp. viii + 87.

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

ಮುದ್ರಕರು

ಶ್ರೀ ಬಿ. ಎಸ್. ಸಿದ್ಧೇಗೌಡ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು-೫೭೦ ೦೦೬

ಪ್ರಕಾಶಕರ ಪ್ರಸ್ತಾವನೆ

'ಪ್ರಬುದ್ಧ ಕರ್ಣಾಟಕ'ದ ಕಾಲಗತಿಯೊಂದಿಗೆ ಹೆಜ್ಜೆ ಹಾಕಬೇಕೆಂಬ ನನ್ನ ಆಸೆ ಈಡೇರುತ್ತಿರುವುದಕ್ಕೆ ಹೆಮ್ಮೆಯೆನಿಸಿದೆ. ಪ್ರಬುದ್ಧ ಕರ್ಣಾಟಕದೊಂದಿಗೆ ಬಾಂಧವ್ಯ ಹೊಂದಿರುವವರ ಮನಸ್ಸೂ ಇದರಿಂದ ಪ್ರಫುಲ್ಲಗೊಳ್ಳುತ್ತದೆಂದು ನಾನು ಭಾವಿಸುತ್ತೇನೆ.

ಇದೂ ಸಹ ಒಂದು ಸಂಯುಕ್ತ ಸಂಪುಟವೇ. ಸಂಪುಟ ೮೦, ಸಂಚಿಕೆಗಳು ೩೧೫-೩೧೮-ಕಾಲಗತಿಯೊಂದಿಗೆ ಸರಿಹೊಂದಿಸುವುದಕ್ಕೆ ಇದು ಅನಿವಾರ್ಯ ಕೂಡ.

ಚಂದಾ ಹಣ ಕಡಿಮೆಯಿದ್ದೂ ಸಕಾಲಕ್ಕೆ ಪತ್ರಿಕೆ ಹೊರತರಲು ಸರ್ವ ಪ್ರಯತ್ನಗಳನ್ನು ನಡೆಸುತ್ತಿದ್ದರೂ ಚಂದಾದಾರರ ಸಂಖ್ಯೆ ನಾವು ನಿರೀಕ್ಷಿಸಿದಂತೆ ಸುಧಾರಿಸುತ್ತಿಲ್ಲ. ಯಾವುದೇ ಒಂದು ಪತ್ರಿಕೆ ಜೀವಂತಿಕೆಯಿಂದ ಉಳಿಯಬೇಕಾದರೆ ಓದುಗರ ಸಹಕಾರ ಅಗತ್ಯವೆಂಬುದನ್ನು ಯಾರೂ ಅಲ್ಲಗಳೆಯಲಾರರು. ತಾವು ಚಂದಾಹಣ ಕಟ್ಟದಿದ್ದಲ್ಲಿ ದಯವಿಟ್ಟು ಕಳುಹಿಸಿಕೊಡಿ. ನಿಮ್ಮ ಚಂದಾದಾರಿಕೆಯನ್ನು ಮುಂದುವರಿಸುವುದರ ಜೊತೆಗೆ ನಿಮ್ಮ ಸ್ನೇಹಿತರನ್ನು ಚಂದಾದಾರರನ್ನಾಗಿ ಮಾಡಿ. ಜೊತೆಗೆ ಸಂಘಸಂಸ್ಥೆಗಳೂ ಚಂದಾದಾರರಾಗುವಂತೆ ಮಾಡಿ. ಕರ್ನಾಟಕದಲ್ಲಿರುವ ಎಲ್ಲಾ ಶಾಲಾಕಾಲೇಜುಗಳು ಆಜೀವ ಸದಸ್ಯತ್ವ ಪಡೆದುಕೊಳ್ಳಬೇಕಾಗಿ ವಿನಂತಿಸುತ್ತೇನೆ. ಇದರ ಜೊತೆಗೆ ಲೇಖನಗಳನ್ನು ಕಳುಹಿಸಿಕೊಡಿ. ಒಂದು ಪತ್ರಿಕೆಯ ಯಶಸ್ಸು ಓದುಗರ ಪ್ರೋತ್ಸಾಹದ ಮೇಲೆ ನಿಂತಿದೆ ಎಂಬುದನ್ನು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. 'ಪ್ರಬುದ್ಧ ಕರ್ಣಾಟಕ'ವನ್ನು ನಿಮ್ಮದಾಗಿ ಮಾಡಿಕೊಳ್ಳಿ.

ಈ ಸಂಪುಟದ ಸಂಪಾದಕರಾದ ಡಾ. ಆರ್.ವೈ.ಎಸ್. ಸುಂದರಂ ಮತ್ತು ಡಾ. ಎನ್. ಎಸ್. ತಾರಾನಾಥ್ ಅವರುಗಳು ಎಂದಿನಂತೆ ಶ್ರಮವಹಿಸಿ ಪತ್ರಿಕೆ ಹೊರಬರಲು ನೆರವಾಗಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

ಪ್ರಸಾರಾಂಗದ ಎಲ್ಲಾ ಕಾರ್ಯಚಟುವಟಿಕೆಗಳ ಯಶಸ್ಸಿಗೆ ಕುಲಪತಿಗಳಾದ ಪ್ರೊ. ಎಸ್. ಎನ್. ಹೆಗ್ಡೆ ಅವರು ನೀಡುತ್ತಿರುವ ಪ್ರೋತ್ಸಾಹವೇ ಕಾರಣವಾಗಿದೆ. ಅವರ ಕ್ರಿಯಾಶೀಲತೆ ನಾವು ಇನ್ನೂ ಉತ್ಸಾಹದಿಂದ ಮುನ್ನುಗ್ಗಲು ಸಹಕಾರಿಯಾಗಿದೆ. ಅವರನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ. ಆಡಳಿತಾತ್ಮಕವಾಗಿ ಎದ್ದು ನಿಲ್ಲುವ ಅಡೆತಡೆಗಳನ್ನು ಸರಾಗವಾಗಿ ನಿವಾರಿಸಿ ನಮ್ಮ ಕಾರ್ಯಗಳೆಲ್ಲಾ ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುತ್ತಿರುವವರು

ಕುಲಸಚಿವರಾದ ಪ್ರೊ. ವಿ. ಜಿ. ತಳವಾರ್ ಅವರು. ಅವರನ್ನು ತುಂಬು ಹೃದಯ ದಿಂದ ನೆನೆಯುತ್ತೇನೆ. ಸಕಾಲದಲ್ಲಿ ಮುದ್ರಣ ಮುಗಿಸಿಕೊಟ್ಟ ವಿಶ್ವವಿದ್ಯಾನಿಲಯದ ಮುದ್ರಣಾಲಯದ ನಿರ್ದೇಶಕರಾದ ಶ್ರೀ ಬಿ. ಎಸ್. ಸಿದ್ದೇಗೌಡರಿಗೆ ನನ್ನ ವಂದನೆಗಳು. ಹಾಗೆಯೇ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಡಿ. ಕೆ. ಈರೇಗೌಡ ಮತ್ತು ಬಳಗದವರಿಗೆ ವಂದನೆಗಳನ್ನು ತಿಳಿಸುವುದು ನನ್ನ ಕರ್ತವ್ಯವೆಂದು ತಿಳಿದಿದ್ದೇನೆ.

ಪ್ರೊ ಅರವಿಂದ ಮಾಲಗತ್ತಿ

ನಿರ್ದೇಶಕ

ಈ ಸಂಪುಟದ ಲೇಖಕರು

ಡಾ. ಸಿ. ಪಿ. ಸಿದ್ಧಾಶ್ರಮ	ನಿರ್ದೇಶಕರು ಮತ್ತು ಪ್ರಾಧ್ಯಾಪಕರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
ಪಿ. ಬೆಟ್ಟೇಗೌಡ	ಕನ್ನಡ ಅಧ್ಯಾಪಕರು ವೈ.ಡಿ.ಡಿ. ಸರ್ಕಾರಿ ಪ್ರಥಮದರ್ಜೆ ಕಾಲೇಜು, ಬೇಲೂರು, ಹಾಸನ ಜಿಲ್ಲೆ
ಡಾ. ಡಿ. ಕೆ. ರಾಜೇಂದ್ರ	ಕನ್ನಡ ಪ್ರಾಧ್ಯಾಪಕರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
ನಿ. ಗೂ. ರಮೇಶ್	ಕನ್ನಡ ಭಾಷಾ ಬೋಧಕ ಸರ್ಕಾರಿ ಪ್ರೌಢಶಾಲೆ, ದಮ್ಮ ನಿಂಗಲ ಚನ್ನರಾಯಪಟ್ಟಣ ತಾಲೋಕು ಹಾಸನ ಜಿಲ್ಲೆ
ಸ. ರಘುನಾಥ	೨೨೦೯, ಕೊಳ್ಳೂರು ರಸ್ತೆ ವೆಂಕಟೇಶ್ವರ ಬಡಾವಣೆ ಶ್ರೀನಿವಾಸಪುರ, ೫೬೩೧೩೫
ಕೌಲಗಿ ಶೇಷಾಚಾರ್	ರಮಾವಿಲಾಸ ರಸ್ತೆ ಮರಿಮಲ್ಲಪ್ಪ ಪ್ರೌಢಶಾಲೆ ಎದುರು ಮೈಸೂರು
ಡಾ. ಟಿ. ಎಂ. ಸರಸ್ವತಿ	೪೮, 'ವಂದನ' ಮಾರುತಿದೇವಸ್ಥಾನದ ರಸ್ತೆ ಕುವೆಂಪುನಗರ, ಮೈಸೂರು
ಪ್ರೊ. ಎಚ್. ಎಸ್. ಹರಿಶಂಕರ್	ಪ್ರಾಧ್ಯಾಪಕರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸಗಂಗೋತ್ರಿ, ಮೈಸೂರು
ಎ. ವಿ. ಪ್ರಸನ್ನ, ಕೆ.ಎ.ಎಸ್.	ಬೆಂಗಳೂರು, ೫೬೦ ೦೪೬

ವಿಷಯ ಸೂಚಿ

ಡಾ. ಸಿ. ಪಿ. ಸಿದ್ಧಾಶ್ರಮ

ಬಸವಣ್ಣನವರು ಮತ್ತು ಜಾತಿವಿನಾಶ

ಕನ್ನಡ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನಕ್ಕೆ ವಿಶಿಷ್ಟವಾದ ಮತ್ತು ಪ್ರಮುಖವಾದ ಸ್ಥಾನವಿದೆ. ಶರಣ–ಶರಣೆಯರ ಸಮಾಜೋಧಾರ್ಮಿಕ ಆಂದೋಲನದ ಅಂಗವಾಗಿ ಸೃಷ್ಟಿಯಾದ ವಚನ ಸಾಹಿತ್ಯ ಎಲ್ಲ ಕಾಲಕ್ಕೂ ಪ್ರಸ್ತುತವಾಗುವಂಥ ಜನಪರ ಕಾಳಜಿ–ಆಶಯವನ್ನು ಹೊಂದಿರುವ ಕಾರಣದಿಂದಾಗಿ ಇದರ ಮಹತ್ವ ಇನ್ನೂ ಅಧಿಕವಾಗಿದೆ.

ಬಸವಣ್ಣನವರ ನೇತೃತ್ವದಲ್ಲಿ ಆರಂಭವಾದ ಸಮಾಜೋಧಾರ್ಮಿಕ ಆಂದೋಲನದಲ್ಲಿ ಕಡೆಗಣಿಸಲ್ಪಟ್ಟ ಶೂದ್ರರು, ಪಂಚಮರು ಮತ್ತು ಮಹಿಳೆಯರು ಮೊಟ್ಟಮೊದಲ ಬಾರಿಗೆ ಸಕ್ರಿಯವಾಗಿ ಭಾಗವಹಿಸಿದ ಕಾರಣದಿಂದಾಗಿ ಆ ಆಂದೋಲನ ಚರಿತ್ರೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವ ಭಾರತದಂತಹ ದೇಶದಲ್ಲಿ ಯಾವುದೇ ಒಂದು ಜನಪರ ಚಳವಳಿ ಯಶಸ್ಸು ಹೊಂದಬೇಕಾದರೆ ಶೋಷಣೆಗೊಳಗಾದ ದುಡಿಯುವ ಜನ ಸಮುದಾಯ, ಕೆಳಸ್ತರದ ಜನವರ್ಗ ಮತ್ತು ಮಹಿಳೆಯರು ಸಕ್ರಿಯವಾಗಿ ಪಾಲುಗೊಳ್ಳುವುದು ಅನಿವಾರ್ಯವಾಗಿರುತ್ತದೆ. ಬಸವಣ್ಣ ಈ ಎಲ್ಲ ಜನಸಮುದಾಯವನ್ನು ತಾನು ಹುಟ್ಟುಹಾಕಿದ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ನೀಡಿದ್ದರ ಫಲವಾಗಿಯೇ ಶರಣ ಚಳವಳಿ ಅಂದಿನ ಸಾಮಾಜಿಕ, ಧಾರ್ಮಿಕ ವ್ಯವಸ್ಥೆಯನ್ನು ಅಲುಗಾಡಿಸಲು, ಪರಿವರ್ತನೆ ತರಲು ಸಾಧ್ಯವಾಯಿತು. ಬಸವಣ್ಣನವರು ಹುಟ್ಟುಹಾಕಿದ ಈ ಸಮಾಜೋಧಾರ್ಮಿಕ ಆಂದೋಲನಕ್ಕಿಂತ ಮುಂಚೆ ಇದ್ದ ಸಾಮಾಜಿಕ, ಧಾರ್ಮಿಕ, ರಾಜಕೀಯ ಪರಿಸ್ಥಿತಿಯನ್ನು ಕೊಂಚಮಟ್ಟಿಗೆ ಪರಿಶೀಲಿಸುವುದು ಈ ಸಂದರ್ಭದಲ್ಲಿ ಉಚಿತವೆನಿಸುತ್ತದೆ.

ಬಸವಪೂರ್ವಯುಗದ ಸಾಮಾಜಿಕ, ಧಾರ್ಮಿಕ, ರಾಜಕೀಯ ಪರಿಸ್ಥಿತಿಗಳನ್ನು ದುಡಿಯುವ ಜನವರ್ಗದ, ಜನಸಾಮಾನ್ಯರ ದೃಷ್ಟಿಯಿಂದ ನೋಡಿದಾಗ ಅಷ್ಟೊಂದು ಅನುಕೂಲಕರವಾಗಿರಲಿಲ್ಲವೆಂದು ತಿಳಿದುಬರುತ್ತದೆ. ವೈದಿಕ ಧರ್ಮ ಹುಟ್ಟುಹಾಕಿದ ವರ್ಣಾಶ್ರಮ ಪದ್ಧತಿಯಿಂದಾಗಿ ಅಂದಿನ ಮಾನವಸಮಾಜ ಒಡೆದು ಹೋಳು

ಹೋಗಿತ್ತು, ಸಾಮಾಜಿಕ ಸಮಾನತೆ, ರಾಜಕೀಯ ಸ್ವಾತಂತ್ರ್ಯ, ಶೈಕ್ಷಣಿಕ ಸವಲತ್ತುಗಳು ಕೇವಲ ಕೆಲವರಿಗೆ ಮಾತ್ರ ಮೀಸಲಾಗಿದ್ದವು. ಸಮಾನತೆ, ಸವಲತ್ತುಗಳಿಂದ ಬಹುಸಂಖ್ಯಾತ ದುಡಿಯುವ ಜನವರ್ಗ, ಶೋಷಿತ ಜನಸಮುದಾಯ ಮತ್ತು ಮಹಿಳೆಯರು ವಂಚಿತರಾಗಿದ್ದರು. ವ್ಯವಸ್ಥೆಯ ಸಂಚಿನಿಂದಾಗಿ ಮೂಢನಂಬಿಕೆ ಅಂಧಃಶ್ರದ್ಧೆ ಕಂದಾಚಾರಗಳು ಜನಮನದಲ್ಲಿ ಬೇರೂರಿದ್ದವು. ಈ ಕೆಳವರ್ಗದ ಶೋಷಿತ ಜನತೆ ತಾವು ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಸ್ವಾತಂತ್ರ್ಯ, ಸವಲತ್ತುಗಳನ್ನು ಪಡೆದುಕೊಳ್ಳುವುದು ಅಪರಾಧವೆಂಬ ಕೀಳರಿಮೆಯನ್ನು ಹೊಂದಿದವರಾಗಿದ್ದರು. ಅಷ್ಟರ ಮಟ್ಟಿಗೆ ವ್ಯವಸ್ಥೆ ಅವರನ್ನು ಮೂಢರನ್ನಾಗಿ ಮಾಡಿತ್ತು. ಕರ್ಮಸಿದ್ಧಾಂತ ಇದಕ್ಕೆಲ್ಲ ಪೂರಕವಾಗಿ ಕೆಲಸನಿರ್ವಹಿಸುತ್ತಿತ್ತು. ಜನಸಮುದಾಯವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂದು ನಾಲ್ಕು ವರ್ಣಗಳಲ್ಲಿ ವಿಭಜಿಸಲಾಗಿತ್ತು. ಈ ವರ್ಣಗಳೇ ಮುಂದೆ ಕಾಲಾಂತರದಲ್ಲಿ ನೂರಾರು ಸಾವಿರಾರು, ಜಾತಿ ಉಪಜಾತಿಗಳ ಸೃಷ್ಟಿಗೂ ಕಾರಣವಾದವು.

"ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ"

(ಭಗವದ್ಗೀತೆ-೪-೧೩)

'ಅವರವರ ಗುಣ ಕರ್ಮಗಳಿಗೆ ಅನುಸಾರವಾಗಿ ನಾಲ್ಕು ವರ್ಣಗಳು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ) ನನ್ನಿಂದ ಸೃಷ್ಟಿಸಲ್ಪಟ್ಟಿವೆ' ಎಂಬುದು ಇದರ ತಾತ್ಪರ್ಯ. ಇದೇ ಗೀತೆಯ ೧೮ನೇ ಅಧ್ಯಾಯನದಲ್ಲಿನ ೪೧ನೇ ಶ್ಲೋಕವು ಮೇಲಿನ ಅಭಿಪ್ರಾಯವನ್ನೇ ಪುಷ್ಟೀಕರಿಸುತ್ತದೆ.

ಬ್ರಾಹ್ಮಣ ಕ್ಷತ್ರಿಯ ವಿಶಾಂ ಶೂದ್ರಾಣಾಂ ಚ ಪರಂತಪ
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ

(ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರ ಕರ್ಮಗಳು ಅವರ ಸ್ವಭಾವದಿಂದ ಹುಟ್ಟಿದ ಗುಣಗಳಿಂದ ವಿಭಜಿಸಲ್ಪಟ್ಟಿವೆ)

ಗುಣಕರ್ಮಗಳಿಗೆ ಅನುಗುಣವಾಗಿ ಮೇಲಿನ ರೀತಿಯ ನಾಲ್ಕು ವರ್ಣಗಳನ್ನು ಭಗವಂತ ಸ್ವತಃ ತಾನೇ ಸೃಷ್ಟಿಸಿದನೆಂಬುದನ್ನು ಹಾಗೂ ಆಯಾ ವರ್ಣದವರು ಮಾಡಬೇಕಾದ ಕರ್ಮಗಳು (ಕೆಲಸ ಕಾರ್ಯಗಳು) ಸ್ವಭಾವ ಜನ್ಯವೆಂಬ ವಾದವನ್ನು ಒಪ್ಪಲು ಸಾಧ್ಯವಾದೀತೆ ? ಒಂದು ವೇಳೆ ಆ ಭಗವಂತ ಇದ್ದುದೇ ನಿಜವಾಗಿದ್ದ ಪಕ್ಷದಲ್ಲಿ ಕರುಣಾಮಯಿಯಾದ ಸಕಲ ಜೀವಾತ್ಮರನ್ನು ಸಮಾನ ಪ್ರೀತಿ ವಾತ್ಸಲ್ಯದಿಂದ ಕಾಣಬೇಕಾಗಿದ್ದ ಆತ, ತನ್ನ ಮಕ್ಕಳನ್ನು ಹೀಗೆ ಒಡೆದು ಆಳುವ ತಂತ್ರವನ್ನು ರೂಪಿಸುತ್ತಿದ್ದನೇ ? ಮನುಷ್ಯ ತಾನು ಸೃಷ್ಟಿಸಿದ ಈ ತಾರತಮ್ಯವನ್ನು ದೇವರ ಮೇಲೆ ಹಾಕಿ ತನ್ನ ಸ್ವಾರ್ಥ ಸಾಧನೆ ಮಾಡಿಕೊಳ್ಳುವುದು ಈಗ ಎಲ್ಲರಿಗೂ ಮನವರಿಕೆಯಾಗಿರುವ ಸಂಗತಿಯೇ ಆಗಿದೆ. ಏಕೆಂದರೆ ದೇವರೇ ಈ ನೀಚೋಚ್ಚ ವ್ಯವಸ್ಥೆ

ಯನ್ನು ಸೃಷ್ಟಿಸಿ ಆಯಾ ವರ್ಣದವರು ಇಂಥಿಂಥ ಕರ್ಮಗಳನ್ನೇ ಮಾಡಿಕೊಂಡು ಮುಂದುವರೆಯಬೇಕೆಂದು ಆದೇಶವಿತ್ತ ಮೇಲೆ, ದೇವರ ಆ ಆದೇಶವನ್ನು ಮೀರುವುದು ಅಷ್ಟು ಸುಲಭವೇ ? ಗುಣಕರ್ಮದ ಆಧಾರದ ಮೇಲೆ ವಿಭಜಿಸಲ್ಪಟ್ಟ ಈ ನಾಲ್ಕು ವರ್ಣಗಳಲ್ಲಿ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಬ್ರಾಹ್ಮಣನ ಸ್ಥಾನ ಅತ್ಯಂತ ಉಚ್ಚಮಟ್ಟದ್ದೂ ಶೂದ್ರನ ಮತ್ತು ಪಂಚಮನ ಸ್ಥಾನ ಅಷ್ಟೇ ಕನಿಷ್ಠಮಟ್ಟದ್ದೂ ಆಗಿತ್ತು. ಕ್ಷತ್ರಿಯ ಪ್ರಭುತ್ವದ ವಾರಸುದಾರನಾಗಿದ್ದು ಆಳುವ ದೊರೆಯಾಗಿದ್ದ. ಅವನಿಗೆ ಶಸ್ತ್ರವಿದ್ಯೆಯ ಜೊತೆಗೆ ಅಕ್ಷರ ಕಲಿಕೆಯ ಅವಕಾಶವೂ ಇತ್ತು. ವೈಶ್ಯನ ಕರ್ಮ ವ್ಯಾಪಾರವಾಗಿತ್ತು. ನಾಲ್ಕು ವರ್ಣಗಳಲ್ಲಿ ಮೊದಲ ಸ್ಥಾನ ಪಡೆದಿದ್ದ ಬ್ರಾಹ್ಮಣ ವಿದ್ಯೆಯ ವಾರಸುದಾರನಾಗಿದ್ದ ; ಧಾರ್ಮಿಕವಾಗಿ ಪೌರೋಹಿತ್ಯದ ಪರಮಾಧಿಕಾರಿಯಾಗಿದ್ದ ಮಾತ್ರವಲ್ಲದೆ ರಾಜನ ಮಂತ್ರಿಯೋ ಸಲಹೆಗಾರನೋ ಆಗಿದ್ದುಕೊಂಡು ರಾಜ್ಯಾಡಳಿತದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ ; ಜನಪರ ಇಲ್ಲವೆ ಜನವಿರೋಧಿಯಾದ ಎಲ್ಲ ಬಗೆಯ ವಿಧಿ-ಶಾಸನಗಳ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದ. ಬರುಬರುತ್ತ ಗುಣಕರ್ಮದ ಮಾತು ಹಿಂದೆ ಸರಿದು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿಯೇ ಒಬ್ಬ ವ್ಯಕ್ತಿ ಶ್ರೇಷ್ಠತೆಯನ್ನು—ಆತ ಎಷ್ಟು ಮೂರ್ಖನಾಗಿದ್ದರೂ ಪಡೆಯುತ್ತಾನೆಂಬ ಅತಿರೇಕಕ್ಕೂ ಈ ತರ್ಕ ಮುಂದು ವರೆಯಿತು. ಒಟ್ಟಿನಲ್ಲಿ ಈ ವಿಭಜನಾ ತಂತ್ರದಿಂದಾಗಿ ಆಂಶಿಕವಾಗಿ ವೈಶ್ಯರು ಸಂಪೂರ್ಣವಾಗಿ ಶೂದ್ರರು ಮತ್ತು ಪಂಚಮರು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ರಾಜಕೀಯ ಹಕ್ಕು ಸವಲತ್ತುಗಳಿಂದ ವಂಚಿತರಾದರೆಂಬುದು ಅತ್ಯಂತ ವಿಷಾದನೀಯ ಸಂಗತಿ. ಋಗ್ವೇದದ ಪುರುಷಸೂಕ್ತದ ಮಾತೊಂದನ್ನು ಇಲ್ಲಿಯೇ ನೋಡುವುದು ವಿಹಿತವೆಂದೂ ತೋರುತ್ತದೆ.

ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹೋ ರಾಜನ್ಯಃ ಕೃತಃ
ಊರೂ ತದಸ್ಯದ್ವೈಶ್ಯ ಪದ್ಭ್ಯಾಗ್ಂ ಶೂದ್ರೋ ಅಜಾಯತ
(ಋಗ್ವೇದ-ಮಂಡಲ—೧೦, ಸೂತ್ರ—೯೦, ಋಕ್ಕು-೧೨)

ಬ್ರಹ್ಮನ ಮುಖದಿಂದ ಬ್ರಾಹ್ಮಣ, ತೋಳುಗಳಿಂದ ಕ್ಷತ್ರಿಯ, ತೊಡೆಗಳಿಂದ ವೈಶ್ಯ ಮತ್ತು ಪಾದಗಳಿಂದ ಶೂದ್ರರು ಜನಿಸಿದರೆಂಬುದು ಇಲ್ಲಿನ ತಾತ್ಪರ್ಯ. ಇಲ್ಲಿಯೂ ಬ್ರಾಹ್ಮಣನ ಸ್ಥಾನ ಮೇಲಿನದಾದರೆ ಶೂದ್ರನ ಸ್ಥಾನ ಕೆಳಸ್ತರದ್ದು ಆಗಿದೆ. ಅಂದರೆ ಬ್ರಾಹ್ಮಣ ಹುಟ್ಟಿನಿಂದಲೇ ಶ್ರೇಷ್ಠ ಮತ್ತು ಮೇಲ್ಮಟ್ಟದವನು, ಶೂದ್ರ ಕನಿಷ್ಠ ಮತ್ತು ಕೆಳಸ್ತರದವನೆಂಬ ಭಾವನೆ ಇಲ್ಲಿ ಸ್ಪಷ್ಟವಾಗಿಯೇ ಕಂಡುಬರುತ್ತದೆ. ಗೀತೆಯಲ್ಲಿ ಹೀಗೆ ಹೇಳಲಾಗಿದೆ,

'ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಮ್' (ಗೀತೆ-೧೮-೪೪)

ಪರಿಚಾರಿಕೆ ಅಂದರೆ ಸೇವಕವೃತ್ತಿ ಶೂದ್ರನಿಗೆ ಸ್ವಭಾವಜನ್ಯವಾದುದು ಎಂಬುದು ಇಲ್ಲಿನ ಅರ್ಥ. ಅಂದರೆ ವ್ಯವಸ್ಥೆಯ ಮುಂಚೂಣಿಯಲ್ಲಿರುವ ಬ್ರಾಹ್ಮಣ ಮತ್ತು ಕ್ಷತ್ರಿಯರ ಸೇವೆ ಮಾಡಿಕೊಂಡಿರುವುದು ಬಹುಸಂಖ್ಯಾತ ಶೂದ್ರ ಜನರ ಕರ್ತವ್ಯವಾಗಿತ್ತು. ದುಡಿಯುವ ವರ್ಗಕ್ಕೆ ಸೇರಿದ ಶ್ರಮಜೀವಿಗಳಾದ ಶೂದ್ರರಿಗೆ ಸ್ವತಂತ್ರವಾದ ಅಸ್ತಿತ್ವ ಇರಲಿಲ್ಲ; ಸಾಮಾಜಿಕ, ಧಾರ್ಮಿಕ ಸ್ಥಾನಮಾನಗಳ ಅವಕಾಶವೂ ಇರಲಿಲ್ಲ. ಮೇಲ್ವರ್ಗದವರ ಆಡಳಿತಾರೂಢರ ಸೇವೆಯನ್ನು ಮಾಡುವುದರಲ್ಲೇ ತಮ್ಮ ಬದುಕಿನ ಸಾರ್ಥಕತೆಯನ್ನು ಶೂದ್ರರು ಕಂಡುಕೊಳ್ಳಬೇಕಾಗಿತ್ತು. ಇದೆ ಅವರ ಬದುಕಿನ ಮುಖ್ಯ ಗುರಿಯಾಗಿತ್ತು. ಅಂತೂ ವೇದೋಪನಿಷತ್ತುಗಳ ಕಾಲದಲ್ಲಿ ಶೂದ್ರರಿಗೆ ಯಾವುದೇ ರೀತಿಯ ಸ್ಥಾನಮಾನಗಳಿರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. 'ಮನುಸ್ಮೃತಿ' ಶೂದ್ರರಿಗೆ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಕ್ಕು ಸವಲತ್ತುಗಳನ್ನು ಕೊಡಕೂಡದೆಂದು ಸ್ಪಷ್ಟವಾಗಿ ಹೇಳಿದ ಗ್ರಂಥ.

> ಶೂದ್ರಂ ತು ಕಾರಯೇದ್ದಾಸಂ ಕ್ರೀತಮ ಕ್ರೀತಮೇವ ವಾ
> ದಾಸ್ಯಾಯೈವ ಹಿ ಸೃಷ್ಟೋऽಸೌಬ್ರಾಹ್ಮಣಸ್ಯ ಸ್ವಯಂಭುದಾ
> (ಮನುಸ್ಮೃತಿ-೮-೪೧೩)

ಶೂದ್ರನು ಕೊಳ್ಳಲ್ಪಟ್ಟವನಾಗಿರಲಿ ಅಥವಾ ಇಲ್ಲದಿರಲಿ ಬ್ರಾಹ್ಮಣನ ಸೇವೆಗಾಗಿಯೇ ಬ್ರಹ್ಮ ಶೂದ್ರನನ್ನು ಸೃಷ್ಟಿಮಾಡಿರುತ್ತಾನೆ. ಅದೇ ಮನುಸ್ಮೃತಿಯಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ :

> ನ ಸ್ವಾಮಿನಾ ನಿಸೃಷ್ಟೋऽಪಿ ಶೂದ್ರೋ ದಾಸ್ಯಾದ್ವಿಮುಚ್ಯತೇ
> ನಿಸರ್ಗಜಂ ಹಿ ತತ್ತಸ್ಯ ಕಸ್ತಸ್ಮಾತ್ತದಪೋಹತಿ (ಅದೇ ೮-೪೧೪)

ಶೂದ್ರನಾದವನು ತನ್ನ ಒಡೆಯನಿಂದ ವಿಮೋಚನೆ ಹೊಂದಿದವನಾದರೂ ದಾಸ್ಯದಿಂದ ಬಿಡುಗಡೆ ಪಡೆದಿರುವುದಿಲ್ಲ. ಯಾಕೆಂದರೆ ದಾಸ್ಯವು ಹುಟ್ಟಿನಿಂದಲೇ ಆವನಿಗೆ ಸಹಜ ಸ್ವಭಾವ ಗುಣವಾಗಿ ಬಂದಿರುವುದರಿಂದ ಅದನ್ನು ಯಾರೂ ತಪ್ಪಿಸಲಾರರು. ಮನುಸ್ಮೃತಿಯ ಮೇಲಿನ ಮಾತುಗಳಿಂದ ಸ್ಪಷ್ಟವಾಗುವುದಿಷ್ಟು : ಶೂದ್ರನು ಕೇವಲ ಬ್ರಾಹ್ಮಣರ ಸೇವೆಗಾಗಿಯೇ ಹುಟ್ಟಿದವನು. ಅವನನ್ನು ಕೊಳ್ಳುವ ವ್ಯವಸ್ಥೆ ಆಗಿನ ಕಾಲದಲ್ಲಿ ಇದ್ದುದರಿಂದ ಆತನನ್ನು ಮೇಲ್ವರ್ಗದ ಶ್ರೀಮಂತರು ಕೊಂಡುಕೊಂಡು ತಮ್ಮ ಗುಲಾಮನನ್ನಾಗಿ ಮಾಡಿಕೊಂಡು ತಮ್ಮ ಸೇವೆಗೆ ಇಟ್ಟುಕೊಳ್ಳುತ್ತಿದ್ದರೆಂಬುದು. ಒಂದು ವೇಳೆ ಒಡೆಯನಿಂದ ಒಬ್ಬ ಶೂದ್ರ ಬಿಡುಗಡೆ ಪಡೆದರೂ ಆತ ದಾಸ್ಯದಿಂದ ಮಾತ್ರ ಬಿಡುಗಡೆ ಹೊಂದಲು ಸಾಧ್ಯವಿರಲಿಲ್ಲ. ಏಕೆಂದರೆ ಆತ ಗುಲಾಮ ಇಲ್ಲವೆ ದಾಸನಾಗಿರುವುದು ಆತನ ಹುಟ್ಟಿನಿಂದಲೇ ಬಂದಿರುವ ಸಹಜ

ಗುಣವಾಗಿರುವ ಕಾರಣಕ್ಕಾಗಿ ಎಂಬ ಕೀಳರಿಮೆಯಯನ್ನು ಬಿತ್ತಿರುವ ಮಾನವ ವಿರೋಧಿ ಕುಟಿಲ ನೀತಿಯನ್ನು ನಾವಿಲ್ಲಿ ಕಾಣುತ್ತೇವೆ. ಶೂದ್ರವನ್ನು ಸರ್ವರೀತಿಯಲ್ಲಿ ನಿಯಂತ್ರಿಸಿ ಆತನನ್ನು ಗುಲಾಮನನ್ನಾಗಿ ಇಟ್ಟುಕೊಂಡ ವ್ಯವಸ್ಥೆಯ ಸಂಚನ್ನು ನಾವಿಲ್ಲಿ ನೋಡುತ್ತೇವೆ. ಇದೇ 'ಮನುಸ್ಮೃತಿ'ಯಲ್ಲಿ 'ವೇದಾಭ್ಯಾಸೋ ಬ್ರಾಹ್ಮಣಸ್ಯ' ಎಂದು ಬ್ರಾಹ್ಮಣನಿಗೆ ಮಾತ್ರ ವೇದಾಭ್ಯಾಸದ ಅಂದರೆ ಅಕ್ಷರ ಕಲಿಕೆಯ ಅಥವಾ ಶಿಕ್ಷಣದ ಅವಕಾಶವನ್ನು ನೀಡಲಾಗಿದೆ. (ರಾಜರಿಗೆ ಮತ್ತು ಅವರ ಮನೆತನದವರಿಗೆ ಮಾತ್ರ ಅಕ್ಷರಜ್ಞಾನದ ಅವಕಾಶ ಇತ್ತೆಂಬುದನ್ನು ಇಲ್ಲಿಯೇ ಸ್ಮರಿಸಬಹುದಾಗಿದೆ) ಆದರೆ ಶೂದ್ರರಿಗೆ ಉಪನಯನ ಸಂಸ್ಕಾರದ ಅವಕಾಶವಿಲ್ಲದ ಕಾರಣ ಅವರಿಗೆ ವೇದಾಭ್ಯಾಸದ ಅಂದರೆ ಅಕ್ಷರ ಕಲಿಕೆಯ ಅವಕಾಶ ಇರಲೇ ಇಲ್ಲ. ಒಂದು ವೇಳೆ ಶೂದ್ರರು ವೇದಾಭ್ಯಾಸ ನಿಷೇಧವನ್ನು ಮೀರಿವರ್ತಿಸಿದರೆ ಅವರ ನಾಲಗೆಯನ್ನು ಕತ್ತರಿಸುವಂಥ ಕಿವಿಯಲ್ಲಿ ಕಾದ ಸೀಸವನ್ನು ಸುರಿಯುವಂಥ ಘೋರ ಶಿಕ್ಷೆಗೊಳಗಾಗುತ್ತಿದ್ದರು. ಇಂಥ ಮಾನವ ವಿರೋಧಿ ವಿಧಿ-ನಿಷೇಧಗಳ ಮೂಲಕ, ಘೋರ ಶಿಕ್ಷೆಗಳ ಮೂಲಕ ಬಹು ಸಂಖ್ಯಾತ ಶೂದ್ರ ಜನಸಮುದಾಯವನ್ನು ಅಕ್ಷರ ಕಲಿಕೆಯಿಂದ, ವಿದ್ಯೆಯಿಂದ ದೂರ ಇಟ್ಟಿದ್ದರ ಸಂಚು ಇಂದು ಯಾರಿಗಾದರೂ ತಿಳಿಯುವಂಥದ್ದೇ ಆಗಿದೆ. ಸ್ತ್ರೀಯರನ್ನೂ ಧಾರ್ಮಿಕ, ಶೈಕ್ಷಣಿಕ ಸವಲತ್ತುಗಳಿಂದ ದೂರ ಇಟ್ಟದ್ದು ಇದೇ ಹಿನ್ನೆಲೆಯಿಂದ ಎಂಬುದನ್ನು ಗಮನಿಸಬೇಕಾದ ಸಂಗತಿ.

ಒಟ್ಟಿನಲ್ಲಿ ಬಸವಪೂರ್ವ ಯುಗದಲ್ಲಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರದ ಹಕ್ಕು ಸವಲತ್ತುಗಳು ಕೇವಲ ಮೇಲ್ವರ್ಗದ ಮತ್ತು ಆಡಳಿತಾರೂಢ ಜನರಿಗೆ ಮಾತ್ರ ಮೀಸಲಾಗಿದ್ದು, ಕೆಳವರ್ಗದ ಬಹುಸಂಖ್ಯಾತ ಶೂದ್ರರಿಗೆ ಮತ್ತು ಮಹಿಳೆಯರಿಗೆ ಯಾವುದೇ ರೀತಿಯ ಸ್ವಾತಂತ್ರ್ಯ, ಸವಲತ್ತುಗಳಿಲ್ಲದ ಅಸಮಾನತೆಯ ಸಾಮಾಜಿಕ ಸಂದರ್ಭ ಸೃಷ್ಟಿಯಾಗಿತ್ತೆಂಬುದು ಚರಿತ್ರೆಯಿಂದ ತಿಳಿದುಬರುವ ಸಂಗತಿ. ಅಲ್ಲದೆ ಜನಸಮುದಾಯದಲ್ಲಿ ಬೇರುಬಿಟ್ಟಿದ್ದ ಅಜ್ಞಾನ, ಅಂಧಶ್ರದ್ಧೆ, ಮೂಢ ನಂಬಿಕೆಗಳಿಂದ ಸಾಮಾಜಿಕ ಆರೋಗ್ಯ ಹದಗೆಟ್ಟಿತ್ತು. ಈ ಸಂದರ್ಭದಲ್ಲಿ ವೈದಿಕ ಧರ್ಮದ ಈ ಜನವಿರೋಧಿ ನೀತಿ-ಸಂಹಿತೆಗಳಿಗೆ ಉತ್ತರವೆಂಬಂತೆ ಜೈನಧರ್ಮ ಮತ್ತು ಬೌದ್ಧಧರ್ಮಗಳು ಜನಿಸಿ ಜನಸಾಮಾನ್ಯರನ್ನು ತಮ್ಮತ್ತ ಸೆಳೆದುಕೊಳ್ಳಲು, ಅವರ ಜೀವನದಲ್ಲಿ ಬದಲಾವಣೆ ತರಲು ಪ್ರಯತ್ನಿಸಿದ್ದು ಈಗ ಇತಿಹಾಸವಾಗಿದೆ. ಜೈನ, ಬೌದ್ಧಧರ್ಮಗಳು ಅಹಿಂಸಾ ಪರಿಕಲ್ಪನೆಯ ಮೂಲಕ ಉದಾರವಾದದ ಹಿನ್ನೆಲೆಯಿಂದ ಜನಸಮುದಾಯವನ್ನು ತಲುಪಲು ಸಾಕಷ್ಟು ಪ್ರಯತ್ನ ಮಾಡಿದರೂ ನಿರೀಕ್ಷಿತ ಯಶಸ್ಸುಕಾಣಲಿಲ್ಲ. ಕರ್ಮಸಿದ್ಧಾಂತವನ್ನು ದೂರಸರಿಸಿ ಮಾನವೀಯ ನೆಲೆಯಮೇಲೆ ಕಟ್ಟಲ್ಪಟ್ಟ, ವೈಜ್ಞಾನಿಕ ಮನೋಧರ್ಮದ, ಜನಪರ ಕಾಳಜಿಯ ಬೌದ್ಧಧರ್ಮ ಈ ದೇಶದಲ್ಲಿ ನೆಲೆಯೂರಲು ಸಾಧ್ಯವಾಗದೆ ಹೋದದ್ದು ದೊಡ್ಡ ದುರಂತವೇ ಹೌದು. ಜೈನ ಬೌದ್ಧ ಧರ್ಮಗಳ ಹಿನ್ನಡೆಗೆ ಆಗಿನ ಕಾಲದಲ್ಲಿ ರಾಜಾಶ್ರಯದ ಮೂಲಕ

ಪ್ರಭಾವಿಧರ್ಮವಾಗಿ ರೂಪುಗೊಂಡಿದ್ದ ವೈದಿಕಧರ್ಮದ ಚಾಣಕ್ಷತನವೇ ಕಾರಣ ವೆನ್ನಬೇಕು.

ವೈದಿಕ ಧರ್ಮದಲ್ಲಿ ಜನಿಸಿದ ಬಸವಣ್ಣನವರಿಗೆ ಆ ಧರ್ಮದ ಜನವಿರೋಧಿ ರೀತಿ–ನೀತಿಗಳು ಬಹುಬೇಗನೇ ಅರ್ಥವಾದವು. ಅವರ ಮಾನವ ಪ್ರೀತಿ ಜಾಗೃತ ಗೊಂಡ ಫಲವಾಗಿ ಜನಹಿತ ಕಡೆಗಣಿಸಿದ ವೈದಿಕಧರ್ಮವನ್ನು ತೊರೆದು, ಸರ್ವಜನ ಸಮುದಾಯದ ಏಳ್ಗೆಯನ್ನು ಸಾಧಿಸುವಂಥ ವಿಶ್ವಮಾನವ ತತ್ವಗಳ ಸಾರವಾದ 'ವೀರಶೈವ' ಧರ್ಮವನ್ನು ಸ್ಥಾಪಿಸಲು ಅವರಿಂದ ಸಾಧ್ಯವಾಯಿತು. ಬಸವಣ್ಣ ನವರಿಗಿಂತ ಮುಂಚೆ ಸುಮಾರು 8-9ನೇ ಶತಮಾನಗಳಲ್ಲಿ ತ್ರಿಷಷ್ಟಿಪುರಾತನರ ನಾಯನಾರ್ ಪಂಥ ಸ್ಥಾಪಿತವಾಗಿ ಭಾರತದ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಮೊದಲ ಬಾರಿಗೆ ಸಮಾನತೆಯನ್ನು ತರಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದು ಇಲ್ಲಿ ಉಲ್ಲೇಖನಾರ್ಹವಾಗಿದೆ. ನಾಯನಾರ್ ಪಂಥದ ಜಾತ್ಯಾತೀತ ನಿಲುವು ಅಂದಿನ ಸಮಾಜದ ಅನೇಕರಿಗೆ ಒಪ್ಪಿಗೆಯಾಗಿತ್ತೆಂದು ತೋರುತ್ತದೆ. ಈ ನಾಯನಾರ್ ಪಂಥದ ಕೆಲವು ಅಪ್ಪಟ ವಿಚಾರವಾದಿಗಳು ಸಂಪ್ರದಾಯವನ್ನು ಧಿಕ್ಕರಿಸಿ ಮಾನವೀಯ ಮೌಲ್ಯದ ಜಾತ್ಯಾತೀತ ಸಮಾಜ ರಚನೆಯ ಸದುದ್ದೇಶದಿಂದ ವೈಷ್ಣವ ಮತದ ನಿಲುವುಗಳ ವಿರುದ್ಧ ಹೋರಾಟ ನಡೆಸಿದರು. ಈ ನಾಯನಾರ್ ಪಂಥದವರಲ್ಲದೆ ಬಸವಣ್ಣನವರಿಗೆ ತೀರ ಹತ್ತಿರದ ಪೂರ್ವಿಕರಾದ ಮಾದಾರ ಚೆನ್ನಯ್ಯ, ಡೋಹಾರ ಕಕ್ಕಯ್ಯ, ದೇವರ ದಾಸಿಮಯ್ಯ, ಶಂಕರ ದಾಸಿಮಯ್ಯ, ಕೊಂಡುಗುಳಿ ಕೇಶಿರಾಜ, ಕೆಂಭಾವಿ ಭೋಗಯ್ಯ–ಮುಂತಾದ ಶರಣರ ಜಾತ್ಯಾತೀತ ಮತಾತೀತ ಹೋರಾಟದ ಕಾವು ಮತ್ತು ಸಮಾನತಾ ನಿಲುವು ಬಸವಣ್ಣನವರ ಶರಣ ಪಂಥದ ಆಂದೋಲನಕ್ಕೆ ಪ್ರೇರಣೆ ನೀಡಿತೆನ್ನಬಹುದು.

ಬಸವಣ್ಣನವರು ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿನ ಅಸಮಾನತೆಯನ್ನು ಹೋಗಲಾಡಿಸಲು ಅತ್ಯಂತ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾರೆ; ಅದರಲ್ಲಿ ಬಹುಮಟ್ಟಿಗೆ ಯಶಸ್ಸನ್ನು ಗಳಿಸುತ್ತಾರೆ. ಬ್ರಾಹ್ಮಣ ಆದಿಯಾಗಿ ಪಂಚಮನವರೆಗೆ ಎಲ್ಲ ಜಾತಿ, ಮತ, ಕುಲದವರು ಬಸವಣ್ಣನವರು ಕಟ್ಟಿದ ಹೊಸ 'ವೀರಶೈವ' ಧರ್ಮ ದಲ್ಲಿ ಸೇರುವಂಥ ಅವಕಾಶ ಪಡೆಯುವುದರ ಮೂಲಕ ಸಮಾನತೆಯ ಚೌಕಟ್ಟಿಗೆ ಒಳಗಾಗುತ್ತಾರೆ; ಜಾತಿ-ಮತ-ಕುಲ ತೊರೆದ ನಿಜವಾದ ಮಾನವರಾಗುತ್ತಾರೆ; ಶರಣರಾಗುತ್ತಾರೆ. ಈ ಸಮಾನತೆಯ ಪರಿಕಲ್ಪನೆ ಪವಾಡ ಸದೃಶ ರೀತಿಯಲ್ಲಿ ಆಗಿನ ಎಲ್ಲರ ಹೃನ್ಮನಗಳಲ್ಲಿ ಚೈತನ್ಯಶೀಲ ಜೀವತಂತುವಾಗಿ ಸಂಚರಿಸುತ್ತದೆ. ಇದು ಬಸವಣ್ಣ ನವರ ದೊಡ್ಡ ಸಾಧನೆ ಎಂದು ಹೇಳಬೇಕು. ಜಾತಿವಿನಾಶವಲ್ಲದೆ,ಸ್ತ್ರೀ ಸಮಾನತೆ, ಅಂತರಂಗ ಬಹಿರಂಗಶುದ್ಧಿ, ಕಾಯಕನಿಷ್ಠೆ, ವರ್ಗ ಪ್ರಜ್ಞೆ —ಮುಂತಾದ ಜರೂರಿನ ವಿಷಯಗಳತ್ತ ಗಮನ ಹರಿಸಿದ್ದು ಬಸವಣ್ಣ ಮತ್ತು ಅವರ ಸಮಕಾಲೀನ ಶರಣ-ಶರಣೆಯರ ಜನಪರ ಕಾಳಜಿ ಮತ್ತು ಮಾನವ ಪ್ರೀತಿಯನ್ನುಎತ್ತಿ ತೋರಿಸುತ್ತದೆ.

ಪ್ರಸ್ತುತ ಬಸವಣ್ಣನವರ ವಚನಗಳ ಮೂಲಕ ಅವರ ಜಾತಿವಿನಾಶದ ಪರಿಕಲ್ಪನೆಯನ್ನು ಕುರಿತು ಚರ್ಚಿಸಬಹುದು.

ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ,
ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ,
ಕೂಡಲಸಂಗಮದೇವ
ನಿಮ್ಮ ಮನೆಯ ಮಗನೆಂದೆನಿಸಯ್ಯ.
(ಸಮಗ್ರ ವಚನ ಸಂಪುಟ, ಬಸವಣ್ಣನವರ ವಚನ ಸಂಪುಟ-೧ ವ-೬೨-ಪು-೧೮)

ಬಸವಣ್ಣನವರು ಸಮಾಜದ ಉಚ್ಚವರ್ಗದಲ್ಲಿ ಜನಿಸಿದವರು. ಆಗಿನ ಕಾಲದಲ್ಲಿ ಉಚ್ಚವರ್ಗದವರು ಸಾಮಾಜಿಕವಾಗಿ ಕೆಳಸ್ತರದಲ್ಲಿದ್ದ ವ್ಯಕ್ತಿಗಳನ್ನು ಸಮಾನವಾಗಿ ಕಾಣದೆ ಕೀಳಾಗಿ ಕಾಣುತ್ತಿದ್ದುದು ಸರ್ವೇಸಾಮಾನ್ಯವಾಗಿತ್ತು. ಆದರೆ ಹೊಸ ಚಿಂತನೆಯ, ಮಾನವ ಪ್ರೀತಿಯ ಆಕರವಾದ ಸದ್ಗುಣಸಂಪನ್ನರಾದ ಬಸವಣ್ಣನವರಿಗೆ ಸಮಾಜದ ಕೆಳಸ್ತರದ ಜನರನ್ನು ಕೀಳಾಗಿ ಕಾಣುವ ಸಣ್ಣತನ ಎಂದೂ ಇರಲಿಲ್ಲ. ಈ ನೀಚೋಚ್ಚ ಭಾವನೆ ವೈದಿಕ ಧರ್ಮದ ಕೊಡುಗೆಯಾದರೂ ಬಸವಣ್ಣನವರು ಅದನ್ನು ಮೀರಿ ಎಲ್ಲ ಮಾನವ ಸಮುದಾಯವನ್ನು ಸಮಾನ ಪ್ರೀತಿಗೌರವಗಳಿಂದ ಕಾಣುವ ನಿಜವಾದ ಮನುಷ್ಯರಾಗಿದ್ದರು. ಆದ್ದರಿಂದ ಮೇಲಿನ ವಚನದಲ್ಲಿನಂತೆ ವೈದಿಕ ಧರ್ಮದ ಬಳುವಳಿಯಾದ ನೀಚೋಚ್ಚ ಭಾವನೆಯನ್ನು ನಿರಾಕರಿಸಿದ ಬಸವಣ್ಣ ಎಲ್ಲ ಜನರೂ ನಮ್ಮವರೇ ಎಂದೆನಿಸುವ ಸಮಾನ ಪ್ರೀತಿಯ ಸಹೋದರ ಭಾವನೆಯನ್ನು ದಯಪಾಲಿಸು ಎಂದು ತನ್ನಿಷ್ಟ ದೇವತೆಯಲ್ಲಿ ಕೇಳಿದ್ದಾರೆ. ಅಂದರೆ ಬಸವಣ್ಣನವರಿಗೆ ಆ ರೀತಿಯ ಸಮಾನತಾ ಭಾವನೆ ಇಲ್ಲದ ಕಾರಣ ಅವರು ದೇವರಲ್ಲಿ ಅದನ್ನು ಕೇಳುತ್ತಿದ್ದಾರೆಂಬ ಅಭಿಪ್ರಾಯವಲ್ಲ. ಮೂಲತಃ ಮಾನವ ಪ್ರೇಮಿಯಾದ ಬಸವಣ್ಣನವರಿಗೆ ಸಮಾನತಾಭಾವ ಸ್ಥಾಯೀಯಾದದ್ದೇ. ಇಲ್ಲಿ ಅವರ ವಿನಯವನ್ನು ಕಾಣುವುದರ ಜೊತೆಗೆ ಸಮಾಜದ ಬೇರೆ ಜನರು ನೀಚೋಚ್ಚ ಭಾವನೆ ಇಟ್ಟುಕೊಳ್ಳದೆ ಎಲ್ಲರನ್ನೂ ಸಮಾನವಾಗಿ ಕಾಣಬೇಕೆಂಬ ಆಶಯವೂ ಇಲ್ಲಿದೆ. ಒಟ್ಟಿನಲ್ಲಿ ಇಲ್ಲಿ ಜಾತಿನಿರಾಕರಣೆ ಅಥವಾ ಜಾತಿವಿನಾಶಪರಿಕಲ್ಪನೆ ಸ್ಪಷ್ಟವಾಗಿಯೇ ಗೋಚರಿಸುತ್ತದೆ.

ಈ ವಚನಕ್ಕೆ ಇನ್ನೊಂದು ನೆಲೆಯಿಂದ ಅರ್ಥ ಹಚ್ಚುವ ಪ್ರಯತ್ನ ಕೂಡಾ ಇದೆ. 'ಇವನಾರವ' ಎಂಬುದನ್ನು 'ಇವನು ಹಾರವ' ಎಂದು ಅರ್ಥೈಸುವ ಪರಿಪಾಠವೂ ಇದ್ದು, ಬಸವಣ್ಣನವರು ಪ್ರತಿಷ್ಠಿತ 'ಹಾರವ' ಜಾತಿಗೆ ಸೇರಿದವರಾದ್ದ ರಿಂದ ಅವರನ್ನು ಲೋಕದ ಜನತೆ ತಮ್ಮವನೆಂದು ಸ್ವೀಕರಿಸದೆ, ದೂರವಿಡುವ ಸಾಧ್ಯತೆ ಇರುವುದರಿಂದ ಲೋಕದ ಜನತೆ ಹಾಗೆ ಮಾಡದಿರಲೆಂಬ ಬೇಡಿಕೆ ಬಸವಣ್ಣನವರದಾಗಿದೆ

ಎಂದು ತಿಳಿಯಲಾಗಿದೆ. ಆದರೆ ಮೇಲಿನಂತೆ ಜಾತಿವಿನಾಶದ ಪರಿಕಲ್ಪನೆಯ ನೆಲೆಯಲ್ಲಿ ಈ ವಚನಕ್ಕೆ ವ್ಯಾಖ್ಯಾನ ಮಾಡುವುದು ಸೂಕ್ತವೆನಿಸುತ್ತದೆ.

> ಹೊಲೆಯ ಹೊಲಬಿಗನಾದಡೆ
> ಅವನ ಹೊರೆಯಲಿಪ್ಪುದು ಲೇಸು ಕಂಡಯ್ಯಾ
> ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯಾ
> ಹೊಲಬುಗೆಡಬೇಡ, ಶಿವಶರಣೆನ್ನಿರಯ್ಯಾ
> ನಮ್ಮ ಕೂಡಲಸಂಗನ ಮಹಾಮನೆಯಲು
> ಮಾದಾರ ಚೆನ್ನಯ್ಯ ಹೊಲಬಿಗನಯ್ಯಾ (ಅದೇ. ವ-೧೩೫, ಪು-೩೬)

ಇಲ್ಲಿ ಬಸವಣ್ಣನವರು ಶ್ರೇಣಿಕೃತ ಸಮಾಜದಲ್ಲಿ ಮನುಷ್ಯನ ಯೋಗ್ಯತೆಯನ್ನು ಮತ್ತು ಶ್ರೇಷ್ಠತೆಯನ್ನು ಜಾತಿಯ ಆಧಾರದ ಮೇಲೆ ಅಳೆಯದೆಯೆ ಅವನ ಆಚಾರ ವಿಚಾರಗಳಿಂದ ಕೂಡಿದ ವ್ಯಕ್ತಿತ್ವದ ಮೇಲೆ ಅಳೆಯಬೇಕೆಂದು ಸೂಚಿಸುತ್ತಿದ್ದಾರೆ ಒಬ್ಬ ವ್ಯಕ್ತಿ ಹುಟ್ಟಿನಿಂದ ಸಣ್ಣ ಜಾತಿಯವನಾದರೂ ಅವನ ನಡೆ–ನುಡಿಗಳು ಉನ್ನತ ಮಟ್ಟದಲ್ಲಿದ್ದರೆ ಅವನು ದೊಡ್ಡವ ಮತ್ತು ಉತ್ತಮ ಕುಲದವ. ಒಂದು ವೇಳೆ ಒಬ್ಬ ವ್ಯಕ್ತಿ ದೊಡ್ಡ ಜಾತಿಯವನಾದರೂ ನಡತೆ ಕೀಳಾಗಿದ್ದರೆ, ವ್ಯಕ್ತಿತ್ವ ಹದಗೆಟ್ಟಿದ್ದರೆ ಆತ ಸಣ್ಣವನೆಂದು ಭಾವಿಸಬೇಕೆಂಬ ಅರ್ಥ ಇಲ್ಲಿದೆ. ಆದ್ದರಿಂದ ಯಾವುದೇ ವ್ಯಕ್ತಿಯ ಬೆಲೆ ನಿರ್ಧಾರಿತವಾಗುವುದು ಜಾತಿಯ ಆಧಾರದ ಮೇಲಿನಿಂದಲ್ಲ ಎಂಬುದು ಇಲ್ಲಿನ ಮುಖ್ಯ ಆಶಯ. ತಮ್ಮ ಅಭಿಪ್ರಾಯಕ್ಕೆ ಪೂರಕವಾಗಿ ತಮ್ಮ ಪೂರ್ವದ ಶರಣನಾದ ಮಾದಾರ ಚೆನ್ನಯ್ಯನ ಜ್ಞಾನ ಜಂಗಮ ವ್ಯಕ್ತಿತ್ವವನ್ನು ಇಟ್ಟು ಕೊಂಡಿದ್ದಾರೆ. ಚೋಳರಾಜನ ಅರಮನೆಯ ಭಕ್ಷ್ಯಭೋಜ್ಯವನ್ನು ಸ್ವೀಕರಿಸದ ಶಿವ ಆತನ ಊಳಿಗದವನಾದ, ಜಾತಿಯಲ್ಲಿ ಮಾದಾರನಾದ ಚೆನ್ನಯ್ಯನ ಗುಡಿಸಲಿನ ಅಂಬಲಿಯನ್ನು ಸ್ವೀಕರಿಸುತ್ತಾನೆ. ಈ ವಿಷಯ ತಿಳಿದ ಚೋಳರಾಜ, ಚೆನ್ನಯ್ಯನ ಕಾಲಿಗೆ ಬಿದ್ದು, ಜ್ಞಾನಮಾರ್ಗವನ್ನು ತಿಳಿದು ಶಿವಕೃಪೆಗೆ ಪಾತ್ರನಾಗುತ್ತಾನೆ. ಹೀಗೆ ನಡತೆ ಮತ್ತು ಸಾಧನೆಯಿಂದ ವ್ಯಕ್ತಿದೊಡ್ಡವನಾಗುತ್ತಾನೆಯೇ ಹೊರತು ಜಾತಿ ಯಿಂದಲ್ಲವೆಂಬ ಸತ್ಯವನ್ನು ಇಲ್ಲಿ ಬೆಳಕಿಗೆ ಹಿಡಿಯಲಾಗಿದೆ.

> ಚೆನ್ನಯ್ಯನ ಮನೆಯ ದಾಸನ ಮಗನು
> ಕಕ್ಕಯ್ಯನ ಮನೆಯ ದಾಸಿಯ ಮಗಳು
> ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ, ಸಂಗವ ಮಾಡಿದರು
> ಇವರಿಬ್ಬರಿಗೆ ಹುಟ್ಟಿದ ಮಗ ನಾನು
> ಕೂಡಲ ಸಂಗಮದೇವ ಸಾಕ್ಷಿಯಾಗಿ (ಅದೇ. ವ–೩೪೬, ಪು-೮೩)

ಇಲ್ಲಿ ಬಸವಣ್ಣನವರು ತಮ್ಮ ಪೂರ್ವಿಕರಾದ ಜಾತಿಯಲ್ಲಿ ಕೀಳಾದ ಶರಣ ಮಾದಾರ ಚೆನ್ನಯ್ಯ ಮತ್ತು ಡೋಹರಕಕ್ಕಯ್ಯನವರಲ್ಲಿ ತಮ್ಮ ಅಸ್ತಿತ್ವವನ್ನು ಗುರುತಿಸಿ

ಕೊಳ್ಳುವುದರ ಮೂಲಕ ಸ್ಪಷ್ಟವಾಗಿ ಜಾತಿ ನಿರಾಕರಣೆ ಮಾಡಿರುವುದನ್ನು ನೋಡು ತ್ತೇವೆ. ಬಸವಣ್ಣನವರ ಜಾತ್ಯಾತೀತ ಮನೋಭಾವದ ದೊಡ್ಡವ್ಯಕ್ತಿತ್ವ ಇಲ್ಲಿ ನಿಚ್ಚಳವಾಗಿ ಕಾಣಿಸಿಕೊಳ್ಳುತ್ತದೆ. ಬಹುಶಃ ಆಗಿನ ಸಂಕ್ರಮಣ ಸಂದರ್ಭದಲ್ಲಿ ಜಾತಿಯಲ್ಲಿ ಶ್ರೇಷ್ಠರೆಂದು ಕರೆಯಿಸಿಕೊಳ್ಳುತ್ತಿದ್ದವರು ಕೆಳಜಾತಿಯವರನ್ನು ಕೀಳಾಗಿ ಕಾಣುತ್ತಿದ್ದುದರ ಕಾರಣದಿಂದಾಗಿ ಬಸವಣ್ಣ ಈ ರೀತಿಯಾಗಿ ತನ್ನ ಜಾತಿಶ್ರೇಷ್ಠತೆಯನ್ನು ನಿರಾಕರಿಸುವುದರ ಮೂಲಕವಾಗಿ ಮಾರ್ಮಿಕ ಉತ್ತರ ನೀಡಿರಬಹುದೆಂದು ತೋರುತ್ತದೆ.

(೧) ಸೆಟ್ಟಿಯೆಂದೆನೆ ಸಿರಿಯಾಳನ ?
ಮಡಿವಾಳನೆಂಬೆನೆ ಮಾಚಯ್ಯನ ?
ಡೋಹರನೆಂಬೆನೆ ಕಕ್ಕಯ್ಯನ ?
ಮಾದಾರನೆಂಬೆನೆ ಚನ್ನಯ್ಯನ ?
ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ (ಅದೇ-ವ-೩೪೫, ಪು-೮೩)

(೨) ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ
ದಾಸಯ್ಯ ಶಿವದಾನವನೆರೆಯ ನೋಡಯ್ಯಾ
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ
ಉನ್ನತ ಮಹಿಮ
ಕೂಡಲಸಂಗಮದೇವಾ, ಶಿವಧೋ ಶಿವಧೋ ! (ಅದೇ-ವ-೩೪೪ ಪು-೮೩)

ಮೇಲಿನ ವಚನಗಳಲ್ಲಿ ಜಾತಿ ಮತ್ತು ಜಾತಿ ವ್ಯವಸ್ಥೆಯನ್ನು ನಿರಾಕರಿಸುವ ವೈಚಾರಿಕ ನಿಲುವನ್ನು ನೋಡುತ್ತೇವೆ. ಸಿರಿಯಾಳ ಶೆಟ್ಟಿ, ಮಡಿವಾಳ ಮಾಚಯ್ಯ, ಡೋಹರಕಕ್ಕಯ್ಯ, ಮಾದಾರಚೆನ್ನಯ್ಯ—ಇವರು ತಮ್ಮ ತಮ್ಮ ಕಾಯಕ ನಿಷ್ಠೆಯ ಮೂಲಕ ಸಮಾಜ ಸೇವೆ ಮಾಡಿ ಬದುಕನ್ನು ಸಾರ್ಥಕ ಪಡಿಸಿಕೊಂಡ ಶರಣರು. ಇಂಥ ಶರಣರನ್ನು ಜಾತಿ ಆಧಾರದ ಮೇಲೆ ಕೀಳಾಗಿ ಕಂಡು, ನಾನು ಹಾರುವನೆಂದುಕೊಂಡು ಬೀಗಿದರೆ ಕೂಡಲಸಂಗಯ್ಯ ನಗುವನೆಂದು ಬಸವಣ್ಣ 'ಜಾತಿ ಶ್ರೇಷ್ಠತೆ'ಯನ್ನು ಅಲ್ಲಗಳೆದು ಇಡೀ ಜಾತಿ ವ್ಯವಸ್ಥೆಯನ್ನು ನಿರಾಕರಿಸುತ್ತಿದ್ದಾನೆ. ಮಾಡುವ ಕಾರ್ಯ ಯಾವುದಿದ್ದರೂ ಅದನ್ನು ಅರ್ಪಣಾ ಮನೋಭಾವದಿಂದ, ಸೇವಾನಿಷ್ಠೆಯಿಂದ ಮಾಡಿದರೆ ಅದುವೇ ಪರಮ ಶ್ರೇಷ್ಠವೆಂಬ ನಿಲುವು ಬಸವಣ್ಣನವರದು. ವೃತ್ತಿಗಳ ಆಧಾರದ ಮೇಲೆ ಜಾತಿ ನಿರ್ಮಿಸಿ ನೀಚೋಚ್ಚ ಭಾವನೆಗೆ ಅವಕಾಶ ನೀಡುವುದು ಅವೈಜ್ಞಾನಿಕ ಮತ್ತು ಸಮಾಜದ

ಹಿತಕ್ಕೆ ಮಾರಕ ಎಂಬ ಆರೋಗ್ಯಕರ ನಿಲವು ಬಸವಣ್ಣನವರದು. ಆದ್ದರಿಂದ ಅವರು ತಾವು ಉತ್ತಮ ಕುಲದವರೆಂಬ ಉಚ್ಚಾನುಸಂಧಾನವನ್ನು ಮತ್ತೆ ಮತ್ತೆ ನಿರಾಕರಿಸುವ ಹಂಬಲವನ್ನು ತೋರುತ್ತಾರೆ.

ಅಪ್ಪನು ಡೋಹರ ಕಕ್ಕಯ್ಯನಾಗಿ
ಮುತ್ತಯ್ಯ ಚೆನ್ನಯ್ಯನಾದರೆ ಆನು ಬದುಕನೆ ?
ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ
ಭಕ್ತಿಯ ಸದ್‌ಗುಣವ ನಾನು ಅರಿವೆನಯ್ಯಾ
ಕಷ್ಟ ಜಾತಿ ಜನ್ಮದಲಿ ಜನಿಯಿಸಿದೆ ಎನ್ನ
ಎನಗಿದು ವಿಧಿಯು ಕೂಡಲ ಸಂಗಮ ದೇವಾ ? (ಅದೇ-ವ-೩೪೩, ಪು-೮೩)

ಈ ವಚನದಲ್ಲಿ ಕೆಳಜಾತಿಯ ಶರಣರಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುವುದರ ಮೂಲಕ ಜಾತಿ ವ್ಯವಸ್ಥೆಯನ್ನು ನಿರಾಕರಿಸುವ ಬಸವಣ್ಣನವರ ವೈಚಾರಿಕ ನಿಲುವನ್ನು ನೋಡಬಹುದಾಗಿದೆ. ಜಾತಿ, ಮತ, ಕುಲ ಭೇದಗಳಿಂದ ಮುಕ್ತವಾದ, ಸರ್ವಸಮಾನತೆಯ ಧೋರಣೆಯನ್ನು ಹೊಂದಿದ, ಸರ್ವೋದಯ ಪರಿಕಲ್ಪನೆಯ ನವಸಮಾಜವನ್ನು ಕಟ್ಟುವ ಸ್ಪಷ್ಟ ನಿಲುವು ಹೊಂದಿದ್ದ ಬಸವಣ್ಣ ತಮ್ಮ ವಚನಗಳಲ್ಲಿ ಮತ್ತೆ ಮತ್ತೆ ಜಾತಿ ನಿರಾಕರಣೆ ಮತ್ತು ಜಾತಿ ವ್ಯವಸ್ಥೆಯ ನಿರ್ಮೂಲನೆಯ ಬಗ್ಗೆ ಮಾತನಾಡುತ್ತಾರೆ.

ಮೇಲಾಗಲೊಲ್ಲೆನು ಕೀಳಾಗಲಲ್ಲದೆ
ಕೀಳಿಂಗಲ್ಲದೆ ಹಯನು ಕರೆವುದೆ ?
ಮೇಲಾಗಿ ನರಕದಲೋಲಾಡಲಾರೆನು
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು
ಮಹಾದಾನಿ ಕೂಡಲಸಂಗಮದೇವ (ಅದೇ. ವ-೩೬೦, ಪು-೮೬)

ಇಲ್ಲಿ ಜಾತಿ ಆಧಾರಿತ ನೀಚೋಚ್ಚ ಭಾವನೆಯ ನಿರಾಕರಣೆ ಇದೆ. ಅಲ್ಲದೆ ಬಸವಣ್ಣನವರ ವಿನಯಸಂಪನ್ನತೆಯೂ ಇಲ್ಲಿ ಸ್ಪಷ್ಟವಾಗುತ್ತದೆ. 'ಕೀಳಾಗದೆ ಮೇಲಾಗಲು' ಸಾಧ್ಯವಿಲ್ಲವೆಂಬ ಭಾವ ಸ್ವೀಕಾರಯೋಗ್ಯವಾಗಿದೆ. ಸಮಾಜದ ಸಣ್ಣ-ಪುಟ್ಟ ವೃತ್ತಿಗಳನ್ನು, ವೃತ್ತಿನಿರತರನ್ನು ಗೌರವದಿಂದ ಕಂಡಾಗಲೇ ಮನುಷ್ಯನಿಗೆ ಘನತೆ ಗೌರವ ಪ್ರಾಪ್ತವಾಗುತ್ತದೆಂಬ ಅಂಶ ಇಲ್ಲಿರುವುದು ಬಹಳ ಮುಖ್ಯ. ಇಲ್ಲಿ ಬಸವಣ್ಣ ತಮ್ಮ ಮತ್ತು ಶರಣರ ಸಂಬಂಧವನ್ನು ಕರು—ಹಸುವಿನ ಸಂಬಂಧಕ್ಕೆ ಹೋಲಿಸಿಕೊಂಡಿರುವುದು ಔಚಿತ್ಯಪೂರ್ಣವಾಗಿದೆ. ಹಸುವಿನ ಹಾಲು ಕರುವಿಗೆ ದೊರಕಬೇಕಾದರೆ ಹಸುವಿನ ಹಾಲುಭರಿತ ಕೆಚ್ಚಲು ಕರುವಿಗೆ ಎಟಕುವಷ್ಟು ಕರು ಕೀಳಾಗಿರಬೇಕು;

ಚಿಕ್ಕದಾಗಿರಬೇಕು. ಒಂದು ವೇಳೆ ಕರು ದೊಡ್ಡದಾದರೆ ಅದಕ್ಕೆ ಹಾಲು ಸಿಗುವುದಿಲ್ಲ. ಇಲ್ಲಿ ಬಸವಣ್ಣನವರು ತಾವು ಕರುವಾಗಿದ್ದುಕೊಂಡು ಮೇಲೆ ಉಲ್ಲೇಖಿಸಿದಂಥ ಶರಣರ ಕೃಪಾಮೃತವನ್ನು ಪಡೆಯಲು ತವಕಿಸುತ್ತಿರುವುದು, 'ಮೇಲಾಗಿ ನರಕದಲ್ಲೋಲಾಡಲಾರೆನು' ಎಂದು ನುಡಿಯುವುದು ಅವರ ವಿನಯೋನ್ನತಿಯನ್ನು ಸಾದರಪಡಿಸುತ್ತದೆ.

ವ್ಯಾಸ ಬೋವಿತಿಯ ಮಗ ಮಾರ್ಕಂಡೇಯ ಮಾತಂಗಿಯ ಮಗ
ಮಂಡೋದರಿ ಕಪ್ಪೆಯ ಮಗಳು
ಕುಲವನರಸದಿರಿಂಭೋ! ಕುಲದಿಂದ ಮುನ್ನೇನಾದಿರಿಂಭೋ
ಸಾಕ್ಷಾತ್ ಅಗಸ್ತ್ಯ ಕಬ್ಬಿಲ ದುರ್ವಾಸ ಮುಚ್ಚಿಗ ಕಶ್ಯಪ ಕಮ್ಮಾರ
ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾವಿದ ಕಾಣ ಭೋ!
ನಮ್ಮ ಕೂಡಲಸಂಗನ ವಚನವಿಂತೆಂದುದು :
ಶ್ವಪಚೋಪಿಯಾದಡೇನು ಶಿವಭಕ್ತನೆ ಕುಲಜಂ ಭೋ! (ಅದೇ. ವ-೫೮೯, ಪು. ೧೫೩)

ಮಹಾಭಾರತ, ಭಗವದ್ಗೀತೆ, ಅಷ್ಟಾದಶ ಪುರಾಣಗಳನ್ನೂ ಬರೆದವನಾದ ವ್ಯಾಸ ಹುಟ್ಟಿದ್ದು ಬೆಸ್ತರ ಜಾತಿಯ ಸತ್ಯವತಿಯ ಹೊಟ್ಟೆಯಲ್ಲಿ; ಮಹಾಜ್ಞಾನಿಯೂ ಶಿವಭಕ್ತನೂ ಆದ ಮಾರ್ಕಂಡೇಯ ಹುಟ್ಟಿದ್ದು ಮಾತಂಗಿಯ ಗರ್ಭದಲ್ಲಿ; ಪರೀಕ್ಷಿತ ರಾಜನ ಪತ್ನಿ ಮಂಡೋದರಿ ಜನಿಸಿದ್ದು ಕಪ್ಪೆಯ ಉದರದಲ್ಲಿ; ಅಷ್ಟೇ ಅಲ್ಲದೆ ಮಹರ್ಷಿಗಳಾದ ಅಗಸ್ತ್ಯ, ದುರ್ವಾಸ, ಕಶ್ಯಪ, ಕೌಂಡಿನ್ಯ ಮುಂತಾದವರು ಬೇಡ, ಚಮ್ಮಾರ, ಕಮ್ಮಾರ, ಕ್ಷೌರಿಕರ ಉದರಲ್ಲಿ ಜನಿಸಿದವರು. ಈ ರೀತಿಯಾಗಿ ಮಹಾಜ್ಞಾನಿಗಳು, ಪ್ರತಿಭಾವಂತರು, ಮಹರ್ಷಿಗಳು, ಪ್ರತಿಷ್ಠಿತರೆಂದು ಹೆಸರುಗಳಿಸಿದವರು ಜನಿಸಿದ್ದು ಸಾಮಾಜಿಕವಾಗಿ ಕೀಳಾಗಿ ಪರಿಗಣಿಸಲ್ಪಟ್ಟ ಸಣ್ಣ-ಪುಟ್ಟ ಜಾತಿಗಳಲ್ಲೇ. ಆದ್ದರಿಂದ ವ್ಯಕ್ತಿಗಳನ್ನು ಜಾತಿಯ ಆಧಾರದ ಮೇಲೆ ಬೆಲೆಗಟ್ಟದೆ, ಅವರ ಸಾಧನೆ, ಸಿದ್ಧಿ, ಪ್ರತಿಭೆ, ಪಾಂಡಿತ್ಯಗಳ ಆಧಾರದ ಮೇಲೆ ಬೆಲೆಗಟ್ಟುವುದು ಸರಿಯಾದದ್ದು ಎಂಬ ವಿಚಾರವನ್ನು ಬಸವಣ್ಣನವರು ಇಲ್ಲಿ ಪ್ರತಿಪಾದಿಸುತ್ತಿದ್ದಾರೆ. ಬಸವಣ್ಣನವರ ಕಾಲದಲ್ಲಿ ವೈದಿಕ ಧರ್ಮ ಹುಟ್ಟು ಹಾಕಿದ್ದ ಜಾತಿಭೇದದಿಂದಾಗಿ ಕೆಳಜಾತಿಯ ಪ್ರತಿಭೆಗಳನ್ನು ಜಾತಿ ಆಧಾರದ ಮೇಲೆ ಕೀಳಾಗಿ ಕಂಡು ಶೋಷಣೆ ಮಾಡುತ್ತಿದ್ದ ವಾತಾವರಣವಿದ್ದ ಕಾರಣ, ಬಸವಣ್ಣ ಈ ರೀತಿಯ ಜನಪರ ಕಾಳಜಿಯ ಮೌಲಿಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ ಜಾತಿ ನಿರಾಕರಣೆಯನ್ನು ಮಾಡಿರುವುದು ಉಚಿತವಾಗಿ ತೋರುತ್ತದೆ. ಆದರೆ ಬಸವಣ್ಣನವರ ಕಾಲಸರಿದು ಎಂಟುನೂರು ವರ್ಷಗಳಾದರೂ ಈ ಜಾತಿಆಧಾರಿತ ಮಾನದಂಡದಿಂದ ವ್ಯಕ್ತಿ, ಜನಾಂಗ, ಸಮಾಜವನ್ನು ಅಳೆಯುವ ದುಷ್ಟ ಪದ್ಧತಿ ನಾಶವಾಗದೆ ಇರುವುದು ಈ ವ್ಯವಸ್ಥೆಯ ದುರಂತವೇ ಸರಿ.

ಆವ ಕುಲವಾದಡೇನು? ಶಿವಲಿಂಗವಿದ್ದವನೆ ಕುಲಜನು
ಕುಲವನರಸುವರೆ ಶರಣರಲ್ಲಿ, ಜಾತಿಸಂಕರನಾದ ಬಳಿಕ?
ಶಿವಧರ್ಮಕುಲೇಜಾತಃ ಪುನರ್ಜನ್ಮ ವಿವರ್ಜಿತಃ।
ಉಮಾಮಾತಾ ಪಿತಾ ರುದ್ರ ಐಶ್ವರಂ ಕುಲಮೇವ ಚ॥ ಎಂಬುದಾಗಿ
ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ
ಕೂಡಲಸಂಗಮದೇವಾ ನಂಬುವೆ ನಿಮ್ಮ ಶರಣರನು (ಅದೇ. ವ–೭೧೮, ಪು-೧೮೦)

ಬಸವಣ್ಣನವರು ಹುಟ್ಟು ಹಾಕಿದ್ದ ಶರಣಧರ್ಮದಲ್ಲಿ ಹಿಂದೂ ಮುಂತಾದ ಎಲ್ಲ ಮತ, ಕುಲ, ಜಾತಿಗಳಿಂದ ಜನ ಸೇರಿದ್ದರು; ಶರಣರಾಗಿದ್ದರು. ಒಮ್ಮೆ ಎಲ್ಲ ಭೇದ–ಭಾವ ತೊರೆದು ಶರಣಧರ್ಮದಲ್ಲಿ ಲೀನವಾದ ಬಳಿಕ ಮತ್ತೆ ಅಲ್ಲಿ ಕುಲ— ಜಾತಿಗಳ ತಾರತಮ್ಯ ಕೂಡದು. ಆ ಶರಣರೆಲ್ಲರೂ ಶಿವ–ಪಾರ್ವತಿಯರ ಮಕ್ಕಳೇ. ಅವರೆಲ್ಲರ ಕುಲ ಶಿವಕುಲ; ಧರ್ಮ ಶರಣಧರ್ಮ. ಎಲ್ಲರೂ ಸಾಮಾಜಿಕವಾಗಿ, ಧಾರ್ಮಿಕವಾಗಿ ಸಮಾನ ಗೌರವಕ್ಕೆ ಪಾತ್ರರಾದವರು. ಆದ್ದರಿಂದ ಅವರಲ್ಲಿ ಕೊಡು-ಕೊಳ್ಳುವ ವ್ಯವಹಾರ ಆಗಬೇಕು, ಬಸವಣ್ಣನವರ ಜಾತ್ಯಾತೀತ, ಮತಾತೀತ ಶರಣಧರ್ಮದ ಆಶಯ ಇಲ್ಲಿದೆ ಮತ್ತು ಜಾತಿನಿರಾಕರಣೆಯು ಅಂತವೂ ಇಲ್ಲಿರುವುದು ವೇದ್ಯ.

ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ?
ಕುಲವುಂಟೆ ಜಂಗಮವಿದ್ದೆಡೆಯಲ್ಲಿ?
ಎಂಜಲುಂಟೆ ಪ್ರಸಾದವಿದ್ದೆಡೆಯಲ್ಲಿ?
ಅಪವಿತ್ರದ ನುಡಿಯು ನುಡಿವ ಸೂತಕವೆ ಪಾತಕ
ನಿಷ್ಕಳಂಕ ನಿಜೈಕ್ಯ ತ್ರಿವಿಧನಿರ್ಣಯ
ಕೂಡಲಸಂಗಮದೇವಾ ನಿಮ್ಮ ಶರಣರಿಗಲ್ಲದಿಲ್ಲ (ಅದೇ. ವ-೭೭೦, ಪು-೧೯೬)

ಶರಣಧರ್ಮದ ಜಾತಿ, ಕುಲ ನಿರಾಕರಣೆಯ ಆಶಯ ಇಲ್ಲಿಯೂ ವ್ಯಕ್ತವಾಗಿದೆ.

ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ (ಶ್ರೀ ಬಸವೇಶ್ವರರು ಪು–೮೮)

ವೃತ್ತಿ ಆಧಾರದ ಮೇಲೆ ಜಾತಿವಿಂಗಡಣೆ ಮಾಡಿ ಸಮಾಜವನ್ನು ಹೋಳು ಮಾಡುವುದು ಸರಿಯಲ್ಲವೆಂಬ ಅಂಶ ಇಲ್ಲಿ ವ್ಯಕ್ತವಾಗಿದೆ.

ಅಸ್ಪೃಶ್ಯನಾದ ಹರಳಯ್ಯ ಮತ್ತು ವೈದಿಕನಾದ ಮಧುವಯ್ಯ ಶರಣ ಧರ್ಮವನ್ನು ಸ್ವೀಕರಿಸಿದ ಮೇಲೆ ಇವರ ಮಗ–ಮಗಳ ಮದುವೆ ನಡೆಯುವಂತೆ

ಬಸವಣ್ಣ ಏರ್ಪಾಡು ಮಾಡಿ ವರ್ಣಸಂಕರವಾಗುವಂತೆ ಮಾಡಿದ್ದು, ಬಸವಣ್ಣನವರ ಜಾತ್ಯಾತೀತ ಸಮಾಜ ರಚನೆಯ ಕಲ್ಪನೆಗೆ ಪೂರಕವಾಗಿದೆಯೆಂದು ತಿಳಿಯಲಾಗಿದೆ. ಈ ಘಟನೆಗೆ ಪೂರಕ ಸಾಕ್ಷಿ ಎಂಬಂತೆ ನಾವು ಈಗಾಗಲೇ ಚರ್ಚಿಸಿದ ವಚನ-೭೧೮ರ 'ಕುಲವನರಸುವರೆ ಶರಣರಲ್ಲಿ, ಜಾತಿಸಂಕರನಾದ ಬಳಿಕ?'' ಎಂಬ ಪಂಕ್ತಿಯ ಆಶಯದಂತೆ ಇವರಿಬ್ಬರ ಅಂತರ್‌ಜಾತಿಯ ಸಂಬಂಧದಿಂದ ವರ್ಣಸಂಕರ ಅಥವಾ ಜಾತಿಯ ಸಂಕರವಾಯಿತೆಂದು ಭಾವಿಸಲು ಸಾಧ್ಯವಿದೆ ಮತ್ತು ಈ ವರ್ಣಸಂಕರ ದಿಂದಾಗಿ ಅಸಮಾಧಾನಗೊಂಡ ಸಂಪ್ರದಾಯಸ್ಥರು ಬಿಜ್ಜಳನಿಗೆ ದೂರು ನೀಡಿ, ಬಸವಣ್ಣನವರ ಸಮಾಜೋದ್ಧಾರ್ಮಿಕ ಚಳವಳಿ ವಿಫಲವಾಗುವಂತೆ ಸಂಚು ನಡೆಸಿದರೆಂಬ ವಾದವೂ ಇದೆ. ಆದರೆ ಬಸವಣ್ಣನವರ ಸಮಾಜೋದ್ಧಾರ್ಮಿಕ ಚಳವಳಿ ಹಿನ್ನಡೆ ಸಾಧಿಸಲು ಈ ಅಂತರ್‌ಜಾತಿಯ ವಿವಾಹ ಕಾರಣವಾಯಿತೋ ಅಥವಾ ಬಸವಣ್ಣನವರ ಜನಪರ ಕಾಳಜಿಯ ಸಮಗ್ರ ಬದಲಾವಣೆಯ ಅಂಶ ಸಂಪ್ರದಾಯಸ್ಥರ ನಿದ್ರೆಗೆಡಿಸಿದ್ದರ ಕಾರಣದಿಂದಾಗಿ ಆ ಸಂಪ್ರದಾಯಸ್ಥರು ಪ್ರಭುತ್ವದ ಕಿವಿಕಚ್ಚಿ ಬಸವಣ್ಣನವರ ಮತ್ತು ಶರಣರ ವಿರುದ್ಧ ಪ್ರಭುತ್ವ ತಿರುಗಿ ಬೀಳುವಲ್ಲಿ ಯಶಸ್ವಿ ಯಾದದ್ದರಿಂದ ಸಾಧ್ಯವಾಯಿತೋ ಖಚಿತವಾಗಿ ಹೇಳುವುದು ಕಷ್ಟ. ಒಂದು ವೇಳೆ ಈ ಅಸ್ಪೃಶ್ಯ–ವೈದಿಕ ಜಾತಿಯ ಗಂಡು-ಹೆಣ್ಣಿನ ಮದುವೆ ಆ ಕಾಲದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದದ್ದೇ ನಿಜವಾಗಿದ್ದ ಪಕ್ಷದಲ್ಲಿ ಅದು ಬಸವಣ್ಣನವರ ಜನಪರ ಚಳವಳಿಯ ಒಂದು ಮಹತ್ವಪೂರ್ಣ ಅಂಶವೆಂದು ಹೇಳಬಹುದು.

(೧) ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ?
ತಮಗೊಂದು ಬಟ್ಟೆ ಶಾಸ್ತ್ರಕ್ಕೊಂದು ಬಟ್ಟೆ
ಕೂಡಲಸಂಗಮದೇವಯ್ಯ ಹೊಲೆಯರ ಬಸುರಲ್ಲಿ
ವಿಪ್ರರು ಹುಟ್ಟಿ ಗೋಮಾಂಸ ತಿಂಬರೆಂಬುದಕ್ಕೆ ಇದೆದೃಷ್ಟ

(ಅದೇ. ವ-೫೭೫, ಪು-೧೪೩(

(೨) ಕೊಲುವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ

(ಅದೇ, ವ-೫೯೧, ಪು-೧೪೧)

(೩) ಕುಲವನರಸುವರೆ ಇದರೊಳು? ಛಲವನರಸುವರೆ?
ಹೊಲಗೇರಿಯಲೊಂದು ಎಲುವಿನ ಮನೆಗಟ್ಟಿ
ತೊಗಲ ಹೊದಿಕೆ ನರವಿನ ಹಂಜರ
ಕುಲವನರಸುವರೆ?
ಹೊಲತಿ ಹೊಲೆಯ ಹೋಗಿ
ಹೊಲೆಯಲ್ಲಿ ಮಿಂದಡೆ

ಹೊಲೆ ಹೋಯಿತ್ತಿಲ್ಲ ಕುಲಹೋಗಲಿಲ್ಲ
ಕಂಬಳಿಯೊಳಗೆ ಕೂಳಕಟ್ಟಿ ಕೂಪಲನರಸುವರೇ ?
ಇಂಥ ಡಂಬಕರ ಕೂಡಲಸಂಗಮದೇವರು ಮೆಚ್ಚರಯ್ಯಾ

(ಆದೇ. ವ—೧೫೮, ಪು-೫೧೭)

(೪) ಕುಲವ ನೋಡದೆ ಛಲವ ನೋಡದೆ
ನಿಲವ ನೋಡದೆ ಕೂಡಿದ ಬಳಿಕ
ಅಲ್ಲಿ ಹೆಚ್ಚು ಕುಂದನರಸಲುಂಟೆ ?
ಮುಂದುವರಿದು ಜಂಗಮಕ್ಕೆ ಭಕ್ತಿಯ ಮಾಡೆಂದು
ನಿಮ್ಮ ಕಾರುಣ್ಯವನುಪದೇಶವ ಮಾಡಿದ ಬಳಿಕ
ಬಂದುದ ಬಂದಂತೆ ಸಮನಿಸಿಕೊಳ್ಳಬೇಕಲ್ಲದೆ
ಅಂತಿಂತೆನಬಾರದು ಕೇಳಯ್ಯಾ
ನೀನು ನಿರಾಕಾರ ಸಾಕಾರ ವೆಂಬೆರಡು
ಮೂರ್ತಿಯ ಧರಿಸಿಪ್ಪೆಯಾಗಿ
ಬಂದ ಜರೆದು ಬಂದ ಹಿಡಿದಿಹೆನೆಂದಡೆ
ಆದೆ ಕೊರತೆ ನೋಡಾ ಪ್ರಭುವೆ ಕೂಡಲಸಂಗಮದೇವಾ

(ಅದೇ.ವ-೧೧೫೯, ಪು-೩೦೭)

ಈ ಮೇಲಿನ ವಚನಗಳ ಭಾವ ಮತ್ತು ಆಶಯ ಬಸವಣ್ಣನವರ ಅಪ್ಪಟ ಪ್ರಗತಿಪರ ವಿಚಾರಗಳಿಗೆ ವಿರುದ್ಧವಾಗಿ ಕಂಡುಬರುತ್ತದೆ. ೫೭೫ನೇ ವಚನದಲ್ಲಿನ "ಹೊಲೆಯರ ಬಸುರಲ್ಲಿ ವಿಪ್ರರು ಹುಟ್ಟಿ ಗೋಮಾಂಸ ತಿಂಬರೆಂಬುದಕ್ಕೆ ಇದೆ ದೃಷ್ಟ" ಎನ್ನುವ ಮಾತಂತೂ ಬಸವಣ್ಣನವರ ಜಾತ್ಯಾತೀತ ತತ್ವಕ್ಕೆ, ವಿಶಾಲಮನೋಧರ್ಮಕ್ಕೆ ಸಂಪೂರ್ಣ ವಿರುದ್ಧವಾಗಿ ಕಂಡು ಬರುತ್ತದೆ. ಅಂತೆಯೇ ೫೯೧ನೇ ವಚನದಲ್ಲಿನ 'ಕೊಲುವನೇ ಮಾದಿಗ ಹೊಲಸು ತಿಂಬವನೇ ಹೊಲೆಯ' ಎನ್ನುವ ಮಾತು ಕಿರಿಕಿರಿಯನ್ನುಂಟು ಮಾಡುತ್ತದೆ. ಒಮ್ಮೆ ಶರಣಧರ್ಮವನ್ನು ಸೇರಿದ ಮೇಲೆ ಪ್ರಾಣಿವಧೆ ಮಾಡುವುದು, ಮಾಂಸಾಹಾರ ಸೇವಿಸುವುದು ನಿಷಿದ್ಧವೆಂಬ ನಿಯಮವಿದ್ದರೂ ಯಾರಾದರೂ ಈ ನಿಯಮವನ್ನು ಮೀರಿದರೆ ಅವರು ಕೀಳು ಕುಲಕ್ಕೆ ಸೇರಿದ ಹೊಲೆಮಾದಿಗರಂತೆಯೇ ಸರಿ ಎನ್ನುವಂಥ ವ್ಯಾಖ್ಯಾನವನ್ನು ಈ ವಚನಕ್ಕೆ ಮಾಡುವ ಸಾಧ್ಯತೆ ಇದ್ದರೂ ಈ ವಚನದ ಮೇಲಿನ ಪಂಕ್ತಿಯ ಆಶಯವನ್ನು ಒಪ್ಪುವುದು ಕಷ್ಟ. ಅಂತೆಯೇ ೧೧೫೮ ಮತ್ತು ೧೧೫೯ನೆಯ ವಚನಗಳ ವಿಚಾರ-ಧೋರಣೆಗಳು ಬಸವಣ್ಣನವರ ಜನಪರ ನಿಲುವಿಗೆ, ಜಾತ್ಯಾತೀತ ಮನೋಧರ್ಮಕ್ಕೆ ವಿರುದ್ಧವಾಗಿ ಕಾಣಿಸಿಕೊಳ್ಳುವುದರಿಂದ ಬಸವಣ್ಣನವರ ನಿಲುವಿನಲ್ಲಿ ದ್ವಂದ್ವವೇನಾದರೂ ಇತ್ತೆ? ಎಂಬ

ಸಂದೇಹ ಕಾಡುತ್ತದೆ. ಆದರೆ ಬಸವಣ್ಣನವರ ಹೆಸರಿನಲ್ಲಿ 'ಕೂಡಲಸಂಗಮದೇವ' ಎಂಬ ಅಂಕಿತದಲ್ಲಿ ಬೇರೆಯವರು ಈ ರೀತಿಯ ವಚನಗಳನ್ನು ಬರೆದು ಸೇರಿಸಿರಬಹುದಾದ ಸಾಧ್ಯತೆಗಳೂ ಹೆಚ್ಚಿವೆ. ಏಕೆಂದರೆ ಅಪ್ಪಟ ಮಾನವ ಪ್ರೇಮಿಯಾದ, ಜನಪರ ಕಾಳಜಿಯ, ಸಮಾನತಾ ನಿಲುವಿನ ಬಸವಣ್ಣನವರು ಮೇಲಿನ ರೀತಿಯ ಪ್ರತಿಗಾಮಿ ನಿಲುವಿನ ವಚನಗಳನ್ನು ರಚಿಸಿರುವುದು ಸಾಧ್ಯವಿಲ್ಲ ಎಂದು ಯಾರಿಗಾದರೂ ಅನಿಸುವುದು ಸಹಜವಾಗಿದೆ.

ಹೀಗೆ ಬಸವಣ್ಣ ಮತ್ತು ಸಮಕಾಲೀನ ಶರಣ-ಶರಣೆಯರು ಜಾತ್ಯಾತೀತವಾದ ಮತಾತೀತವಾದ ಸರ್ವಸಮಾನತೆಯ ನವಸಮಾಜವೊಂದನ್ನು ಕಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದು ವಾಸ್ತವದ ಸಂಗತಿ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ, ಜಾತಿ ವಿನಾಶದ ಮೂಲಕ ಸುಂದರವಾದ, ಚಲನಶೀಲವಾದ ಜಾತ್ಯಾತೀತ, ಮತಾತೀತ ಅಪ್ಪಟ ಮಾನವಸಮಾಜ–ಸಂಸ್ಕೃತಿಯನ್ನು ಕಟ್ಟಲು ಬಸವಣ್ಣ ಮುಂತಾದ ಶರಣರು ಪ್ರಾಮಾಣಿಕ ಪ್ರಯತ್ನ ನಡೆಸಿದರೂ ಸಂಪ್ರದಾಯಸ್ಥರು, ಜ್ಯಾತ್ಯಾಭಿಮಾನಿಗಳು ಬಸವಣ್ಣನವರ ಈ ಸಮಾನತಾ ತತ್ವಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದ ಕಾರಣದಿಂದಾಗಿ ಪ್ರಭುತ್ವದ ಕಿವಿಕಚ್ಚಿ, ಪ್ರಭುತ್ವ, ಶರಣರ ಮತ್ತು ಶರಣ ಧರ್ಮದ ವಿರುದ್ಧ ತಿರುಗಿ ಬೀಳಲು ಸಂಚು ನಡೆಸಿದ್ದರಿಂದ ಬಸವಣ್ಣನವರ ಕಾಲದಲ್ಲೇ ಅವರು ಹುಟ್ಟು ಹಾಕಿದ ಸಮಾಜೋಧಾರ್ಮಿಕ ಕ್ರಾಂತಿಗೆ ಹಿನ್ನಡೆ ಉಂಟಾಯಿತು. ಮುಂದೆ ಬಸವಣ್ಣನವರ ಕಾಲದ ನಂತರ ಬಸವಣ್ಣನವರ ಅನುಯಾಯಿಗಳು ಮತ್ತು ಇತರರು ಬಸವಣ್ಣನವರ ಸಮಜೋಧಾರ್ಮಿಕ ತತ್ವ-ಸಿದ್ಧಾಂತಗಳನ್ನು ಸಮರ್ಥವಾಗಿ ಮತ್ತು ಜವಾಬ್ದಾರಿಯುತವಾಗಿ ಮುನ್ನಡೆಸಿಕೊಂಡು ಹೋಗದ ಕಾರಣ ಶರಣ ಪಂಥದ ತತ್ತ್ವಾದರ್ಶಗಳು ಬೆಲೆ ಕಳೆದುಕೊಂಡು ಸಾಮಾಜಿಕ ಅಸಮಾನತೆ ಸ್ಥಿರಗೊಳ್ಳಲು ಕಾರಣವಾಯಿತು.

ಆದರೆ ಈಗ ಭಾರತಕ್ಕೆ ಸ್ವಾತಂತ್ರ್ಯ ಬಂದು 'ಪ್ರಜಾಪ್ರಭುತ್ವ' ವ್ಯವಸ್ಥೆಯನ್ನು ರಾಜಕೀಯವಾಗಿ ಸ್ವೀಕರಿಸಿದ ಮೇಲೆ ಜಾತಿ-ಕುಲಗಳ ಭೇದ–ಭಾವ ಇರಬಾರದು; ಇರಕೂಡದು. ವಾಸ್ತವದಲ್ಲಿ ಇದು ಸಾಧ್ಯವಾಗಿದೆಯೇ? ಭಾರತ ನಿಜವಾದ ಅರ್ಥದಲ್ಲಿ 'ಜಾತ್ಯಾತೀತ ರಾಷ್ಟ್ರ'ವಾಗಿದೆಯೇ? ಎಂದು ಆಲೋಚಿಸಿದರೆ ವಿಚಾರವಂತನಿಗೆ, ನಿಜವಾದ ಮನುಷ್ಯನಿಗೆ ಬೇಸರವಾಗುತ್ತದೆ; ಕಳವಳವುಂಟಾಗುತ್ತದೆ. ಪ್ರಸ್ತುತ 'ಜಾತಿವಿನಾಶ'ಕ್ಕೆ ಬದಲು 'ಜಾತಿಪ್ರಜ್ಞೆ' ಹೆಚ್ಚಾಗತೊಡಗಿದೆ, ಜಾತಿ ಜಾತಿಗಳಲ್ಲಿ ಉಪಜಾತಿ, ಪಂಗಡಗಳ ಪ್ರತ್ಯೇಕತೆ ಕಾಣಿಸಿಕೊಳ್ಳತೊಡಗಿದೆ. ಎಲ್ಲಿ ನೋಡಿದರಲ್ಲಿ ಜಾತಿಗುಂಪುಗುಳಿತನ ಅಧಿಕ ಪ್ರಮಾಣದಲ್ಲಿ ಬೆಳೆಯತೊಡಗಿದೆ. 'ನಾವೆಲ್ಲ ಒಂದು' ಎಂಬ ಭಾವನೆ ದೂರಸರಿದು ಭಿನ್ನತೆ, ಒಡಕು, ಬಿರುಕುಗಳೇ ಕುಣಿಯತೊಡಗಿವೆ. ಬಸವಣ್ಣನವರ ಅನುಯಾಯಿಗಳು ಬಸವಣ್ಣನವರ ಜಾತ್ಯಾತೀತ ಮತಾತೀತ ತತ್ವ-ಮೌಲ್ಯಗಳನ್ನು ತಾವೂ ಅಳವಡಿಸಿಕೊಂಡು ಸಮಾಜಕ್ಕೂ

ಉಣಬಡಿಸುವುದು ಇಂದಿನ ಅಗತ್ಯವಾಗಿದೆ. ಕರ್ನಾಟಕದ ಕೆಲವು ವೀರಶೈವ ಮಠ-ಸಂಸ್ಥೆಗಳು ಈ ನಿಟ್ಟಿನತ್ತ ಪ್ರಯತ್ನ ನಡೆಸಿರುವುದು ಸ್ತುತ್ಯಾರ್ಹವಾಗಿದೆ. ಈ ಮಠ-ಸಂಸ್ಥೆಗಳು ಹಿಂದುಳಿದ ವರ್ಗದವರಿಗೆ, ದಲಿತರಿಗೆ ಮತ್ತು ಸ್ತ್ರೀಯರಿಗೆ ಸಮಾನ ಅವಕಾಶ, ಸವಲತ್ತುಗಳು ಲಭಿಸುವತ್ತ ಪ್ರಯತ್ನ, ಹೋರಾಟ ಮಾಡು ವುದು ಅಪೇಕ್ಷಣೀಯವಾದುದೆಂದು ತೋರುತ್ತದೆ. ಏಕೆಂದರೆ ಧರ್ಮಗುರುಗಳು, ಮಠ-ಸಂಸ್ಥೆಗಳು ಸರ್ವ ಸಮಾನತೆಯ ಪರಿಕಲ್ಪನೆಯ ಆಧಾರದ ಮೇಲೆ ಎಲ್ಲರಿಗೂ ಎಲ್ಲ ರೀತಿಯ ಹಕ್ಕು ಸವಲತ್ತುಗಳು ಸಿಗುವತ್ತ ಹೋರಾಟ ನಡಿಸಿದ್ದೇ ಆದರೆ ಬಸವಣ್ಣನವರ ಆದರ್ಶ ಸಮಾಜದ ಕನಸು ನನಸಾಗುವುದರಲ್ಲಿ ಅನುಮಾನವಿಲ್ಲ. ಇದು ಕೇವಲ ಮಠ–ಸಂಸ್ಥೆಗಳ, ಧರ್ಮಗುರುಗಳ ಹೆಗಲಿಗೆ ಹೊರಿಸುವ ಜವಾಬ್ದಾರಿ ಮಾತ್ರವಲ್ಲ, ಈ ಸಮಾನತಾ ಪ್ರಕ್ರಿಯೆಯಲ್ಲಿ ರಾಜಕಾರಣಿಗಳ, ಸಮಾಜದ ಇತರೆ ಎಲ್ಲ ವರ್ಗದವರ ಪಾತ್ರವೂ ಬಹಳ ಮುಖ್ಯವಾಗಿದೆ. ಹೀಗೆ ಸಮಾಜದ ಪ್ರತಿಯೊಬ್ಬ ವ್ಯಕ್ತಿಯೂ ಈ ನಿಟ್ಟಿನತ್ತ ಪ್ರಾಮಾಣಿಕ ಪ್ರಯತ್ನ ಮಾಡಿದಾಗ ನಾವು ಸುಂದರವಾದ ನವಸಮಾಜವನ್ನು ಕಟ್ಟಲು ಸಾಧ್ಯವಾಗಬಹುದು; ಬಸವಣ್ಣನವರ ಪ್ರಾಮಾಣಿಕ ಮನಸ್ಸಿನ ಹೋರಾಟ, ಪ್ರಯತ್ನಕ್ಕೆ, ಅವರ ಜನಪರವಾದ ಚಲನಶೀಲ ಮೌಲ್ಯಗಳಿಗೆ ಬೆಲೆ ಸಿಗಲು ಸಾಧ್ಯವಾಗಬಹುದು.

ಸಿ. ಚಿಕ್ಕೇಗೌಡ

ಮಲೆಗಳಲ್ಲಿ ಮದುಮಗಳು : ಒಂದು ಪಕ್ಷಿ ನೋಟ

ಆಧುನಿಕ ಸಾಹಿತ್ಯ ರೂಪಗಳಲ್ಲಿ ಪ್ರಮುಖವಾದ ಕಾದಂಬರಿಯನ್ನು 'ಕರತಲ ರಂಗಭೂಮಿ', 'ಅಂಗೈ ಮೇಲಣ ನಾಟಕ ಶಾಲೆ' ಎಂದೆಲ್ಲಾ ಕರೆಯಲಾಗಿದೆ. ಸಾಮಾನ್ಯರಿಂದ ಹಿಡಿದು ಪಂಡಿತರವರೆವಿಗೂ ಈ ಪ್ರಕಾರ ತುಂಬಾ ಪರಿಣಾಮಕಾರಿಯಾಗಿ ಸಂವಹನಗೊಳ್ಳುವುದರಿಂದ ಹಾಗೂ ಸಹಜಾನುಭವವನ್ನು ಸೂಕ್ಷ್ಮವಾಗಿ ವ್ಯಕ್ತಪಡಿಸಲು ಸಮರ್ಥವಾದ ಪ್ರಕಾರ ಎಂಬ ದೃಷ್ಟಿಯ ಹಿನ್ನೆಲೆಯಿಂದ ಹೇಳಿದಂತಹ ಈ ಮಾತುಗಳು ಕಾದಂಬರಿ ಪ್ರಕಾರಕ್ಕೆ ಒಪ್ಪುವಂಥವು. ಕುವೆಂಪುರವರ 'ಕಾನೂರು ಹೆಗ್ಗಡಿತಿ' ಹಾಗೂ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳು ಮೇಲಿನ ಮಾತುಗಳಿಗೆ ಸಂಗತವಾಗಿ ಮೂಡಿಬಂದಿವೆ.

ಕುವೆಂಪುರವರ ಈ ಕಾದಂಬರಿಗಳಲ್ಲಿ ಯಾವುದು ಪ್ರಥಮ ಯಾವುದು ಅನಂತರ (ಶ್ರೇಷ್ಠತೆಯ ದೃಷ್ಟಿಯಿಂದ) ಎಂದು ಪ್ರತ್ಯೇಕಿಸಲು ಸಾಧ್ಯವಿಲ್ಲ. ಆದರೆ ಮಲೆನಾಡಿನ ಹಾಗೂ ಅದರ ಸುತ್ತಮುತ್ತಲಿನ ಜೀವನವನ್ನು ಸಾಧ್ಯವಾದಷ್ಟು ಸಮಗ್ರವಾಗಿ ಹಾಗೂ ಸಹಜವಾಗಿ ತನ್ನ ಒಡಲಲ್ಲಿ ಅಡಗಿಸಿಕೊಂಡಿರುವುದು 'ಮಲೆಗಳಲ್ಲಿ ಮದುಮಗಳು' ಎಂದೇ ಹೇಳಬೇಕಾಗುತ್ತದೆ.

'ಮಲೆಗಳಲ್ಲಿ ಮದುಮಗಳು' ಕನ್ನಡ ಕಾದಂಬರಿಗಳಲ್ಲೆಲ್ಲಾ ಅದ್ವಿತೀಯವಾದುದು. ಇದರ ವಸ್ತು, ಸಂವಿಧಾನ, ದೃಷ್ಟಿ, ಅಭಿವ್ಯಕ್ತಿ ವಿಧಾನ, ಬಳಸಿರುವ ಭಾಷೆ ಮೊದಲಾದ ಅವಯವಗಳಿಂದ ಕೂಡಿದ ಬೃಹತ್ತಾದ ಹಾಗೂ ಮಹತ್ತಾದ ಕೃತಿರೂಪದ ಕಟ್ಟಡವಾಗಿದೆ. ಮಲೆನಾಡು ಪ್ರದೇಶದ ಜನತೆ, ಅವರ ಜೀವನ, ಆಚಾರ–ವಿಚಾರ, ಊಟ–ವಸತಿ, ಉಡುಗೆ–ತೊಡುಗೆ, ಪ್ರಾಣಿ–ಪಕ್ಷಿಗಳ ಸ್ಥಿತಿಗತಿ ಮೊದಲಾದವುಗಳನ್ನು ಚಿತ್ರಿಸುವುದು ಮಾತ್ರವೇ ಲೇಖಕರ ಉದ್ದೇಶವಲ್ಲ. ಆ ಮೂಲಕ ಕನ್ನಡ ನಾಡಿನ, ಭಾರತದ, ಮಿಗಿಲಾಗಿ ಇಡೀ ಮಾನವ ಕುಲದ ವ್ಯವಸ್ಥೆಯನ್ನೇ ಪಾರದರ್ಶಿಸುವ ಉದ್ದೇಶ ಕಾದಂಬರಿಯ ಅಂತರಂಗದಲ್ಲಿರುವುದು ಕಂಡು ಬರುತ್ತದೆ. ಆದರೆ ಒಂದು ಪ್ರಾದೇಶಿಕ (ಮಲೆನಾಡು) ಹಿನ್ನೆಲೆಯಿಂದ ವಿಶ್ವದ

ಬದುಕನ್ನು ದರ್ಶಿಸುವುದು ಲೇಖಕರಿಗೆ ಎಷ್ಟು ಪ್ರಮುಖವೋ ಅದಕ್ಕಿಂತಲೂ ಪ್ರಮುಖವಾದುದು ಮಲೆನಾಡಿನ ದರ್ಶನ.

ಮಲೆನಾಡು ಪ್ರದೇಶದ ಜನಜೀವನದ ಸೂಕ್ಷ್ಮಾತಿಸೂಕ್ಷ್ಮ ಅಂಶಗಳಿಂದ ಹಿಡಿದು ಆ ಜೀವನದ ಪ್ರಧಾನ ಲಕ್ಷಣಗಳನ್ನೂ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಒಳಗೊಂಡಿದೆ ಎಂದರೆ ಅತಿಶಯೋಕ್ತಿಯು ಮಾತಾಗಲಾರದು. ಈ ದೃಷ್ಟಿಯಿಂದಲೇ ನಾನು ಈ ಕಾದಂಬರಿಯನ್ನು ಕನ್ನಡದ ಕಾದಂಬರಿಗಳಲ್ಲಿ ಅದ್ವಿತೀಯವಾದುದು ಎಂದಿರುವುದು. ಆ ಪ್ರದೇಶದ ವಿವಿಧ ವರ್ಗ ಹಾಗೂ ಜಾತಿಗಳ ಜೀವನ ವಿವೇಚನೆ, ಜಾತಿ ಹಾಗೂ ಅಂತಸ್ತಿಗನುಗುಣವಾಗಿ ಅಲ್ಲಿನ ಜನತೆ ಧರಿಸುವ ವಡವೆ-ವಸ್ತ್ರಗಳ ವರ್ಣನೆ, ಊಟ ಹಾಗೂ ಪಾನೀಯಗಳ ಚಿತ್ರಣ, ಬೇಟೆ ಮೊದಲಾದ ಹವ್ಯಾಸಗಳ ನಿರೂಪಣೆ, ಅಲ್ಲಿನ ದೈನಂದಿನ ಬದುಕಿಗಾಗಿ ಬಳಸುವ ವಸ್ತು ಹಾಗೂ ಸಾಧನಗಳ ಹಾಗೂ ಅವುಗಳನ್ನು ಬಳಸುವ ವಿಧಾನದ ಬಗ್ಗೆ ಕಂಡರಿಸುವುದು, ಸಾಕುಪ್ರಾಣಿಗಳು ಮತ್ತು ಅವುಗಳ ಬಗೆಗಿನ ಅಲ್ಲಿನ ಜನತೆಯ ಪ್ರೀತಿ ಮೊದಲಾದ ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನು ಚಿತ್ರಿಸುವಾಗ ಓದುಗರಿಗೆ ದಿಗ್ಮೂಢವಾದಂತಾದರೆ ಆಶ್ಚರ್ಯವೇನಲ್ಲ. ಬಹುಶಃ ಈ ರೀತಿಯ ಯಶಸ್ಸಿಗೆ ಲೇಖಕರಿಗೆ ಇರುವ ಬದುಕಿನ ಬಗೆಗಿನ ಪ್ರೀತಿ ಹಾಗೂ ಅವರ ಸಹಜಾನುಭವವೇ ಕಾರಣವಾಗಿದೆ ಎನಿಸುತ್ತದೆ.

ಕಥೆ, ಕಾದಂಬರಿ, ಕಾವ್ಯ ಮೊದಲಾದ ಯಾವುದೇ ಸಾಹಿತ್ಯಪ್ರಕಾರವಾಗಲಿ, ಒಬ್ಬ ಸ್ತ್ರೀ ಅಥವಾ ಪುರುಷನನ್ನು ಪ್ರಧಾನ ಪಾತ್ರವನ್ನಾಗಿ ಹೊಂದಿರುವುದು ಸಾಮಾನ್ಯ. ಆ ಪಾತ್ರ ಅಥವಾ ಪಾತ್ರಗಳ ಜೊತೆಗೆ ವಿವಿಧ ವರ್ಣ ಹಾಗೂ ವರ್ಗದ ಜನತೆಯ ಮೂಲಕ ಒಂದು ಸಮಾಜದ ಜೀವನವನ್ನು ಚಿತ್ರಿಸಲಾಗುತ್ತದೆ. ಇಲ್ಲಿನ ಪ್ರತಿಯೊಂದು ವ್ಯಕ್ತಿಗಳೂ ನಾಯಕ ಅಥವಾ ನಾಯಕಿಗೆ ಪರವಾಗಿ ಅಥವಾ ವಿರುದ್ಧವಾಗಿ ವರ್ತಿಸುತ್ತನೆ. ಲೇಖಕ ಅಥವಾ ಕವಿಯ ಜೀವನ ದೃಷ್ಟಿ, ತಳೆಯುವ ಧೋರಣೆ, ಒಲವು ಮೊದಲಾದ ಅಂಶಗಳನ್ನು ಹಾಗೂ ಬದುಕನ್ನು ಕುರಿತ ತಾತ್ವಿಕ ನಿಲವನ್ನು ಕೃತಿಯ ನಾಯಕ ಪಾತ್ರದಲ್ಲಿ ಕಾಣಬಹುದು. ಈ ನಾಯಕನ ಪರವಾಗಿ ಓದುಗನ ಒಲವನ್ನು ಗಳಿಸಲು ಲೇಖಕ ಬಯಸುತ್ತಾನೆ. ಇದು ಕನ್ನಡ ಮೊದಲಾದ ಇತರ ಭಾಷೆಗಳ ಲೇಖಕರಲ್ಲಿ ಹಾಗೂ ಕೃತಿಗಳಲ್ಲಿ ನಾವು ಕಾಣುವ ಸಾಂಪ್ರದಾಯಿಕ ಸಾಹಿತ್ಯ ಕೃತಿಯ ಲಕ್ಷಣ ಮತ್ತು ಸಂವಿಧಾನ. ಸಾಹಿತಿ ತಾನು ಅಭಿವ್ಯಕ್ತಪಡಿಸಬೇಕೆಂದಿರುವ ಪ್ರಧಾನ ಉದ್ದೇಶಕ್ಕೆ ನಿರ್ದಿಷ್ಟ ಹಾಗೂ ಸ್ಪಷ್ಟವಾದ ವಸ್ತುವೊಂದಕ್ಕೆ ಮೊರೆ ಹೋಗುತ್ತಾನೆ. ಆ ವಸ್ತು ಹಾಗೂ ಪಾತ್ರಗಳ ಮೂಲಕ ಒಂದು ಬದುಕನ್ನು ನೇಯುತ್ತಾನೆ. ಅಂದರೆ ಒಂದು ವಸ್ತುವನ್ನು ತನ್ನ ಕೃತಿಗೆ ಆಕರವನ್ನಾಗಿ ಆಯ್ಕೆ ಮಾಡಿಕೊಂಡು, ಅದನ್ನು ವಿಕಾಸಗೊಳಿಸುತ್ತಾ ಸಾಗಿ ಕೊನೆಗೆ ಒಂದು ನಿರ್ದಿಷ್ಟ ಅಂತ್ಯವನ್ನು ತನ್ನ ಕೃತಿಗೆ ನೀಡುತ್ತಾನೆ.

ಸಾಂಪ್ರದಾಯಿಕ ಕಾದಂಬರಿ ಪರಂಪರೆಯ ಹಿಂಬೆಳಕಿನಿಂದ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ನೋಡಿದಾಗ, ಕಥಾ ಸಂವಿಧಾನದಲ್ಲಿ ಐಕ್ಯತೆಯಾಗಲೀ, ನಿರ್ದಿಷ್ಟ ವಸ್ತುವೊಂದರ ವಿಕಾಸವಾಗಲಿ ಕಂಡುಬರುವುದಿಲ್ಲ. ಈ ರೀತಿಯ ಅತಂತ್ರ ವಿಧಾನಗಳೇ ಕಾರಣವಾಗಿ ಕಾದಂಬರಿ ತಾನು ಗಳಿಸಬೇಕಾದ ಯಶಸ್ಸನ್ನು ಗಳಿಸಲಿಲ್ಲ ಎಂದು ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ. ಸಂವಿಧಾನ ಹಾಗೂ ಕೇಂದ್ರಸ್ಥ ವಸ್ತುವಿನ ಬಗೆಗಿನ ಕೆಲವು ವಿಮರ್ಶಕರ ಅಭಿಪ್ರಾಯವನ್ನು ಉದ್ಧರಿಸ ಬಯಸುತ್ತೇನೆ. "....ಪುಟ್ಟಪ್ಪನವರ ಕಾದಂಬರಿಗಳಲ್ಲಿ ಇಂಥ ಕೇಂದ್ರಸ್ಥವಾದ ಒಂದು ಬಿಕ್ಕಟ್ಟು ಇಲ್ಲದಿರುವುದೇ ಗೊಂದಲಕ್ಕೆ ಕಾರಣವಾಗಿದೆ.... ಇಲ್ಲಿ ನಿಜವಾಗಿ ಒಂದೇ ವಸ್ತು ಇಲ್ಲವೆನ್ನಿಸುತ್ತದೆ ಅಂತೆಯೇ ಎರಡೂ ಕಾದಂಬರಿಗಳಲ್ಲಿ ವಿಭಿನ್ನ ವಸ್ತುಗಳೆಲ್ಲ ಸೇರಿ ಪ್ರಕಟಪಡಿಸುವ ಅರ್ಥಪೂರ್ಣತೆ ಒಮ್ಮುಖವಾಗಿರದೆ ಹರಿಹಂಚಾಗಿದೆ"—ಗಿರಡ್ಡಿ ಗೋವಿಂದರಾಜ, ಮನ್ವಂತರ.

"... ವಸ್ತುಸ್ಥಿತಿಗಳ ಚಿತ್ರಣದ ಮಟ್ಟದಲ್ಲಿ ಜಯಗಳಿಸುವ ಈ ಕಾದಂಬರಿ, ಆ ವಸ್ತುಸ್ಥಿತಿಗಳ ಸಾಂಕೇತಿಕ ಅರ್ಥಸೂಚಿಸುವುದರಲ್ಲಿ, ಅನುಭವದ ವಿವಿಧ ಮುಖಗಳನ್ನು ಒಂದರ್ಥದಲ್ಲಿ ಚೌಕಟ್ಟಿನಲ್ಲಿ ಹಿಡಿದಿಡುವಲ್ಲಿ ಸೋಲುತ್ತದೆ. ... ಕನ್ನಡದ ಅತಿಶ್ರೇಷ್ಠ ಕಾದಂಬರಿಯಾಗಬಹುದಾಗಿದ್ದ 'ಮಲೆಗಳಲ್ಲಿ ಮದುಮಗಳು' ಸೋಲುವುದಕ್ಕೆ ಕಾರಣ ಅನುಭಾವವಲ್ಲ, ಕಾದಂಬರಿಗೆ ಬಂಧವನ್ನೊದಗಿಸುವ ದೃಷ್ಟಿಕೋನದಲ್ಲೇ ಬಿರುಕಿರುವುದು ಎನಿಸುತ್ತದೆ' ಡಾ. ಎಂ. ಜಿ. ಕೃಷ್ಣಮೂರ್ತಿ, 'ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು.'

"ಮಲೆಗಳಲ್ಲಿ ಮದುಮಗಳು" ಕೂಡ ಸೂತ್ರ ರೂಪವಾದ ಕೇಂದ್ರಪ್ರಜ್ಞೆಯಿಲ್ಲದೆ ವಿವರಗಳಲ್ಲಿ ಸೊಕ್ಕಿಬಿಡುತ್ತದೆ. ತನ್ನ ಕೃತಿಯೊಳಕ್ಕೆ ತಾನು ಸ್ವಂತ ಹೇಗೆ ಪ್ರವೇಶಿಸಬೇಕೆಂಬ ಪ್ರಶ್ನೆಯನ್ನು ಈ ಎರಡು ಕೃತಿಗಳಲ್ಲೂ ಕುವೆಂಪು ಬಗೆಹರಿಸಿಕೊಂಡಿಲ್ಲ ಎನ್ನಿಸುತ್ತದೆ" - ಯು. ಆರ್. ಅನಂತಮೂರ್ತಿ ಪ್ರಜ್ಞೆ ಮತ್ತು ಪರಿಸರ.

"... ಪ್ರಣಯ ಪ್ರಸಂಗಗಳ ಚಿತ್ರಣ, ಸಮಾಜದ ವಿವಿಧ ಸ್ತರಗಳ ಸಂಬಂಧದ ಚಿತ್ರಣ, ನೈತಿಕ ವಿಕಾಸದ ಚಿತ್ರಣ ಇತ್ಯಾದಿಗಳೆಲ್ಲಕ್ಕೂ ಒಂದು ಸಮಗ್ರತೆಯನ್ನು ಒದಗಿಸಿಕೊಡುವುದರ ಮೂಲಕ ಒಂದು ಬಂಧವನ್ನು ಒದಗಿಸುವ 'ಕೇಂದ್ರ'ವೆಂದರೆ, ಈ ಕಾದಂಬರಿಯಲ್ಲಿ ಎಲ್ಲ ಪ್ರಮುಖ ಪಾತ್ರಗಳೂ ಮತ್ತೊಬ್ಬ ವಿಷಮ ಸ್ಥಿತಿಗೆ ಸಿಕ್ಕಿಹಾಕಿಕೊಂಡಿರುವ ವ್ಯಕ್ತಿಯನ್ನು ಪಾರುಮಾಡುವುದಕ್ಕೆ ಸಹಾಯಕವಾಗುವುದೇ ಆಗಿದೆ. ಆದ್ದರಿಂದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗೆ ಬಂಧವನ್ನೊದಗಿಸುವ ವಸ್ತು ಪಾರುಮಾಡುವ ಯತ್ನವೇ ಆಗಿದೆ" ಎಚ್. ಎಂ. ಚನ್ನಯ್ಯ.

ಮೇಲಿನ ಎಲ್ಲ ಅಭಿಪ್ರಾಯಗಳೂ ಕಾದಂಬರಿಯ ಬಾಹ್ಯ ರಚನೆಗೆ ಸಂಬಂಧಿಸಿದವು ಎಂದೆನ್ನಿಸುತ್ತದೆ. ಹಾಗೆಯೇ ಸಾಂಪ್ರದಾಯಿಕ ಕಾದಂಬರಿಯ ರಚನೆ ಮತ್ತು ಸಂವಿಧಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ಆಡಿದ ಮಾತುಗಳಾಗಿವೆ. ಈ ಹಂತದಲ್ಲಿ ಮೇಲಿನ ಮಾತುಗಳು ಸರಿಯೆನಿಸಬಹುದು. ಆದರೆ ಕಾದಂಬರಿಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ, ಅದರ ಅಂತರಂಗದಲ್ಲಿಯೇ ಸಾವಯವ ಸಂಬಂಧಗಳಿಂದ ಕೂಡಿದ ಕಾದಂಬರಿಯ ಬೆಳವಣಿಗೆ ಹಾಗೂ ನಿರ್ದಿಷ್ಟ ಕೇಂದ್ರ ವಸ್ತುವೊಂದು ನಮಗೆ ಗೋಚರಿಸುತ್ತದೆ (ವರ್ತಮಾನ ಕಾಲದ ಸಾಹಿತ್ಯಿಕ ಆಯಾಮಗಳ ದೃಷ್ಟಿಯಿಂದ ಹೇಳುವುದಾದರೆ ಕಾದಂಬರಿ ಮೊದಲಾದ ಸಾಹಿತ್ಯ ರೂಪಗಳಿಗೆ ನಿರ್ದಿಷ್ಟ ಸಂವಿಧಾನವಾಗಲಿ, ಕೇಂದ್ರಸ್ಥ ವಸ್ತುವಾಗಲೀ ಅನಿವಾರ್ಯ ವೇನಲ್ಲ.)

ಕಾದಂಬರಿಯ ಶಿರೋನಾಮೆ ಸೂಚಿಸುವಂತೆ, ಮಲೆನಾಡು ಪ್ರದೇಶದ ಹೆಣ್ಣು ಗಂಡುಗಳ ಪರಸ್ಪರ ಪ್ರೇಮ–ಪ್ರಣಯ, ಮದುವೆ ಪ್ರಸಂಗಗಳನ್ನು ಚಿತ್ರಿಸುವುದು ಆ ಪ್ರಕ್ರಿಯೆಯಲ್ಲಿ ಕಷ್ಟ–ಸುಖ, ಸೋಲು–ಗೆಲುವು, ಸ್ಥಿತಿ-ಗತಿಗಳನ್ನು ಚಿತ್ರಿಸುವುದು. ಕಾದಂಬರಿಯ ಚೌಕಟ್ಟಿನಲ್ಲಿ ನಡೆಯುತ್ತದೆ. ಅದರಲ್ಲಿಯೂ ಆ ಪ್ರದೇಶದ ಹೆಣ್ಣಿನ ಪರಿಸ್ಥಿತಿಯನ್ನು ಕಾಣಿಸುವುದು ಕಾದಂಬರಿಯಲ್ಲಿ ವಿಶಿಷ್ಟತೆಯನ್ನು ಪಡೆದುಕೊಳ್ಳುತ್ತದೆ. ಆದರೆ ಇವಿಷ್ಟನ್ನೇ ಕಾದಂಬರಿಯ ಹಾಗೂ ಲೇಖಕರ ಉದ್ದೇಶವೆಂದು ಗ್ರಹಿಸುವುದಾದರೆ ಈ ಕಾದಂಬರಿಯ ಮಹತ್ವವನ್ನು ಅರಿತಂತೆ ಆಗುವುದಿಲ್ಲ. ಇದರ ಮಹತ್ವ ಮಲೆನಾಡು ಪ್ರದೇಶದ ದೈನಂದಿನ ಕ್ರಿಯೆ–ಪ್ರಕ್ರಿಯೆ ಹಾಗೂ ಆ ಪ್ರದೇಶದ ತಾತ್ವಿಕ ಬದುಕಿನ ಸಮಗ್ರತೆಯನ್ನು ಲೇಖಕ ತನ್ನ ಅರಿವನ್ನಾಗಿ ಮಾಡಿಕೊಂಡು ತುಂಬ ಕಲಾತ್ಮಕವಾಗಿ ಅಭಿವ್ಯಕ್ತಿಸುವುದರಲ್ಲಿದೆ. ಎಲ್ಲಕ್ಕಿಂತ ಮಿಗಿಲಾಗಿ ಈಗಾಗಲೇ ಆಳವಾಗಿ ಬೇರುಬಿಟ್ಟಿರುವ ಒಂದು 'ವ್ಯವಸ್ಥೆ'ಯ ಬುಡಕ್ಕೆ ಕೊಡಲಿ ಪೆಟ್ಟುಕೊಟ್ಟು ಅದನ್ನು ಸಂಸ್ಕರಿಸಲೆತ್ನಿಸುವ ಲೇಖಕರ ಬೌದ್ಧಿಕ ಮಹತ್ತು ಇಡೀ ಕಾದಂಬರಿಯಲ್ಲಿ ಒಳಸೂತ್ರವಾಗಿ ಕಾರ್ಯನಿರ್ವಹಿಸಿದೆ. ಅಂದರೆ ಈಗಾಗಲೇ ಸಂಸ್ಥಾಪಿತವಾಗಿರುವ ಒಂದು ಮಹತ್ವವಾದ ಸಂಸ್ಕೃತಿಯಲ್ಲಿಯೂ ಕೆಲವು ಲೋಪ ದೋಷಗಳು ಸೇರಿಕೊಂಡು ಇಡೀ ಸಂಸ್ಕೃತಿಗೆ ಕಳಂಕತರುವಂತಿರುತ್ತವೆ. ಈ ಕಳಂಕ ಗಳನ್ನು ಹೋಗಲಾಡಿಸಲು ಹಾಗೂ ಈ ಸಂಸ್ಕೃತಿಯನ್ನು ಸಂಸ್ಕರಿಸಲು ಕಾದಂಬರಿ ಪ್ರಯತ್ನಿಸುತ್ತದೆ. ಈ ಸಾಂಸ್ಕೃತಿಕ ಸಂಸ್ಕರಣವನ್ನು ಅದರ ಕಾರ್ಯವನ್ನು ಕಾದಂಬರಿಯಲ್ಲಿ ಗ್ರಹಿಸುವುದಾದರೆ, ಹಿಂದಿನ ವಿಮರ್ಶಕರ ಕಾದಂಬರಿಯ ವಸ್ತು ಹಾಗೂ ಸಂವಿಧಾನದ ಬಗ್ಗೆ ಇರುವ ಚಕಾರಗಳು ಅಷ್ಟು ಪ್ರಮುಖವಾಗುವುದಿಲ್ಲ. ಈ ಕ್ರಿಯೆಗೆ ಪೂರಕವಾಗಿ ಕಾದಂಬರಿಯಲ್ಲಿನ ಅವಯವಗಳು ಚಿತ್ರಿತವಾಗಿರುವುದನ್ನು ಕಾಣಬಹುದು. ಆದರೆ ಈ ಕ್ರಿಯೆಯೇ ಯಾಕೆ ಕಾದಂಬರಿಯಲ್ಲಿ ಪ್ರಧಾನವಾಗಿ ಕಾಣಿಸುವುದಿಲ್ಲ ಎಂಬ ಪ್ರಶ್ನೆ ಉದ್ಭವಿಸಬಹುದು. ಯಾವುದೇ ಒಂದು ಇರುವ

ವ್ಯವಸ್ಥೆಯನ್ನು ಮಾರ್ಪಡಿಸಲು ನೇರವಾಗಿ ಬೋಧನೆ ಮಾಡಿದರೆ ಸಾಧ್ಯವಾಗುವುದಿಲ್ಲ. ಅದಕ್ಕೆ ಸಮರ್ಥವಾದ 'ವಸ್ತುಪ್ರತಿರೂಪ'ವೊಂದು ಬೇಕಾಗುತ್ತದೆ. ಆ ನಿಟ್ಟಿನಲ್ಲಿ ಇಡೀ ಕಾದಂಬರಿ ಸ್ಪಂದಿಸುತ್ತದೆ. ಕಾದಂಬರಿಯಲ್ಲಿನ ದಟ್ಟವಾದ ಮಲೆನಾಡಿನ ಬದುಕಿನ ಅನುಭವ ಕೇಂದ್ರೋದ್ದೇಶವನ್ನು ಬಹಳ ಸೂಕ್ಷ್ಮವಾಗಿ ಕಾಣಿಸುತ್ತದೆ. ಆದರೆ ಕಾದಂಬರಿಯ ಕಥೆಯ ಹಂದರ ಮತ್ತು ಜೀವನ ವಿಧಾನ ಅಪ್ರಾಮುಖ್ಯವೆಂದಲ್ಲ. ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮಲೆನಾಡಿನ ಬದುಕು ಮತ್ತು ಸಂಸ್ಕೃತಿಯನ್ನು ಬೇರ್ಪಡಿಸಿ ಅಧ್ಯಯನ ಮಾಡಲು ಸಾಧ್ಯವೇ ಇಲ್ಲ. ಆ ರೀತಿಯ ಒಂದು ಸಾತತ್ಯ ಅಭಿವ್ಯಕ್ತಿ ಕಾದಂಬರಿಯಲ್ಲಿ ಸಾಧ್ಯವಾಗಿದೆ. ಈ ಹಿಂದೆ ಎತ್ತಿದ ವಿಮರ್ಶಕರ ಪ್ರಶ್ನೆ ಹಾಗೂ ಅನುಮಾನಗಳಿಗೆ ಈ ಅರಿವು ಸರಿಯೆನಿಸಬಹುದು.

'ಪಾರುಮಾಡುವ ಹಾಗೂ ಪಾರಾಗುವ' ಐಕ್ಯಸೂತ್ರ ಮತ್ತು ಕೇಂದ್ರ ದೃಷ್ಟಿಯನ್ನು ಎಚ್. ಎಂ. ಚನ್ನಯ್ಯನವರು ಗುರುತಿಸಿರುವುದು ಸರಿಯೆನಿಸಿದರೂ ಬಹುಶಃ ಇದನ್ನು ಒಂದು ತಂತ್ರವೆಂದು ಪರಿಗಣಿಸಿದರೆ ಸೂಕ್ತವೆನ್ನಿಸುತ್ತದೆ.

ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮಲೆನಾಡಿನ ಬದುಕು ಉಪಸಂಸ್ಕೃತಿಗಳಿಂದ ಕೂಡಿದ ಒಂದು ಮಹತ್ವಪೂರ್ಣವಾದ ಸಂಸ್ಕೃತಿಯನ್ನು ಹೊಂದಿದೆ. ಈ ಸಾಂಸ್ಕೃತಿಕ ಮಹತ್ವವನ್ನು ಹೊಂದಿರುವ ಮಲೆನಾಡಿನ ಬದುಕಿನಲ್ಲಿ ವೈವಿಧ್ಯಪೂರ್ಣವಾದ ಜನಾಂಗ, ಆಚಾರ–ವಿಚಾರ, ಉಡುಗೆ–ತೊಡುಗೆ ಮೊದಲಾದ ಮಾನವನ ಬದುಕಿನ ಸ್ವರೂಪಗಳು ಕಂಡುಬರುತ್ತವೆ. ಇಂಥ ಬದುಕನ್ನು ಬಹಳ ಸೂಕ್ಷ್ಮವಾಗಿ ಹಾಗೂ ವೈಚಾರಿಕವಾಗಿ ಲೇಖಕರು ಚಿಕಿತ್ಸೆಗೆ ಒಳಗುಮಾಡಿದ್ದಾರೆ. ಆದರಲ್ಲೂ ಯೌವನಸ್ಥ ಹೆಣ್ಣು ಗುಂಪುಗಳಲ್ಲಿನ ಸಹಜವಾದ ಪ್ರೇಮ ಹಾಗೂ ಕಾಮದ ಚೌಕಟ್ಟಿನಲ್ಲಿ ಬಗೆಗೆ ಚಿತ್ರಿಸಿರುವುದು ಓದುಗರಲ್ಲಿ ವಿಸ್ಮಯವನ್ನುಂಟುಮಾಡುತ್ತದೆ. ಕಾದಂಬರಿಯು ಪ್ರೇಮ–ಪ್ರಣಯವನ್ನು ವಿವಿಧ ಕೋನಗಳಿಂದ ವೀಕ್ಷಿಸಿ ಸಂಗತವಾದುದು ಮತ್ತು ಅಸಂಗತವಾದುದನ್ನು ಬೋಧನೆಯ ರೀತಿಯಲ್ಲಿ ಹೇಳದೆ ತುಂಬ ಜಾಣ್ಮೆಯಿಂದ ಸೂಚಿಸಿಬಿಡುತ್ತಾರೆ. ಈ ಸೂಚನೆಗಳು ಆಧುನಿಕ ಮನೋಧರ್ಮದ ಪ್ರೇಮಿಗಳಿಗೂ ಸೂಕ್ತವಾದ ರೀತಿಯಲ್ಲಿವೆ.

ಪರಸ್ಪರ ಹೆಣ್ಣು ಗಂಡುಗಳು ತಮಗೆ ಒಲಿದವರನ್ನು ಸಂಗಾತಿಗಳನ್ನಾಗಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮಲೆನಾಡು ಪ್ರದೇಶದ ಜನತೆಗೆ ಇಲ್ಲದಿರುವುದು ಕಾದಂಬರಿಯಲ್ಲಿ ತಿಳಿದುಬರುತ್ತದೆ. ಅದೇನಿದ್ದರೂ ಮನೆಯ ಅಥವಾ ಕುಲದ ಯಜಮಾನನ ನಿರ್ದೇಶನದ ಮೇರೆಗೆ ನಡೆಯಬೇಕಾದ ಒಂದು ಬಾಹ್ಯ ಕ್ರಿಯೆಯಷ್ಟೆ. ಇನ್ನು ಕೆಳವರ್ಗದ ಜನತೆಯಂತೂ, ಮದುವೆಯೆಂಬುದು ತಮಗೆ ಮಾತ್ರ ಸಂಬಂಧಿಸಿದ ಸತ್ಕ್ರಿಯೆ ಎಂಬುದರ ತಿಳುವಳಿಕೆಯೂ ಇಲ್ಲದಹಾಗೆ ಅವರಲ್ಲಿ ಯಜಮಾನ ಸಂಸ್ಕೃತಿ ಬಲವಂತಗಳನ್ನು ಹೇರಿದೆ. ಪರಸ್ಪರ ಹೆಣ್ಣು ಗಂಡುಗಳು ಒಲಿಯುವುದಿರಲಿ ಆ ಹೆಣ್ಣುಗಂಡುಗಳ ತಂದೆ ತಾಯಿಯರ ಒಪ್ಪಿಗೆಯ ಮೇರೆಗೂ ಅಲ್ಲಿ ಮದುವೆಗಳು

ನಡೆಯುವಂತಿಲ್ಲ. ಅವರಿಗೆ ಅನ್ನ ಹಾಕುವ ಒಡೆಯನ ಅಪ್ಪಣೆಯ ಮೇರೆಗೆ ಒಡೆಯನೇ ಸೂಚಿಸಿದ ಹೆಣ್ಣು ಅಥವಾ ಗಂಡಿಗೆ ಮದುವೆ ಮಾಡಬೇಕೆಂಬ ಆಜ್ಞೆಯನ್ನು ಕೆಳವರ್ಗದವರು ಶಿರಸಾವಹಿಸಿ, ಅದನ್ನು ಒಂದು ಕರ್ತವ್ಯವೆಂಬಂತೆ ನೆರವೇರಿಸಬೇಕು. ಒಂದು ವೇಳೆ ಆ ಆಜ್ಞೆಯನ್ನು ಮೀರಿದ್ದಾದರೆ ಅವರಿಗೆ ಉಳಿಗಾಲವಿಲ್ಲ. ಇಲ್ಲೆಲ್ಲಾ ಒಡೆಯರ ಸ್ವಾರ್ಥ ಎದ್ದು ಕಾಣುತ್ತದೆ. ತಮ್ಮ ಉದ್ದೇಶಕ್ಕೆ ವ್ಯತಿರಿಕ್ತವಾಗಿ ನಡೆದರೆ ತಮ್ಮ ಜೀತಕ್ಕೆ ಒಂದು ಆಳು ಕಡಿಮೆ ಆಗುತ್ತದೆ. ಆದ್ದರಿಂದ ಒಂದು ಹೊಸ ಹೆಣ್ಣನ್ನು ತಮ್ಮ ಜೀತಕ್ಕೆ ಸೇರಿಸಿಕೊಳ್ಳುವ ಉದ್ದೇಶದಿಂದ, ಪಟ್ಟುಹಿಡಿದು ಮದುವೆ ಮಾಡಿಸುತ್ತಿದ್ದರೇ ಹೊರತು ಅವರು ದಾಂಪತ್ಯ ಸುಖವನ್ನು ಅನುಭವಿಸುವುದಕ್ಕಲ್ಲ, ಅವೇನಿದ್ದರೂ ಅನಂತರದವು.

ಕೆಳವರ್ಗದಿಂದ ಹಿಡಿದು ಮೇಲ್ವರ್ಗದ ಹೆಣ್ಣು ಗಂಡಿನ ಆಯ್ಕೆ, ಮದುವೆ ಮೊದಲಾದ ಕ್ರಿಯೆಗಳು ಕಾದಂಬರಿಯಲ್ಲಿ ಒಂದು ವಿಶಾಲ ಪ್ರಪಂಚವಾಗಿ ರೂಪ ಪಡೆದಿವೆ. ಈ ಎಲ್ಲ ಕ್ರಿಯೆ ಪ್ರಕ್ರಿಯೆಗಳನ್ನು ಲೇಖಕರು ತುಂಬ ಹತ್ತಿರದಿಂದ ಬಲ್ಲವರಾದ್ದರಿಂದ ಸಹಜ ಅಭಿವ್ಯಕ್ತಿಯಲ್ಲಿ ಕಲಾತ್ಮಕತೆಯನ್ನು ಸಾಧಿಸಿದ್ದಾರೆ. ಕಾದಂಬರಿಯನ್ನು ಓದುತ್ತಿದ್ದಂತೆಯೇ ಮಲೆನಾಡಿನ ಪ್ರೇಮ, ಪ್ರಣಯ, ಮದುವೆಯ ಘಟಾವಳಿಗಳು ಕಣ್ಣೆದುರು ನಿಲ್ಲುತ್ತವೆ. ಅಂತಹ ಸಾಕ್ಷಾತ್ಕಾರ ಸನ್ನಿವೇಶವನ್ನು ಲೇಖಕರು ತುಂಬ ಸಮರ್ಥವಾಗಿ ನಿರ್ಮಾಣಮಾಡಿದ್ದಾರೆ.

ಯಜಮಾನ ಸಂಸ್ಕೃತಿಯ ದೃಷ್ಟಿಯಿಂದ, ಗುತ್ತಿ–ತಿಮ್ಮಿಯರ ಮದುವೆ ಹಾಗೂ ಮುಕುಂದಯ್ಯ-ಚಿನ್ನಮ್ಮರ ಮದುವೆ ನಿಷಿದ್ಧ. ಗುತ್ತಿ ಹಾಗೂ ತಿಮ್ಮಿ ಪರಸ್ಪರರು ಪ್ರೇಮಿಸಿ ಒಲಿದಿದ್ದರೂ ಮದುವೆಯಾಗುವಂತಿಲ್ಲ. ಬೆಟ್ಟಳ್ಳಿ ಕಲ್ಲೇಗೌಡರ ಆಜ್ಞೆಯಂತೆ ಬಚ್ಚನಿಗೇ ತಿಮ್ಮಿಯನ್ನು ಕೊಟ್ಟು ಮದುವೆ ಮಾಡಬೇಕು. ಒಂದು ವೇಳೆ ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ಹಲವಾರು ಅನಾಹುತಗಳಾಗುತ್ತವೆ. ಮೊದಲನೆಯದಾಗಿ ಗುತ್ತಿ ಸಿಂಬಾವಿಯ ಭರಮೈಹೆಗ್ಗಡೆಯ ಜೀತದಾಳಾದ್ದರಿಂದ, ಮೂಲತಃ ವೈರಿಯಾದ ಭರಮೈ ಹೆಗ್ಗಡೆಗೆ ಸೋತಂತಾಗುತ್ತದೆ. ಜೊತೆಗೆ ತಮ್ಮ ಗಟ್ಟಿದ ಒಬ್ಬ ಆಳು ಕಡಿಮೆಯಾದಂತಾಗುತ್ತದೆ. ಇದು ಗೌಡರಿಗಾಗುವ ಅನಾನುಕೂಲವಾದರೆ, ತಿಮ್ಮಿಯ ಅಪ್ಪ ದೊಡ್ಡಬೀರ ಮತ್ತು ಅಣ್ಣಂದಿರಿಗೆ ನರಕ ಶಿಕ್ಷೆ. ಇದು ಕಾದಂಬರಿಯಲ್ಲಿ ಘಟಿಸಿಯೇ ಬಿಡುತ್ತದೆ. ಇಷ್ಟೆಲ್ಲಾ ಆದರೂ ಈ ಸಂದರ್ಭದಲ್ಲಿ ಪ್ರಗತಿಪರರೂ ವಿಚಾರವಂತರೂ ಆದ ಕಾದಂಬರಿಕಾರರು ' ಪಾರುಮಾಡುವ ಪಾರಾಗುವ ತಂತ್ರ'ದ ಮೂಲಕ ಪರಸ್ಪರ ಒಲಿದ ತಿಮ್ಮಿ ಮತ್ತು ಗುತ್ತಿಯರು ತಲೆಮರೆಸಿಕೊಂಡು ಹೋಗುವಂತೆ ಮಾಡಿ ಸಾಂಸ್ಥಿಕ ಸಂಸ್ಕೃತಿಗೆ ಹೊಡೆತ ಹಾಕಿದ್ದಾರೆ.

ಮುಕುಂದಯ್ಯ ಚಿನ್ನಮ್ಮರ ಪ್ರೇಮ ಇನ್ನೂ ಸಂಕೀರ್ಣವಾದುದು. ಗುತ್ತಿ ತಿಮ್ಮಿಯರ ಹಾಗೆ ಇವೇ ಜನ್ಮದ ಇದೇ ಕಾಲದ ಪ್ರೀತಿಯಾಗಿದ್ದರೆ ಅದು ಅಷ್ಟು ಮಹತ್ವ ಪಡೆಯುತ್ತಿರಲಿಲ್ಲ. ಆದರೆ ಇವರಿಬ್ಬರೂ ಹಿಂದಿನ ಜನ್ಮದಲ್ಲೂ ದಂಪತಿಗಳು.

ಜೊತೆಗೆ ಈ ಜನ್ಮದ ಹುಟ್ಟಿನಿಂದಲೂ ಅಪ್ರಜ್ಞಾಪೂರ್ವಕವಾಗಿಯೇ ಅವರಲ್ಲಿ ದಾಂಪತ್ಯ ಮನೋಭಾವ ಬೆಳೆದು ಬಂದಿದೆ. ಅವರು ಒಬ್ಬರನ್ನೊಬ್ಬರು ವಿಶೇಷವಾಗಿ ನೋಡಬಲ್ಲರು, ಅರಿಯಬಲ್ಲರು, ಸವಿಯಬಲ್ಲರು. ಹೀಗೆ ಜನ್ಮಾಂತರಗಳ ಸಂಬಂಧವಿದ್ದರೂ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಅವರು ಕಷ್ಟಪಡಬೇಕಾಗುತ್ತದೆ. ಆದರೆ ಕುಲುಮೆಯಲ್ಲಿ ಕಾಯ್ದು ಪುಟವಿಟ್ಟ ಅಪರಂಜಿಯಂತೆ ಅವರ ಪ್ರೇಮ ಮುಂದೆ ಸಮೃದ್ಧಿಯಾಗುವುದನ್ನು ಕಾಣುತ್ತೇವೆ. ಚಿನ್ನಮ್ಮಳ ತಂದೆ ಸಾಲದ ಶೂಲಕ್ಕೆ ಸಿಲುಕಿ ಒದ್ದಾಡುತ್ತಿರುವಾಗ ಚಿನ್ನಮ್ಮಳೇ 'ಅಡವಿಡುವ ಬಂಗಾರದಂತೆ' ಅವನಿಗೆ ಗೋಚರವಾಗುತ್ತಾಳೆ. ಆ ಶೂಲದಿಂದ ಮುಕ್ತನಾಗಲು ವಯೋವೃದ್ಧ ಹಾಗೂ ಈಗಾಗಲೇ ಅನೇಕ ಹೆಂಡತಿಯರನ್ನು ಪಡೆದೂ ಹೊಂದಿಲ್ಲದವನಾದ ಭರಮೈ ಹೆಗ್ಗಡೆಗೆ ಮದುವೆ ಮಾಡಿಕೊಡಲು ನಿಶ್ಚಯಿಸಿರುವುದು ಚಿನ್ನಮ್ಮ ಹಾಗೂ ಮುಕುಂದಯ್ಯರಿಗೆ ನುಂಗಲಾರದ ಕಬ್ಬಿಣದ ಗುಳಿಗೆಯಾಗುತ್ತದೆ. ಹೀಗೆ ಕಷ್ಟಕ್ಕೆ ಸಿಲುಕಿರುವ ಚಿನ್ನಮ್ಮನನ್ನು ಪಾರುಮಾಡಿ ತಾನು ಅವಳನ್ನು ಪಡೆಯುವ ಮುಖಾಂತರ ತನ್ನ ವೈಯಕ್ತಿಕ ವಿರಹ-ವ್ಯಥೆಗಳಿಂದ ಪಾರಾಗಿ ಜನ್ಮಾಂತರಗಳ ಸಂಬಂಧವನ್ನು ಮರುಸ್ಥಾಪನೆ ಮಾಡುವ ಪ್ರಕ್ರಿಯೆಯಲ್ಲಿ ಮುಕುಂದಯ್ಯ ಯಶಸ್ವಿಯಾಗುತ್ತಾನೆ.

ಹೀಗೆ ಗುತ್ತಿ-ತಿಮ್ಮಿ ಹಾಗೂ ಮುಕುಂದಯ್ಯಚಿ – ನ್ನಮ್ಮರ ಸಮಾಗಮದ ಮಹತ್ವ ಬೇರೆ ಬೇರೆಯಾದರೂ ಕೊನೆಗೆ ಸುಖಾಂತವಾಗುವುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಹುಲಿಕಲ್ಲುನೆತ್ತಿಯ ಮಹತ್ವವನ್ನು ಮರೆಯುವಂತಿಲ್ಲ. ಹೆಸರಿಗೆ ಮಾತ್ರ ಅದು ಹುಲಿಕಲ್ಲುನೆತ್ತಿಯಾದರೂ ಜಡ್ಡುಗಟ್ಟಿ ನಿಂತ ಸಂಸ್ಕೃತಿಯ ಅಮಾನವೀಯತೆಗೆ ಸಿಲುಕಿ ತಮ್ಮ ಹುಟ್ಟಿನ ಸಾರ್ಥಕ್ಯವನ್ನೇ ಕಳೆದುಕೊಳ್ಳುತ್ತಿದ್ದ, ತಮ್ಮ ಅಸ್ತಿತ್ವವನ್ನೇ ಇಲ್ಲವಾಗಿಸಿಕೊಳ್ಳುತ್ತಿದ್ದ ಎರಡು ಜೋಡಿಗಳಿಗೆ ಆಶ್ರಯ ನೀಡಿದ ತಾಣ ಅದು. ಪರಸ್ಪರ ದೂರವಾಗುತ್ತಿದ್ದ ಜೀವಗಳನ್ನು ತುಂಬಾ ಹತ್ತಿರಕ್ಕೆ ಕೂಡಿಸಿದ ಹೆಗ್ಗಳಿಕೆ 'ಹುಲಿಕಲ್ಲು ನೆತ್ತಿ'ಯದು. ಅದು ಕಲ್ಲಾದರೂ ಹಲವಾರು ಹೂವುಗಳು ಅರಳಿ ತಮ್ಮ ಸಾರ್ಥಕತೆಯನ್ನು ಸಾಧಿಸಿಕೊಂಡ, ತಮ್ಮ ಬಯಕೆಯನ್ನು ಈಡೇರಿಸಿಕೊಂಡ ಸ್ಥಾನಮಹಿಮೆ ಅದಕ್ಕಿದೆ. ಚಿಕ್ಕಮ್ಮ ಹಾಗೂ ತಿಮ್ಮಿಯರ ತವರುಮನೆಯೆ 'ಹುಲಿಕಲ್ಲು ನೆತ್ತಿ' ಎಂದರೂ ತಪ್ಪಾಗಲಾರದು. ಆದ್ದರಿಂದ ಗುತ್ತಿ—ತಿಮ್ಮಿ ಹಾಗೂ ಮುಕುಂದಯ್ಯ—ಚಿನ್ನಮ್ಮ ಇಡೀ ತಮ್ಮ ಪ್ರಾಪಂಚಿಕ ಸಂಬಂಧವನ್ನೇ ಮರೆತರೂ ಈ ತವರು ಮನೆಯನ್ನು ಮರೆಯುವಂತಿಲ್ಲ. ಚಿನ್ನಮ್ಮ ಹಾಗೂ ತಿಮ್ಮಿ ತಮ್ಮ ತವರಿನಲ್ಲಿ ಅನುಭವಿಸಬೇಕಾದ ನಿಜವಾದ ತಾಯ್ತನ ಹಾಗೂ ಪ್ರೀತಿಯನ್ನು ಹುಲಿಕಲ್ಲು ನೆತ್ತಿಯಲ್ಲಿ ಅನುಭವಿಸುತ್ತಾರೆ. ಪರಿಸ್ಥಿತಿಯ ಕ್ರೂರ ಮುಷ್ಟಿಯಿಂದ ತಪ್ಪಿಸಿಕೊಂಡು, ಭಯ ಮತ್ತು ಆತಂಕವನ್ನೇ ಉಸಿರಾಡುತ್ತಾ ಹುಲಿಕಲ್ಲುನೆತ್ತಿಗೆ ಓಡಿಬಂದಾಗ, ಆ ಜಾಗ ಅಂತಹ ಸಂಕೀರ್ಣ ಸಂದರ್ಭದಲ್ಲಿ ಅವರನ್ನು ತಾಯಾಗಿ ತಟ್ಟಿ ಮಲಗಿಸುತ್ತದೆ. ಅವರಿಬ್ಬರೂ ಸುಖವಾಗಿ ನಿದ್ರಿಸುತ್ತಾರೆ.

ಆದ್ದರಿಂದ ಹುಲಿಕಲ್ಲುನೆತ್ತಿಯನ್ನು 'ಕಾದಂಬರಿ ರಾಜ್ಯದ ರಾಜಧಾನಿ' ಎಂದೇ ಕರೆಯಬಹುದು. ಈ ಸ್ಥಳಕ್ಕೆ ಒಂದು ಸಾಂಸ್ಕೃತಿಕ ಮಹತ್ವ ಲಭಿಸುತ್ತದೆ. ಹಾಗಾಗಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹೃದಯದ ಭಾಗ ಇದು.

ಗುತ್ತಿ–ತಿಮ್ಮಿ, ಮುಕುಂದಯ್ಯ–ಚಿನ್ನಮ್ಮರ ಪ್ರೇಮ-ಪ್ರಣಯ ಒಂದು ರೀತಿಯಾದರೆ, ಐತ-ಪೀಂಚಲುರವರ ಪ್ರೇಮಲೋಕವೇ ಬೇರೆ. ಅವರು ಪ್ರೇಮವನ್ನೇ ಬಟ್ಟೆಯಾಗಿ ಧರಿಸಬಲ್ಲರು, ಊಟವಾಗಿ ಉಣ್ಣಬಲ್ಲರು, ಗಾಳಿಯನ್ನಾಗಿ ಉಸಿರಾಡಬಲ್ಲರು, ನೀರಾಗಿ ಕುಡಿಯಬಲ್ಲರು, ಸೌಂದರ್ಯವಾಗಿ ಸವಿಯಬಲ್ಲರು, ದೇಹಸುಖವನ್ನಾಗಿ ಅನುಭವಿಸಬಲ್ಲರು. ಅವರದು ನಿರ್ಮಲವಾದ ಪ್ರೇಮಮಯವಾದ ಬದುಕು. ಇವರ ಪ್ರೇಮ ಕುಸುಮಕ್ಕೆ ಯಾವುದೇ ಅಡ್ಡಿ ಆತಂಕಗಳೂ ಇಲ್ಲ. ಆದರೆ ಇವರ ಇಂಥ ಗಾಢಪ್ರೇಮವನ್ನು ಕಂಡು ಸಹಿಸದ ಕೆಲವರ ಅಸೂಯೆಯ ಮಾತುಗಳಿಂದ ಒಂದು ಕ್ಷಣ ಐತನ ಮನಸ್ಸು ವಿಚಲಿತವಾದರೂ, ತಕ್ಷಣವೇ ಆ ಅನುಮಾನಗಳು ಮಾಯವಾಗಿ ಪ್ರೇಮಾರಾಧಕನಾಗುತ್ತಾನೆ. ಪೀಂಚಲು ಮತ್ತು ಐತ ರತಿಮನ್ಮಥರೇನಲ್ಲ, ಶ್ರೀಮಂತರೂ ಅಲ್ಲ, ಸಾಲದ್ದಕ್ಕೆ ಉನ್ನತ ವರ್ಗದವರೂ ಅಲ್ಲ– ಹೀಗೆ ಬದುಕಿನ ಎಲ್ಲ ಸ್ತರಗಳಲ್ಲಿಯೂ ಕೆಳವರ್ಗದವರೇ ಆದರೂ ಪ್ರೇಮಿಗಳಾಗಿ ಇಡೀ ಮಲೆನಾಡು ಸೀಮೆಗೇ ಶ್ರೀಮಂತರು. ಇವರ ಪ್ರಣಯದ ಸಂದರ್ಭದಲ್ಲಿ ಬಾಹ್ಯ ಕ್ಲೇಶಗಳಾದ ಇವಾವುವೂ ಪ್ರವೇಶಿಸುವುದಿಲ್ಲ. ಲೇಖಕರು ಮಾನವಸಹಜವಾದ ಈ ಸನ್ನಿವೇಶವನ್ನು ಮನಬಿಚ್ಚಿ ವರ್ಣಿಸುತ್ತಾರೆ. ನಮ್ಮ ಮುಂದೆ ನಡೆಯುತ್ತಿರುವಂತೆ ಸನ್ನಿವೇಶವನ್ನು ನಿರ್ಮಾಣಮಾಡುತ್ತಾರೆ. ಲೇಖಕರ ಪ್ರಗತಿಪರ ಧೋರಣೆ ಗರಿಬಿಚ್ಚಿ ಹರಡಿದೆ. ದಂಪತಿಗಳಿಬ್ಬರೂ ಸಹೃದಯಿಗಳಾದರೆ ಅವರ ಸಾಂಸಾರಿಕ ಜೀವನ ಯಾವುದೇ ಕೀಟಲೆಗಳಿಲ್ಲದೆ ಸುಸಂಗತವಾಗಿ ಸಾಗುತ್ತದೆ ಎಂಬುದಕ್ಕೆ ಐತ–ಪೀಂಚಲು ಮಾದರಿಗಳಾಗಿ ನಿಲ್ಲುತ್ತಾರೆ.

ಮೇಲೆ ಹೇಳಿದಂತೆ ಮುಕುಂದಯ್ಯ–ಚಿನ್ನಮ್ಮ, ಗುತ್ತಿ–ತಿಮ್ಮಿ ವ್ಯವಸ್ಥೆಯ (ಸಂಸ್ಕೃತಿ) ವಿರುದ್ಧ ಹೋರಾಡಿ ಜಯಗಳಿಸಿದರೆ, ಐತ–ಪೀಂಚಲು ವ್ಯವಸ್ಥೆಯೊಳಗಿದ್ದುಕೊಂಡೇ ತಮ್ಮ ಅಸ್ತಿತ್ವವನ್ನು ರೂಪಿಸಿಕೊಂಡಿರುವುದು ಕಂಡುಬರುತ್ತದೆ. ಆದರೆ ಅಕ್ಕಣಿ, ನಾಗಕ್ಕ, ಕಾವೇರಿ, ಚೀಂಕ್ರ ಮೊದಲಾದವರ ಪ್ರೇಮ ಸ್ವರೂಪವೇ ಬೇರೆ. ಅಕ್ಕಣಿ ತನಗೆ ಸಿಗಬೇಕಾದ ದೇಹಸುಖ ಸಿಗದಿದ್ದಾಗ ಚೀಂಕ್ರ ನಂತಹವರಿಂದ ಅದನ್ನು ಪಡೆಯಲು ಹಿಂಜರಿಯುವುದಿಲ್ಲ. ಇಲ್ಲಿ ಲೇಖಕರು ಮಾನವಸಹಜವಾದ ಭಾವನೆಗಳನ್ನು ಬಯಕೆಗಳನ್ನು ಪ್ರತಿಯೊಬ್ಬರೂ ಹೌದು ಎನ್ನುವಂತೆ ಈ ಸಂದರ್ಭದಲ್ಲಿ ಕಡೆದು ನಿಲ್ಲಿಸಿದ್ದಾರೆ. ಆದರೆ ಈ ಅಕ್ಕಣಿ ತನ್ನ ಗಂಡ ತನ್ನಿಂದ ಏನನ್ನು ನಿರೀಕ್ಷಿಸಬಹುದೋ ಅದೇ ರೀತಿ ನಡೆದುಕೊಳ್ಳುತ್ತಾಳೆ; ಅವನಿಗೆ ಅಪಚಾರ ಮಾಡುವುದಿಲ್ಲ. ಆದ್ದರಿಂದ ಅಕ್ಕಣಿಯ ವ್ಯಕ್ತಿತ್ವ ತುಂಬ ಸಂಕೀರ್ಣವಾದಂತೆ ಚಿತ್ರಿತವಾಗಿದೆ. ನಾಗಕ್ಕ ತನ್ನ ಅತ್ತೆಯಾದ ಹಾಗೂ ಹೂವಳ್ಳಿ ಚಿನ್ನಮ್ಮಳ ತಂದೆಯಾದ ವೆಂಕಟಪ್ಪನಾಯಕರ

ಕಾಮಯುಕ್ತ ಕ್ರೂರದೃಷ್ಟಿಗೆ ಸಿಲುಕಿ ಬಿಡಿಸಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾಳೆ. ಇಲ್ಲಿಂದ ಮುಕ್ತವಾಗಿ ಎಲ್ಲಿಗೆ ಹೋಗುವುದು? ಅಲ್ಲಿಯೂ ಅದೇರೀತಿಯ ಜನ. ವ್ಯವಸ್ಥೆಯಿದೆ ಆದ್ದರಿಂದ ಜೀವನದಲ್ಲಿ ತನ್ನ ಅಸ್ತಿತ್ವದ ಸಾರ್ಥಕತೆಯನ್ನು ಚಿನ್ನಮ್ಮಳ ಯೋಗಕ್ಷೇಮದಲ್ಲಿ ಕಂಡುಕೊಳ್ಳುತ್ತಾಳೆ. ಕೊನೆಗೆ ಚಿನ್ನಮ್ಮಳ ಒಲವು ಮತ್ತು ಯೋಗಕ್ಷೇಮಕ್ಕಾಗಿ ತನ್ನನ್ನೇ ಸಮರ್ಪಿಸಿಕೊಂಡು, ಯಾವುದೇ ಪ್ರತಿಭಟನೆಯಿಲ್ಲದೆ ಅಥವಾ ಸಹಜ ಲಕ್ಷಣಗಳಾದ ಬಯಕೆಗಳಿಲ್ಲದೆ ವೆಂಕಟಪ್ಪನಾಯಕರಿಗೆ ಪಾಲುದಾರಳಾಗುತ್ತಾಳೆ.

ಹೀಗೆ ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಪ್ರೇಮ-ಪ್ರಣಯ-ಕಾಮದ ಪ್ರಪಂಚ ವಿಶಿಷ್ಟವಾದುದು. ಒಂದೆಡೆ ಸಹಜ ಪ್ರೇಮ ಜೀವಂತವಾಗಿದ್ದರೆ ಮತ್ತೊಂದೆಡೆ ಹೋರಾಟದ ಪ್ರೇಮ, ಇನ್ನೊಂದು ಕಡೆ ವಿಕೃತ ಕಾಮ ಚಿತ್ರಿತವಾಗಿದೆ. ಲೇಖಕರು ಇಲ್ಲೆಲ್ಲಾ ಪ್ರೇಮ-ಪ್ರಣಯ ಹಾಗೂ ಕಾಮದ ಸಹಜ ಸ್ವಭಾವ ಮತ್ತು ವಿವಿಧಮುಖಗಳನ್ನು ಕಂಡು ಅದನ್ನು ಕಲಾತ್ಮಕವಾಗಿ ಹಿಡಿದಿಡುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲಿ ಯಾವುದು ಸಂಗತ ಯಾವುದು ಅಸಂಗತ ಎಂಬುದರ ವಿವೇಚನೆಯಿದೆ.

ಮಲೆನಾಡು ಸಂಸ್ಕೃತಿಯ ಹಿನ್ನೆಲೆಯಿಂದಲೇ ಅಲ್ಲಿನ ದುಡಿವವರ್ಗವನ್ನು ಅವರ ಜೀವನ ವಿಧಾನವನ್ನು, ಅವರು ಮತ್ತು ಅವರ ಒಡೆಯರ ನಡುವಿನ ಸಂಬಂಧವನ್ನೂ ಅರ್ಥೈಸಬೇಕಾಗುತ್ತದೆ. ಇಲ್ಲಿ ಸಾಮಾಜಿಕವಾಗಿ ಮಧ್ಯಮ ವರ್ಗದವರಾದ ಗೌಡರೆ ಇಡೀ ಬದುಕಿನ ಜವಾಬುದಾರಿಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಸ್ವಾರಸ್ಯವೆಂದರೆ ಗೌಡರನ್ನು ಬಿಟ್ಟರೆ ದುಡಿಯುವವರಿಗೆ ಬದುಕಿಲ್ಲ; ಆಳುಗಳನ್ನು ಬಿಟ್ಟರೆ ಜಮೀನ್ದಾರರಾದ ಗೌಡರಿಗೆ ಗತಿಯಿಲ್ಲ. ಈ ರೀತಿಯ ಪರಸ್ಪರ ಅವಲಂಬಿತ ಬದುಕು ಅಲ್ಲಿನ ಎಲ್ಲ ಜನತೆಯದಾಗಿದೆ. ಆದರೆ ಮಲೆನಾಡಿನ ಜಮೀನ್ದಾರರಾದ ಗೌಡರು ದುಡಿಯುವವರನ್ನು (ಜೀತದಾಳುಗಳನ್ನು) ಸ್ವಲ್ಪ ಕಠಿಣವಾಗಿಯೇ ನಡೆಸಿಕೊಳ್ಳುವುದು ಕಂಡುಬರುತ್ತದೆ. ಪರಿಸ್ಥಿತಿ ಹೀಗಿದ್ದರೂ ಅಲ್ಲಿನ ದುಡಿವವರ್ಗ ಮೇಲ್ವರ್ಗದ ಕಪಿಮುಷ್ಟಿಗೆ ಸಿಲುಕದೆ ಪಾರಾಗುವುದೇ ಕಾದಂಬರಿಯ ಉದ್ದಕ್ಕೂ ಕಂಡುಬರುತ್ತದೆ. ಗೌಡ ಅಥವಾ ಹೆಗ್ಗಡೆ ದುಡಿಯುವ ಸಂದರ್ಭದಲ್ಲಿ ಎದುರಿಗಿದ್ದಾಗ ಅವರಿಗೆ ಭಯಭಕ್ತಿಗಳಿಂದ ಗೌರವ ನೀಡಿ ದುಡಿದರೆ, ಅವರಿಲ್ಲದ ಸಂದರ್ಭದಲ್ಲಿ ಪುನಃ ಸಹಜ ಬದುಕಿಗೆ ಹಿಂದಿರುಗಿ ತಮ್ಮ ಸ್ವಂತ ಅಭಿಲಾಷೆಗನುಗುಣವಾಗಿ ನಡೆದುಕೊಳ್ಳುತ್ತಾರೆ. ಕಾದಂಬರಿಯಲ್ಲಿ ಬರುವ ಭರಮೈ ಹೆಗ್ಗಡೆ, ಸುಬ್ಬಣ್ಣ ಹೆಗ್ಗಡೆ, ಕಲ್ಲೇಗೌಡ ಮೊದಲಾದವರು ಯಜಮಾನ ಸಂಸ್ಕೃತಿಯ ಪ್ರತೀಕವಾದರೆ; ಗುತ್ತಿ, ಬಚ್ಚ, ಐತ, ಸಣ್ಣಕುಳ್ಳ, ದೊಡ್ಡಬೀರ ಮೊದಲಾದವರು ದುಡಿವ ವರ್ಗದ ಪ್ರತೀಕವಾಗುತ್ತಾರೆ. ಈ ನಡುವೆ ಗುತ್ತಿ, ಐತ ಮತ್ತು ಮುಕುಂದಯ್ಯ ದೇವಯ್ಯನವರ ನಡುವಿನ ನಡವಳಿಕೆ ಸ್ವಲ್ಪ ವಿಚಾರಾರ್ಹವಾದುದು. ಇಲ್ಲಿ ಗುತ್ತಿ

ಮತ್ತು ಐತ ಮಾಮೂಲಿ ದುಡಿಯುವವರೇ. ಮುಕುಂದಯ್ಯ ಮತ್ತು ದೇವಯ್ಯ ಯಜಮಾನಿಕೆ ಮನೆತನದಿಂದ ಬಂದಿದ್ದರೂ ಹಿಂದಿನ ಮನೆತನದ ದರ್ಪ, ಅಹಂಕಾರ ಮೊದಲಾದ ರೂಕ್ಷ ಗುಣಗಳು ಇವರಲ್ಲಿಲ್ಲ. ಅದರಲ್ಲೂ ಮುಕುಂದಯ್ಯ ಒಬ್ಬ ಸ್ನೇಹಮಯಿ. ಹಲಸರವನಾದ ಐತನೊಡನೆ, ಹೊಲೆಯನಾದ ಗುತ್ತಿಯೊಡನೆ ತುಂಬ ಸಲಿಗೆಯಿಂದ ನಡೆದುಕೊಳ್ಳುವಂತಹವನು. ಹಾಗೆಯೇ ಐತ ಮತ್ತು ಗುತ್ತಿ ಕೂಡ ಮುಕುಂದಯ್ಯನನ್ನು ಒಡೆಯನಂತೆ ಕಾಣದೆ ಒಬ್ಬ ಸ್ನೇಹಿತನಂತೆ ಕಾಣುತ್ತಾರೆ. ಒಡೆಯನಿಗಾದರೆ ಪ್ರಾಮಾಣಿಕ ದುಡಿಮೆ ನೀಡದ ಇವರು ಇಂಥ ಸರಳ ವ್ಯಕ್ತಿಯಾದ ಮುಕುಂದಯ್ಯನಿಗೆ ತಮ್ಮನ್ನೇ ಸಮರ್ಪಿಸಿಕೊಳ್ಳುತ್ತಾರೆ. ಆದ್ದರಿಂದಲೇ ಚಿನ್ನಮ್ಮಳನ್ನು ಪಾರುಮಾಡುವಲ್ಲಿ ಮುಕುಂದಯ್ಯನಿಗೆ ಐತ ಪೀಂಚಲು ಮತ್ತು ಗುತ್ತಿ ಸಹಾಯಕರಾಗಿ ನಿಲ್ಲುತ್ತಾರೆ. ಬಹುಶಃ ಇವರಿಲ್ಲದಿದ್ದರೆ ಮುಕುಂದಯ್ಯನಿಂದ ಈ ಕೆಲಸ ಸಾಧ್ಯವಾಗುತ್ತಿರಲಿಲ್ಲವೇನೊ. ಒಟ್ಟಿನಲ್ಲಿ ನಾವು ಇಲ್ಲಿ ತಿಳಿಯಬೇಕಾದು ದೇನೆಂದರೆ ದುಡಿವವರ್ಗವನ್ನು ಆಳುಗಳಂತೆ ಕಾಣುವ ಯಜಮಾನರು ಮತ್ತು ದುಡಿವದವರ ನಡುವೆ ವಿಕರ್ಷಣೆಯನ್ನು ; ಸ್ನೇಹಿತರಂತೆ ಕಾಣುವ ಮುಕುಂದಯ್ಯ ಮತ್ತು ಪೀಂಚಲು, ಐತ, ಗುತ್ತಿಯರ ನಡುವೆ ಆಕರ್ಷಣೆಯನ್ನು ಕಾಣಬಹುದು. ಲೇಖಕರ ಉದ್ದೇಶ ಕೂಡ ಎರಡನೆಯ ರೀತಿಯ ಸಂಬಂಧವೇರ್ಪಡಬೇಕೆಂಬುದೇ ಆಗಿದೆ. ಈ ಮೂಲಕ ಯಜಮಾನ ಮತ್ತು ದುಡಿವವರ್ಗ ಅಂದರೆ ಅರಸ ಮತ್ತು ಆಳು ಸಂಸ್ಕೃತಿ ನಾಶವಾಗುತ್ತಾ, ವರ್ಗತಾರತಮ್ಯವಿಲ್ಲದ ಸ್ನೇಹಸಂಬಂಧದಿಂದ ಕೂಡಿದ ಸಂಸ್ಕೃತಿ ವಿಕಾಸವಾಗುತ್ತಾ ಸಾಗುವುದನ್ನು ಕಾದಂಬರಿಯ ಚೌಕಟ್ಟಿನಲ್ಲಿ ಕಾಣಬಹುದು. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಆಳು ಮತ್ತು ಅರಸ ಈ ಎರಡೂ ವರ್ಗದಲ್ಲಿನ ಜನತೆಯ ಗುಣಾವಗುಣಗಳನ್ನು ತುಂಬ ನಿರ್ಲಿಪ್ತವಾಗಿ ಸಹಜವಾಗಿ ಚಿತ್ರಿಸುವುದು ಲೇಖಕರ ಅನುಭವ ಗ್ರಾಹ್ಯದ ವಿಸ್ತಾರವನ್ನು ಸೂಚಿಸುತ್ತದೆ. ಅಂದರೆ ಲೇಖಕರು ಯಾವುದೇ ಪೂರ್ವಾಪರ ರಾಗಗಳಿಗೆ ಒಳಗಾಗದೆ ವೈಯಕ್ತಿಕತೆಯನ್ನು ನಿರಸನಗೊಳಿಸಿಕೊಂಡು ನಿರ್ಲಿಪ್ತ ಮನೋಭಾವದಿಂದ ಅನುಭವವನ್ನು ವ್ಯಕ್ತ ಪಡಿಸುತ್ತಾ ತಮ್ಮ ಆಶಯವನ್ನು ಸೂಚಿಸಿಬಿಡುತ್ತಾರೆ.

ಕಾದಂಬರಿಯಲ್ಲಿ ಚಿತ್ರಿತವಾಗುವ ಬಾಲಜಗತ್ತು ಅಪೂರ್ವವಾದುದು. ಅಲಕ್ಷ್ಯಕ್ಕೊಳಗಾಗಬಹುದಾದ ಈ ರೀತಿಯ ಪಾತ್ರಗಳಿಗೂ ಜೀವ ತುಂಬಿ ಅವೂ ನಮ್ಮ ನಡುವೆ ಇವೆ ಎಂಬಂತೆ ಒಂದು ಪಾತ್ರದ ಜೀವವನ್ನು ಲೇಖಕರು ತುಂಬಿದ್ದಾರೆ ವಯಸ್ಕಪಾತ್ರಗಳಿಗೆ ಎಷ್ಟು ಒತ್ತು ನೀಡಿ ಮಹತ್ವಪೂರ್ಣವಾಗಿ ಬೆಳೆಸುತ್ತಾರೋ ಅಷ್ಟೇ ಪ್ರಾಧಾನ್ಯವನ್ನು ಬಾಲ ಪಾತ್ರಗಳಿಗೂ ನೀಡಿದ್ದಾರೆ. ಈ ಕಾದಂಬರಿಯಲ್ಲಿ ಬರುವ ಪ್ರಮುಖ ಬಾಲ ಪಾತ್ರಗಳು ಮೂರು. ತಾಡು, ತಿಮ್ಮ, ಧರ್ಮ. ಅಷ್ಟೇ ಪ್ರಧಾನವಾದುವು ರಾಮು ಮತ್ತು ಮಗು ಚಲುವಯ್ಯ. ಈ ಮೂರೂ ಮಕ್ಕಳ ಆಟ ಪಾಠಗಳು, ಪರಸ್ಪರ ಅವರ ಸ್ನೇಹ ಸಂಬಂಧ, ಅವರು ತಮ್ಮ ಹಿರಿಯರ

ಬಗ್ಗೆ ಹೊಂದಿದ್ದ ಭಯ-ಭಕ್ತಿಗಳು, ಹಾಗೆಯೇ ಇವರು ಮತ್ತು ಮುಕುಂದಯ್ಯ ಇತರ ನಡುವೆ ಇದ್ದಂಥ ಸಲಿಗೆ ಮೊದಲಾದ ಭಾವನಾತ್ಮಕ ಸಂಬಂಧ ಕಾದಂಬರಿಯಲ್ಲಿ ಶ್ಲಾಘನೀಯವಾಗಿ ಚಿತ್ರಿತವಾಗಿದೆ. ಅದರಲ್ಲೂ ಧರ್ಮುವಿನ ಸ್ಥಿತಿ ಸಂದರ್ಭಕ್ಕನು ಗುಣವಾದ ಅವನ ಮನಸ್ಥಿತಿ ಮೊದಲಾದವನ್ನು ವರ್ಣಿಸುವಾಗ ಓದುಗರಿಗೆ ಕಣ್ಣಲ್ಲಿ ನೀರೇರದಿರದು. ತನ್ನ ತಾಯಿಯಾದ ಗಂಗಮ್ಮಳನ್ನು ಚಿಕ್ಕಪ್ಪನಾದ ತಿಮ್ಮಣ್ಣ ಹೆಗ್ಗಡೆ ಹೊಡೆದು ಬಡಿದು ಕೊಠಡಿಯೊಂದರಲ್ಲಿ ಕೂಡಿಹಾಕಿ ಬೀಗ ಹಾಕಿದ್ದಾಗ ಬರುವುದು, ತನ್ನ ಅತ್ತೆಯಿಂದ ಹಲವಾರು ಪ್ರಶ್ನೆಗಳಿಗೆ ಉತ್ತರ ಸಿಗದಿರಲು ದುಃಖಿಸುವುದು, ಆಮೇಲೆ ತಾನೇ ಅತ್ತೆಯೊಂದಿಗೆ ಹೋಗಿ ಬೀಗ ತೆಗೆದರೂ ತಾಯಿ ಒಳಗಿನ ಚಿಲಕ ತೆಗೆಯದಿರುವುದು, ಕೊನೆಗೆ ರೋಧಿಸುವುದು, ಹಾಗೆಯೇ ಕಾಣೆಯಾಗಿರುವ ತನ್ನ ಅಪ್ಪ, ಹುಚ್ಚಿಯೆಂದು ಕರೆಯಿಸಿಕೊಳ್ಳುತ್ತಿರುವ ತನ್ನ ತಾಯಿ ಸೋದರ ಮಾವನಾದ ಮುಕುಂದಯ್ಯ ಮೊದಲಾದವರ ಬಗ್ಗೆ ಚಿಂತಿಸುವಲ್ಲಿ ಅವನು ತನ್ನ ವಯೋಧರ್ಮಕ್ಕೆ ಮೀರಿದ ಸ್ತರಕ್ಕೆ ಏರಿಸುತ್ತಾನೆ. ಇಂತಹ ಸಂದರ್ಭಗಳಲ್ಲಿ ಇವನು ಬಾಲಕನೆಂದು ಓದುಗರಿಗೆ ಅನ್ನಿಸುವುದಿಲ್ಲ.

ಸಾಂಸ್ಕೃತಿಕವಾದ ಹಾಗೂ ಬಹು ಮಹತ್ವದ ವಿಚಾರ ಎದ್ದೇಳುವುದು ಧಾರ್ಮಿಕ ಸಂಘರ್ಷದಲ್ಲಿ. ಕಾದಂಬರಿಕಾರರು ಈ ಸಂದರ್ಭದಲ್ಲಿ ತುಂಬಾ ಸೂಕ್ಷ್ಮವಾಗಿ ಆಲೋಚಿಸಿ ಪ್ರಶಂಸನೀಯವಾದ ನಿಲುವನ್ನು ತಳೆದಿದ್ದಾರೆ. ರಾಮಕೃಷ್ಣ ಪರಮಹಂಸ, ಸ್ವಾಮಿವಿವೇಕಾನಂದರಂಥ ಸಾಧ್ವಿಗಳು ಹುಟ್ಟಿದ ಈ ನಾಡಿನ ಧರ್ಮದಲ್ಲಿ, ಎಲ್ಲೋ ಹುಟ್ಟಿ ಎಲ್ಲೋ ಬೆಳೆಯಲು ವಿದ್ಯಾದಾನ ಹಾಗೂ ಆರೋಗ್ಯ ಕೊಡುತ್ತೇವೆಂಬ ನೆಪವೊಡ್ಡಿ, ಸಂಸ್ಕೃತಿಯಿಂದ ಸಂಘಟಿತವಾದ ಸಹಬಾಳ್ವೆಯಲ್ಲಿ ಮೂಗು ತೂರಿಸಿ, ಬದುಕನ್ನು ವಿಘಟಿಸುವ ನಿಟ್ಟಿನಲ್ಲಿ ಸಾಗುವ ಕ್ರೈಸ್ತ ಧರ್ಮ ಪ್ರಚಾರಕರನ್ನು ಲೇಖಕರು ಸಹಿಸರು. ಅಂದರೆ ಕಾದಂಬರಿಕಾರರು ಹಿಂದೂ ಧರ್ಮದ ಎಲ್ಲ ಆಚಾರ-ವಿಚಾರಗಳೂ, ನಡೆ-ನುಡಿಗಳೂ, ತಾತ್ವಿಕ ಚಿಂತನೆಗಳೂ, ಧಾರ್ಮಿಕ ನಂಬಿಕೆಗಳೂ ಸಂಪೂರ್ಣವಾಗಿ ಶ್ರೇಷ್ಠವೆಂದು ನಂಬಿದ್ದಾರೆ ಎಂದಾಗಲೀ, ಪರಕೀಯ ಧರ್ಮವಾದ ಕ್ರೈಸ್ತ ಧರ್ಮ ಸಂಪೂರ್ಣವಾಗಿ ಕನಿಷ್ಠದ್ದೆಂದು ನಂಬಿದ್ದಾರೆ ಎಂದಾಗಲೀ ನನ್ನ ಅಭಿಪ್ರಾಯವಲ್ಲ. ಸಹಬಾಳ್ವೆಗೆ ಈ ಎರಡೂ ಧರ್ಮಗಳ ತತ್ವಗಳೇನೂ ಸಹಾಯಕವಾಗಲಾರವು. ಧರ್ಮಾತೀತವಾದ ಸಂಸ್ಕೃತಿಯ ನಂಬಿಕೆಗಳನ್ನು ಸಡಿಲಿಸಿ ಮತೀಯ ಭಾವನೆಗಳನ್ನು ಅಂತಹ ಸಂಸಾರದಲ್ಲಿ ಬಿತ್ತಿ ಆ ಕುಟುಂಬಗಳನ್ನು ಹಾಳುಮಾಡುವುದಕ್ಕಿಂತ, ಆ ನಂಬಿಕೆಗಳನ್ನು ಉಳಿಸಿಕೊಳ್ಳಬೇಕೆಂಬುದು ಕಾದಂಬರಿಕಾರರ ನಿಲುವು. ಗುಡಿಗೋಪುರಗಳಲ್ಲಿನ ಕಲ್ಲು ವಿಗ್ರಹಗಳೇ ದೇವರೆಂದೂ ಅಲ್ಲಿನ ಆಚಾರವೇ ಭಕ್ತಿಯೆಂದೂ ಮೊದಲಾದ ಮೂಢನಂಬಿಕೆಗಳಿಂದ ಜನರನ್ನು ಶೋಷಿಸುವವನು ಸಮಾಜಕ್ಕೆ ಎಷ್ಟು ಅಪಾಯಕಾರಿಯೋ, ಆ ವಿಗ್ರಹಗಳು ದೇವರಲ್ಲ ಅವುಗಳೆಲ್ಲವೂ ಕಲ್ಲುಗಳೆಂದೂ, ಅದು ಭಕ್ತಿಯಲ್ಲ ಕೇವಲ ನಟನೆಯೆಂದು ತುಂಬಾ ವೈಜ್ಞಾನಿಕವಾಗಿಯೇ ವಾದಿಸುವ

ನಾಸ್ತಿಕನೂ ಕೆಲವು ಗುಣಾತ್ಮಕವಾದ ನಂಬಿಕೆಗಳನ್ನು ಅಲ್ಲಾಡಿಸುವಾಗ ಅಷ್ಟೇ ಅಪಾಯಕಾರಿಯಾಗುತ್ತಾನೆ. ಆದ್ದರಿಂದ ಇಂತಹವರಿಬ್ಬರಿಂದಲೂ ಸಾಮಾಜಿಕ ಸುಧಾರಣೆಯಾಗಲಾರರು.

ಆರೋಗ್ಯ ಕೊಡುತ್ತೇವೆಂಬ ; ಶಿಕ್ಷಣ ಕೊಡುತ್ತೇವೆಂಬ ನೆಪದಲ್ಲಿ ಭಾರತವನ್ನು ಪ್ರವೇಶಿಸಿದ ಕ್ರೈಸ್ತ ಪಾದ್ರಿಗಳು, ಇವುಗಳನ್ನು ಒದಗಿಸುತ್ತಾ ಹೆಚ್ಚಾಗಿ ಈ ಮೊದಲಾದ ಕೆಲವು ಆಕರ್ಷಣೆಗಳನ್ನೊಡ್ಡಿ ಆಕರ್ಷಿತರಾದಂತವರನ್ನು ಹಿಂದೂ ಧರ್ಮದಿಂದ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಿ ಹಲವು ಸಂಸಾರಗಳನ್ನು ಹಾಳು ಮಾಡಿದ್ದು ಇತಿಹಾಸದ ಮಾತು. ವಿವೇಕಾನಂದರಂಥ ಮಹಾನ್ ಸಾಂಸ್ಕೃತಿಕ ನಾಯಕರು ಚಿಕಾಗೋದ ವಿಶ್ವಧರ್ಮ ಸಮ್ಮೇಳನದಲ್ಲಿ ಹಿಂದೂಧರ್ಮದ ಉಪನಿಷತ್ತಿನ ಸಾರವನ್ನು ಮತಾಂತರ ದೃಷ್ಟಿಯಿಂದ ದೂರನಿಂತು ಬೋಧಿಸುತ್ತಿದ್ದಂತಹ ಸಂದರ್ಭ ದಲ್ಲಿಯೇ ಮತೀಯ ಧೋರಣೆಗಳಿಂದ ಕಲುಷಿತರಾದ ಕ್ರೈಸ್ತ ಪಾದ್ರಿಗಳು ಭಾರತದಲ್ಲಿ ಮತಾಂತರದಲ್ಲಿ ತೊಡಗಿದ್ದು ಭಾರತದ ಸಾಂಸ್ಕೃತಿಕ ದುರಂತದ ಸ್ಥಿತಿಯನ್ನು ಸೂಚಿಸುತ್ತವೆ. ಆದರೆ ಆರೋಗ್ಯದ ಬಗ್ಗೆ ಅವರು ನೀಡಿದ ತಿಳುವಳಿಕೆ, ಶಿಕ್ಷಣ ನೀಡಲು ತೆಗೆದುಕೊಂಡ ಕ್ರಮ ಮೊದಲಾದ ಉಪಯುಕ್ತ ಕಾರ್ಯಕ್ರಮಗಳನ್ನು ಲೇಖಕರು ಒಪ್ಪಿಕೊಳ್ಳುತ್ತಾರೆ, ಜೊತೆಗೆ ಶ್ಲಾಘಿಸುತ್ತಾರೆ. ಹೀಗೆ ಮತೀಯ ಧೋರಣೆಯಿಂದ ಭಾರತವನ್ನು ಪ್ರವೇಶಿಸಿದ ಕ್ರೈಸ್ತ ಧರ್ಮೀಯರ ಜೊತೆಗೆ ಅನೇಕ ಆಧುನಿಕ ಸಲಕರಣೆ ಗಳೂ(ಬೀಸೊಕಲ್ಲು), ಅನೇಕ ನವಜ್ಞಾನ ಶಾಖೆಗಳೂ ಭಾರತವನ್ನು ಪ್ರವೇಶಿಸಿದ್ದನ್ನು, ಇವುಗಳಿಂದ ಭಾರತದ ಸಾಮಾಜಿಕ ಪರಿಸ್ಥಿತಿಯ ಮೇಲಾದ ಗುಣಾತ್ಮಕ ಪರಿಣಾಮ ಗಳನ್ನು ಲೇಖಕರು ಪ್ರಶಂಸಿದ್ದಾರೆ. ಆದರೆ ದೇವಯ್ಯನನ್ನು ಮತಾಂತರಗೊಳಿಸುವ ಮೂಲಕ ಹಾಲಿನಂಥ ಸಂಸಾರದಲ್ಲಿ ಹುಳಿಹಿಂಡಲು ಯತ್ನಿಸಿದ ಪಾದ್ರಿ ಜೀವರತ್ನಯ್ಯನ ತೀರ್ಮಾನವನ್ನು ಸಮಾಜ ಎಂದಿಗೂ ಪುರಸ್ಕರಿಸಲಾರದು. ಅದರಲ್ಲೂ ತನ್ನ ಮೋಹಕ ಮಗಳನ್ನು ಮುಂದೆ ಬಿಟ್ಟುಕೊಂಡು ಮತಾಂತರಗೊಳಿಸಿ ಕೊನೆಗೆ ಅವಳನ್ನೇ ದೇವಯ್ಯನ ಆಸ್ತಿಗೆ ಒಡತಿಯನ್ನಾಗಿ ಮಾಡಬೇಕೆಂಬ ಜೀವರತ್ನಯ್ಯ, ಮುಕುಂದಯ್ಯನ ಮದ್ದಿಲ್ಲದ ಕೋವಿಯಿಂದ ಪ್ರಾಣಬಿಡುವುದು ತುಂಬ ಸಾಂಕೇತಿಕವಾಗಿದೆ.

ಈ ಕಾದಂಬರಿಯಲ್ಲಿ ಮುಸ್ಲಿಂ ಪಂಗಡಕ್ಕೆ ಸೇರಿದ ಪಾತ್ರಗಳೂ ಬರುತ್ತವೆ. 'ಇಜಾರದ ಸಾಬಿ, ಕರೀಂ ಸಾಬಿ, ಪುಡಿ ಸಾಬಿ ಮತ್ತು ಲುಂಗಿ ಸಾಬಿ ಒಂದು ಸ್ಪಷ್ಟವಾದ ವ್ಯಕ್ತಿತ್ವಗಳಾಗಿ ರೂಪುಗೊಂಡಿದ್ದಾರೆ. ಈ ಎಲ್ಲ ವ್ಯಕ್ತಿಗಳೂ ಒಂದಲ್ಲ ಒಂದು ರೀತಿಯಲ್ಲಿ ವಂಚನೆಗೆ ತೊಡಗಿರುವವರೇ. ಯಾವಾವದೋ ನೆಪಗಳನ್ನು ಮಾಡಿಕೊಂಡು ಹೆಂಗಸರು ಮಕ್ಕಳಿಂದ ದವಸಧಾನ್ಯಗಳಿಂದ ಹಿಡಿದು ಒಡವೆಗಳವರೆಗೂ ಲಪಟಾಯಿಸುತ್ತಾರೆ. ಅದರಲ್ಲಿಯೂ ಆಗತಾನೇ ಮಲೆನಾಡು ಸೀಮೆಗೆ ಪ್ರವೇಶಿಸು ತ್ತಿದ್ದ ಕಲ್ಯಾಣಸೇವೆ, ಬತ್ತಾಸು, ಹುರಿಗಡಲೆ ಮೊದಲಾದ ತಿನಿಸುಗಳ ಆಸೆ ತೋರಿಸಿ

ಹೆಂಗಸು ಮಕ್ಕಳನ್ನು ವಂಚಿಸುವುದು ಕಂಡುಬರುತ್ತದೆ. ಹಾಗೆಯೇ ಬೇರೆಯವರ ಜಮೀನಿನಲ್ಲಿ ಉತ್ಪಾದನೆಗಳನ್ನು ಕದಿಯುವುದು, ಗೌಡರ ಹಣದ ಆಮಿಷಕ್ಕೆ ಒಳಗಾಗಿ ಶಿಕ್ಷೆಯ ನೆಪದಲ್ಲಿ ಕೆಳವರ್ಗದವರನ್ನು ಹಿಂಸಿಸುವುದು ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಈ ಸಾಬರ ಹೆಸರನ್ನು ಕೇಳಿದರೆಯೇ ಕೆಳವರ್ಗದವರು ಗಡಗಡನೆ ನಡುಗುತ್ತಿದ್ದುದು ಕಂಡುಬರುತ್ತದೆ. ಇಜಾರದ ಸಾಬಿ, ಲುಂಗಿ ಸಾಬರ ಹೊಡೆತದ ಖ್ಯಾತಿ 'ಹೊನ್ನಾಳಿ ಹೊಡೆತ' ಎಂದೇ ಪ್ರಖ್ಯಾತವಾಗಿದೆ. ಹೀಗೆ ಕಾದಂಬರಿಕಾರರು ಸೂಕ್ಷ್ಮ ಚಿತ್ರಣಗಳನ್ನು ಕೊಡುತ್ತಾರೆಯೆ ಹೊರತು ಅವರಲ್ಲಿನ ಸಾತ್ವಿಕಾಂಶಗಳನ್ನು ಗುರುತು ಮಾಡುವುದಿಲ್ಲ. ಹಾಗಾದರೆ ಅವರಲ್ಲಿ ಸದ್ವಿನಯ, ಸನ್ನಡತೆ, ಪರೋಪಕಾರ ಮೊದಲಾದ ಸದ್ಗುಣಗಳು ಒಂದೂ ಇರಲಿಲ್ಲವೆ? ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಒಂದು ವೇಳೆ ಈ ಪಾತ್ರವನ್ನು ಕೇವಲ ವೈವಿಧ್ಯಕ್ಕಾಗಿ ತಂದಿದ್ದಾರೆಯೆ? ಅಥವಾ ಎಲ್ಲ ವರ್ಗದ ಎಲ್ಲ ಮತದ ಪಾತ್ರಗಳನ್ನು ತರಬೇಕೆಂಬುದಷ್ಟೇ ಕಾದಂಬರಿಕಾರರ ಉದ್ದೇಶವೆ? ಇವು ತುಂಬ ಮಹತ್ವದ ಪ್ರಶ್ನೆಗಳಾಗುತ್ತವೆ.

ಮತ್ತೊಂದು ವಿಚಾರಾರ್ಹವಾದ ವಿಷಯವೆಂದರೆ ಕಾದಂಬರಿಯಲ್ಲಿ ಬರುವ ಜನ್ಮಾಂತರಗಳ ಸಂಬಂಧ ಕುರಿತಂಥದ್ದು. ಮುಕುಂದಯ್ಯ ಹಾಗೂ ಚಿನ್ನಮ್ಮ ಜನ್ಮಾಂತರ ಪ್ರೇಮಿಗಳು, ದಂಪತಿಗಳು. ಹಾಗೆಯೇ ದೇವಣ್ಣ ಹೆಗ್ಗಡೆ ಮತ್ತು ರಂಗಮ್ಮ ವರ್ತಮಾನದಲ್ಲಿ ದಂಪತಿಗಳಾಗಿದ್ದು, ದೇವಣ್ಣ ಹೆಗ್ಗಡೆ ಯಾತ್ರೆಗಾಗಿ ತಿರುಪತಿಗೆ ಹೋಗಿದ್ದಾಗ ಕೆಲವು ಕಾರಣಗಳಿಂದ ಅಸುನೀಗಿದ್ದಾನೆ. ಅದೇ ದೇವಣ್ಣ ಹೆಗ್ಗಡೆ ದೇವಯ್ಯನ ಮಗನಾಗಿ ಚಲುವಯ್ಯನ ಹೆಸರಿನಿಂದ ಹುಟ್ಟಿದ್ದಾನೆ. ಈ ಸಂದರ್ಭವನ್ನು ಕಾದಂಬರಿಕಾರರು ಎಷ್ಟು ಪ್ರಬಲವಾಗಿ ನಂಬಿ ಚಿತ್ರಿಸಿದ್ದಾರೆಂದರೆ ರಂಗಮ್ಮಳಿಗೆ ಬಾಲ ಚಲುವಯ್ಯನನ್ನು ಕಂಡಾಗ ದುಃಖದ ಸಂದರ್ಭದಲ್ಲಿ ಒಂದು ರೀತಿಯ ಅವ್ಯಕ್ತ ಆಕರ್ಷಣೆ, ಹಾಗೆಯೇ ಚಲುವಯ್ಯನನ್ನು ರಂಗಮ್ಮ ಎತ್ತಿಕೊಂಡು ಮುದ್ದಾಡುವಾಗ ಚಲುವಯ್ಯ ತನ್ನ ಚಲುವಾದ ಪುಟ್ಟ ಕೈಗಳಿಂದ ರಂಗಮ್ಮಳ ಸ್ತನಗಳನ್ನು ಮುಟ್ಟಿದಾಗ ರಂಗಮ್ಮ ಪುಳಕಿತಳಾಗುತ್ತಾಳೆ. ಇಲ್ಲಿ ಲೇಖಕರ ಪ್ರಜ್ಞೆ ಜಾಗೃತವಾಗಿ ಅವರು ನಂಬಿರುವ ಜನ್ಮಾಂತರಗಳ ಸಂಬಂಧವನ್ನು ಕಂಡರಿಸಲು ಉದ್ಯುಕ್ತವಾಗಿರುವುದನ್ನು ಕಾಣಬಹುದು. ಗಡ್ಡದಯ್ಯ ಮುಕುಂದಯ್ಯನಿಗೆ "ತಿರುಪತಿಯಲ್ಲಿ ತೀರಿಕೊಂಡ ನಿಮ್ಮ ಭಾವನ ಸಹಧರ್ಮಿಣಿ ನೀವು ಈ ಜನ್ಮದಲ್ಲಿ ಮದುವೆಯಾಗಬೇಕೆಂದಿರುವ ನಿಮ್ಮ ಪೂರ್ವ ಜನ್ಮದ ಪತ್ನಿಯಲ್ಲಿಯೆ, ನಿಮ್ಮ ಮಗಳಾಗಿ ಹುಟ್ಟಿ, ತನ್ನ ಹಿಂದಿನ ಜನ್ಮದ ಗಂಡನನ್ನೇ ಮದುವೆಯಾಗುತ್ತಾಳೆ!.... ..." ಎಂಬ ಮಾತುಗಳು ಕೂಡ ಮೇಲಿನ ಅಭಿಪ್ರಾಯವನ್ನು ಸಮರ್ಥಿಸುತ್ತವೆ. ಮಲೆನಾಡಿನ ಪರಿಸರ ಹಾಗೂ ಕಾದಂಬರಿ ರಚನೆಯಾಗಿರುವ ಪರಿಸರದಲ್ಲಿ ಇದು ಸತ್ಯವಾದರೂ, ಜನ್ಮಾಂತರಗಳ ಬಗ್ಗೆ ಓದುಗರಲ್ಲಿ ಅನುಮಾನವಾಗುವುದರಲ್ಲಿ ಆಶ್ಚರ್ಯವಿಲ್ಲ. ಒಂದು ವೇಳೆ ಇದು ಕಾದಂಬರಿಕಾರರ ವೈಯಕ್ತಿಕನಿಲುವು ಎಂದರೂ ತಪ್ಪಾಗಬಹುದು.

ಏಕೆಂದರೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಾಗೂ ಸಾಂಸ್ಕೃತಿಕ ಸಾಹಿತ್ಯ ಲೋಕದಲ್ಲಿ ಕುವೆಂಪುರವರಿಗೆ ಒಂದು ಮಹತ್ವಪೂರ್ಣ ಸ್ಥಾನವಿದೆ. ಅವರೊಬ್ಬ ಆಧುನಿಕ ಕಾಲದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ನಾಯಕ. ಜೊತೆಗೆ ಸಾಹಿತ್ಯದಲ್ಲಿ ಮೊದಲ ಬಾರಿಗೆ ವೈಚಾರಿಕತೆಯನ್ನು ತಂದವರೇ ಕುವೆಂಪು. ಇವರಾಡುವ ಒಂದೊಂದು ನುಡಿಗಳೂ, ತೋರುವ ಮಾರ್ಗಗಳು ಅನುಕರಣೀಯವಾದ್ದರಿಂದ ವಾಸ್ತವದಲ್ಲಿ ಜನ್ಮಾಂತರಗಳ ಸಂಬಂಧವನ್ನು ಒಪ್ಪುವುದು ಕಷ್ಟವೆಂಬುದು ಸರಳ ಪ್ರಶ್ನೆಯೇನಲ್ಲ, ಆದರೆ ಮೊದಲೇ ಹೇಳಿದಂತೆ ಜನ್ಮಾಂತರಗಳ ಸಂಬಂಧದ ಚಿತ್ರಣ ಕಾದಂಬರಿ ಹಾಗೂ ಮಲೆನಾಡಿನ ಜೀವನ ಪರಿಸರಕ್ಕೆ ಸಂಗತ ವಾಗಿಯೇ ಮೂಡಿಬಂದಿದೆ ಎಂಬುದರಲ್ಲಿ ಅನುಮಾನವಿಲ್ಲ, ಹಾಗೂ ಕೆಲವುವೇಳೆ ಪ್ರತಿಯೊಬ್ಬರ ನಂಬಿಕೆಗಳೂ ಕೂಡ ವ್ಯಕ್ತಿನಿಷ್ಠವಾದ್ದರಿಂದ, ಅಭಿವ್ಯಕ್ತಿ ಸ್ವಾತಂತ್ರ್ಯವೂ ಇರುವುದರಿಂದ ಅವುಗಳನ್ನು ಅಷ್ಟು ಪ್ರಧಾನವಾಗಿ ಪರಿಗಣಿಸುವಂತಿಲ್ಲ ಎಂದು ತಿಳಿದುಕೊಂಡರೆ ಸಾಕು.

ಸಜೀವಯುಕ್ತ ಜೀವನ ಅಥವಾ ಸಂಸ್ಕೃತಿಯ ಸಂಸ್ಥಾಪನೆಯೇ ಕಾದಂಬರಿಯ ಉದ್ದೇಶವಾಗಿದೆ. ಭಿನ್ನ ಜಾತಿ, ಭಿನ್ನ ವರ್ಗ ಹಾಗೂ ಭಿನ್ನ ಸಂಸ್ಕೃತಿಗಳಲ್ಲಿನ ಗುಣಾತ್ಮಕ ಬದುಕಿನ ಸ್ತರಗಳನ್ನು ಗುರುತಿಸಿ ಬೆಸೆಯುವ ಕ್ರಿಯೆ ಕಾದಂಬರಿಯಲ್ಲಿ ನಿರಂತರವಾಗಿ ಸಾಗುತ್ತದೆ. 'ಪಾರಾಗುವ ಮತ್ತು ಪಾರು ಮಾಡುವ ಕ್ರಿಯೆ' ಎದ್ದು ಕಂಡರೆ (ಇದನ್ನು ಒಂದು ತಂತ್ರವಾಗಿ ಭಾವಿಸಬೇಕೆಂಬುದನ್ನು ಮೊದಲೇ ಸೂಚಿಸಿದೆ) ಇನ್ನುಳಿದ ಬೆಸುಗೆ ಕ್ರಿಯೆ ಅಂತರಂಗದಲ್ಲಿಯೇ ಸಾಗುತ್ತದೆ. ಹಾಗೆಯೆ ಬದುಕು ಮತ್ತು ಸಂಸ್ಕೃತಿ ಬಾಹ್ಯವಸ್ತು ಮತ್ತು ಜೀವನ ವಿಧಾನಗಳ ಪ್ರೇರಣೆಯಿಂದ ವಿಕಾಸವಾಗುತ್ತ ಸಾಗುವುದನ್ನು ಕಾದಂಬರಿಯಲ್ಲಿ ಕಾಣಬಹುದು. ಜಾತಿ, ಧರ್ಮ ಮೊದಲಾದ ಸಂಸ್ಕೃತಿಯ ಆಡಂಬರದ ಪೊರೆಗಳನ್ನು ಕಳಚಿ ಎದ್ದು ಮಾನವೀಯ ಸಂಬಂಧ ಮತ್ತು ಧರ್ಮ ಸ್ಥಾಪನೆಯತ್ತ ಕಾದಂಬರಿ ಸಾಗುತ್ತದೆ. ಈ ಮೂಲಕ ಕುವೆಂಪು ನಂಬಿರುವ ಮೌಲ್ಯಗಳಾದ ಸರ್ವೋದಯ, ಸಮನ್ವಯ ಹಾಗೂ ಸಹಬಾಳ್ವೆಗಳು ಗೋಚರಿಸುತ್ತವೆ.

ಒಟ್ಟು ಕುವೆಂಪು ಮನಸ್ಥಿತಿಯಲ್ಲಿರುವ ಸಂಸ್ಕೃತಿಯ ಬಗ್ಗೆ ಹೇಳುವುದಾದರೆ ಈಗ ಇರುವ ಸಂಸ್ಕೃತಿಯ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯವಾಗಲಿ, ಖಂಡನೆಯನ್ನಾಗಲೀ ಕಾಣಲಾಗುವುದಿಲ್ಲ (ಇಲ್ಲಿ ಮತಧರ್ಮಗಳನ್ನು ತರಬಾರದು). ಆ ಸಂಸ್ಕೃತಿಯನ್ನು ಶಸ್ತ್ರಚಿಕಿತ್ಸೆಗೆ ಒಳಪಡಿಸುತ್ತಾರೆ. ಅದರಲ್ಲಿಯ ಅನುಕರಣೀಯ ವಿಧಾನಗಳನ್ನು ಸ್ವೀಕರಿಸುತ್ತಾ ; ಕ್ರೂರವಾದ, ಮೂಢವಾದ, ಅವೈಜ್ಞಾನಿಕವಾದ ಕೆಲವು ಅಂಶಗಳನ್ನು ನಿರಾಕರಿಸುತ್ತಾರೆ.

ಕಾದಂಬರಿಕಾರರ ಕೇಂದ್ರ ದೃಷ್ಟಿಯೂ ಸಂಸ್ಕೃತಿಯ ಪರಿವರ್ತನೆಯೇ ಆಗಿದೆ. ಈ ಕೇಂದ್ರಸ್ಥ ಉದ್ದೇಶವಿಲ್ಲದಿದ್ದ ಪಕ್ಷದಲ್ಲಿ ಸಹಜವಾಗಿಯೇ ಇತರರಂತೆ ಇವರೂ ಒಂದು ಜಾತಿ, ಕಲಹ, ಪ್ರೇಮ, ಗೌಡಿಕೆ ಅಥವಾ ಜೀತದ ಬದುಕು ಮೊದಲಾದವು

ಗಳಲ್ಲಿ ಯಾವುದಾದರೊಂದನ್ನು ವಿಕಾಸಗೊಳಿಸಿ ಕಾದಂಬರಿಯನ್ನು ರಚಿಸುತ್ತಿದ್ದರು. ಆದರೆ ಕಾದಂಬರಿಯಲ್ಲಿ ಇವಾವುವೂ ಅತಿ ಹೆಚ್ಚು ಅನ್ನುವ ಹಾಗೆ ಚಿತ್ರಣವಾಗಿಲ್ಲ. ಎಷ್ಟು ಬೇಕೋ ಅಷ್ಟನ್ನೇ ವ್ಯಕ್ತಪಡಿಸಿದ್ದಾರೆ. ಹಾಗೆಯೆ ಪ್ರಾಣಿ, ಪಕ್ಷಿ, ಬೇಟೆ ವ್ಯವಸಾಯ ಆ ಪ್ರದೇಶದ ಮಕ್ಕಳಿಂದ ಹಿಡಿದು ದೊಡ್ಡವರವರೆಗಿನ ಮನಸ್ಥಿತಿ, ಕೆಳವರ್ಗದಿಂದ ಹಿಡಿದು ಮೇಲ್ವರ್ಗ, ಭಿನ್ನಧರ್ಮ, ಭಿನ್ನ ಜಾತಿ–ಹೀಗೆ ಒಂದು ವಿಶಾಲ ವಿಶ್ವವನ್ನೇ ಕಾದಂಬರಿಯಲ್ಲಿ ಸೃಷ್ಟಿಮಾಡಿ ಆ ಮೂಲಕ ಸಂಸ್ಕೃತಿಯನ್ನು ಸಂಸ್ಕರಿಸಿ, ಸ್ಥಗಿತಗೊಂಡಿದ್ದ ಸಂಸ್ಕೃತಿಯನ್ನು ಚಲನಶೀಲವಾಗಿಸಲು ಪ್ರಯತ್ನಿಸಿದ್ದಾರೆ.

ಡಾ. ಪಿ. ಕೆ. ರಾಜೇಂದ್ರ

ರೇ – ಪ್ರಪಂಚ

ಇಲ್ಲಿ ನಾನು ಬರೆಯುತ್ತಿರುವುದು 'ರೇ'ಕುರಿತೇ. ದಯವಿಟ್ಟು ಯಾರು ಇಲ್ಲಿ ಕರಡು ತಿದ್ದುವ ಕೆಲಸ ಮಾಡಬೇಡಿ. ಇದು 'ರೈ' ನೂ ಅಲ್ಲ ಅಥವಾ 'ಎಕ್ಸ್‌ರೇ'ನೂ ಅಲ್ಲ. ಇದರಲ್ಲಿ ಯಾವ ಅಕ್ಷರವೂ ಬಿಟ್ಟೂ ಹೋಗಿಲ್ಲ, ಹಾಗೆಂದು ಹೊಸದಾಗಿ ಸೇರಿಸುವ ಅಗತ್ಯವೂ ಇಲ್ಲಿಲ್ಲ. ಇದು ನೂರಕ್ಕೆ ನೂರು 'ರೇ' ನೇ–ರೇ ಪ್ರಪಂಚವನ್ನು ಕುರಿತದ್ದು.

ನಮ್ಮ ಬುದ್ಧಿ ಅತಿ ಚುರುಕಾದಾಗ ಇರುವುದನ್ನು ಬಿಟ್ಟು ಇಲ್ಲದುದರ ಕಡೆಗೆ ವಾಲುವುದೇ ಹೆಚ್ಚು. 'ಇರುವುದೆಲ್ಲವ ಬಿಟ್ಟು ಇಲ್ಲದುದರೆಡೆಗೆ ತುಡಿವುದೇ ಜೀವನ' ವಾದರೂ, ಪ್ರಸ್ತುತಕ್ಕೆ ಅದು ಅನ್ವಯಿಸುವುದಿಲ್ಲ. ಏಕೆಂದರೆ ಇರುವುದರಲ್ಲಿಯೇ ಏನನ್ನಾದರೂ ಹುಡುಕುವುದು ಇಲ್ಲಿನ ದೃಷ್ಟಿ. ಹಾಗಾದರೆ ಈ 'ರೇ' ಎಂದರೇನು? ಎಂಬ ಪ್ರಶ್ನೆ ನಿಮ್ಮನ್ನು ಕಾಡಬಹುದು. ಏಕೆಂದರೆ ಪ್ರತಿಯೊಂದು ಶಬ್ದಕ್ಕೂ ಒಂದು ಅರ್ಥವಿರಬೇಕು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಅರ್ಥವಿಲ್ಲದ ಶಬ್ದ, ಶಬ್ದವೇ ಆಗಲಾರದೆಂಬುದು ಹಲವರವಾದ. ಮಾತೂ ಕೂಡ ಅಷ್ಟೆ. ಅರ್ಥವಿಲ್ಲದ ಮಾತು ವ್ಯರ್ಥವಷ್ಟೇ ಅಲ್ಲ, ಅದಕ್ಕೆ ಯಾವ ಬೆಲೆಯೂ ಇರುವುದಿಲ್ಲ ಎಂಬುದೂ ನಿಜವೇ. ಆದರೆ, ಆ ಅರ್ಥವುಳ್ಳ ಮಾತುಗಳೂ ವ್ಯರ್ಥವಾಗುವ ಸಾಧ್ಯತೆಗಳು, ಸಂದರ್ಭಗಳೂ ಉಂಟೆಂಬುದನ್ನು ನಾವು ಕೆಲವೊಮ್ಮೆ ಮರೆಯುತ್ತೇವೆ. 'ಮಾತು ಅರ್ಥ ಎರಡು ವ್ಯರ್ಥ ಸ್ವಅರ್ಥವಿರದಿರೆ' ಎಂಬ ಕವಿವಾಣಿಯನ್ನು ನೆನಪುಮಾಡಿಕೊಳ್ಳಿ! ಯಾವುದೇ ಅರ್ಥಕೋಶದ ಅರ್ಥ ನಿಮ್ಮ ಮನಸ್ಸನ್ನು ತುಂಬುವ ಅರ್ಥವನ್ನು ಯಾವ ಪದಕ್ಕೂ ಕೊಡಲಾರದು. ಅದರ ಹತ್ತಿರಕ್ಕೆ ನಿಮ್ಮನ್ನು ಕೊಂಡೊಯ್ಯುತ್ತದೆ ಅಷ್ಟೆ. ದೇವಸ್ಥಾನಕ್ಕೆ ಹೋದ ಮಾತ್ರಕ್ಕೇ ನಿಮಗೆ ಎಲ್ಲ ಪುಣ್ಯವೂ ಲಭಿಸಿದಂತಾಯಿತೆಂದಲ್ಲ ವಲ್ಲ! ದೇವಸ್ಥಾನದ ಒಳಹೊಕ್ಕ ಮೇಲೆ, ಮೂರ್ತಿಯ ದರ್ಶನವನ್ನೂ ಮಾಡುತ್ತೀರ ಅಷ್ಟೆ. ಅದೂ ನಿಜವೇ. ಆದರೆ ಅಷ್ಟು ಮಾತ್ರದಿಂದಲೇ ನಿಮಗೆಲ್ಲವೂ ಲಭಿಸಿದಂತಾಯಿ ತೆಂದು ಭಾವಿಸಲು ಹೇಗೆ ಸಾಧ್ಯ? ನಿಮ್ಮ–ಅದರ–ನಡುವೆ ಒಂದು ಬಗೆಯ ಸಂವಾದ ಏರ್ಪಡಬೇಕಾಗುತ್ತದೆ. ಭಾವನಾತ್ಮಕ ಸಂಬಂಧ ಭಕ್ತಿ ಪರವಶವಾಗಿ

ವಿಚಾರ ವಿನಿಮಯವಾಗಬೇಕಾಗುತ್ತದೆ. ಇವೆಲ್ಲವೂ ಯಾರ ಮೂಲಕವೋ ನಡೆಯಲು ಸಾಧ್ಯವಾಗುವುದಿಲ್ಲ. ಅದು ಪೂರ್ಣ ನಿಮ್ಮದೇ. ಹಾಗಾದಾಗಲೇ ಅದರ ಪೂರ್ಣ ಸತ್ಯದರ್ಶನ ಸಾಧ್ಯ. ಇಲ್ಲವಾದರೆ ಅದು ಕೇವಲ ಅರ್ಥಕೋಶದ ಅರ್ಥವಾಗಿಯಷ್ಟೇ ಉಳಿಯುತ್ತದೆ.

ಅನ್ನ ಬ್ರಹ್ಮದಂತೆಯೇ, ಶಬ್ದಬ್ರಹ್ಮ ಕೂಡ ಅರ್ಥಗಳ ಸೃಷ್ಟಿ ಕರ್ತ. ಅವರವರ ಭಾವಕ್ಕೆ ತಕ್ಕಂತೆ ಅಲ್ಲಿ ಅರ್ಥ ಸ್ಫುರಿಸಲು ಸಾಧ್ಯ ಎಂಬುದನ್ನು ಕೆಲವರು ಒಪ್ಪದೆ ಹೋಗಬಹುದು. ಆದರೆ ಅದನ್ನು ನಾನು ಒಪ್ಪುತ್ತೇನೆ. 'ರೇ' ನಿಮಗೆ ಅನಾಥವಾದ ಅರ್ಥಹೀನವಾದ ಕೇವಲ ಒಂದು ಅಕ್ಷರವಾಗಿ ಕಾಣಬಹುದು. ಹಾಗೆಂದು ನೀವು ಭಾವಿಸಿದರೆ ಅದು ತಪ್ಪಾಗುತ್ತದೆ. ಒಂದು ಶಬ್ದದ ಉತ್ತರಾರ್ಧ ಅಕ್ಷರವಾದ 'ರೇ'ನ ಪೂರ್ವಾರ್ಧ–'ಆದ' ಎಂಬುದು. ಪೂರ್ವಾರ್ಧ-ಉತ್ತರಾರ್ಧಗಳೆರಡೂ ಸೇರಿ ಆಗಿರುವ ಶಬ್ದವೇ–'ಆದರೆ' ಎಂಬುದು. ಆದರ ವಾಮನ ರೂಪವೇ–'ರೇ'.

ಇದಕ್ಕೆ ಇಷ್ಟೆಲ್ಲ ವಿವರಣೆ ಬೇಕಿತ್ತೆ? ಎಂದು ಹಲವರಿಗೆ ಅನ್ನಿಸಬಹುದು. ನಿಮ್ಮ ಅನಿಸಿಕೆ ಏನೇ ಇರಲಿ ನನಗಂತೂ ಅದರ ಅಗತ್ಯ ಕಂಡದ್ದಂತೂ ನಿಜ. ಏಕೆಂದರೆ ರೇ ಮುಂದಿನ ಪ್ರಪಂಚವನ್ನು ಹೊರತುಪಡಿಸಿ ನೀವು ಬರಿಯ 'ರೇ' ಯನ್ನೇ ಗಮನಿಸಿದರೆ ಯಾರೇಯಾದರೂ ಅರ್ಥಕ್ಕಾಗಿ ಹುಡುಕಾಡುವುದು ಸಹಜ. ಆ ಗೊಂದಲವನ್ನು ಹೋಗಲಾಡಿಸಲೆಂದೇ ಇಷ್ಟೆಲ್ಲ ವಿವರಣೆ.

ಹೋಗಲಿ ಬಿಡಿ. ಈಗ ಪ್ರಸ್ತುತ ವಿಷಯಕ್ಕೆ ಬರೋಣ. 'ರೇ'ಯದ್ದೇ ಆದ ಪ್ರತ್ಯೇಕ ಪ್ರಪಂಚ ಉಂಟೆ? ಎಂದು ಕೆಲವರಿಗಾದರೂ ಅನ್ನಿಸಬಹುದು. ಇದ್ದರೂ ಅದು ಯಾವ ರೀತಿಯದ್ದು ಎಂಬ ಕುತೂಹಲಕ್ಕೆ ಒಳಗಾಗಬಹುದು. ಕೆಲವರು ಬಹಳ ಹೆಮ್ಮೆಯಿಂದ ಹೇಳಿಕೊಳ್ಳುವುದುಂಟು 'ನನ್ನ ಅರ್ಥಕೋಶದಲ್ಲಿ 'ರೇ' ಎಂಬ ಪದಕ್ಕೆ ಅರ್ಥವೇ ಇಲ್ಲ' ಎಂದು. ಆದರೆ ಅದು ಪೂರ್ಣ ಸತ್ಯವೆಂದು ನಾನಂತೂ ಒಪ್ಪುವುದಿಲ್ಲ. ಅಂತಹವರು ಪೂರ್ಣ ವಾಸ್ತವವಾದಿಗಳು ಎಂದೂ ಹಲವರು ಅವರನ್ನು ನಂಬಬಹುದು. ಅಂತಹವರ ಬಗ್ಗೆ ಮೆಚ್ಚುಗೆ ಸೂಚಿಸಿ ಕೊಚ್ಚಿಕೊಳ್ಳಬಹುದು. ನಾನಂತೂ ಅದಕ್ಕೆ ಓಟು ಹಾಕುವುದಿಲ್ಲ. ಅದು ಕೇವಲ ಜಂಬದ ಮಾತೇ ಸರಿ ಎಂದು ನನ್ನ ಅನುಮಾನ. ಆದರೆ ಒಂದಂಶವನ್ನು ನೀವು ಗಮನಿಸಲೇಬೇಕು. ಅಂತಹವರು 'ರೇ' ಅಕ್ಷರಕ್ಕೆ ಇಲ್ಲಿ 'ಆದರೆ' ಪದದ ಸ್ಥಾನವನ್ನೇ ಕೊಟ್ಟಿದ್ದಾರೆ. ಏಕೆಂದರೆ, ನಾವೆಲ್ಲರೂ ಒಂದು ರೀತಿ 'ರೇ' ಪ್ರಪಂಚದಲ್ಲಿಯೇ ವಿಹರಿಸುತ್ತಿರುವವರು. ಹಾಗೆ ನೋಡಿದರೆ 'ಕನಸಿನ ಲೋಕ'ಕ್ಕೂ 'ರೇ ಪ್ರಪಂಚ'ಕ್ಕೂ ಹತ್ತಿರದ ನಂಟು. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಒಂದೇ ಒಂದು ವ್ಯತ್ಯಾಸವೆಂದರೆ, ಕನಸಿನ ಲೋಕ ನಮ್ಮ ಕೈಯಲ್ಲಿರುವುದಿಲ್ಲ. ಅದು ಯಾವಾಗಬೇಕಾದರೂ ಸೃಷ್ಟಿಯಾಗಬಹುದು. ಆದರೆ, ರೇ ಪ್ರಪಂಚವು ಹಾಗಲ್ಲ. ಅದನ್ನು ನಾವೇ ಸೃಷ್ಟಿಸಿಕೊಳ್ಳಬಹುದು. ಕೆಲವರು ಈ ವ್ಯತ್ಯಾಸವನ್ನು ಗುರುತಿಸದೆ

ಹೋಗಬಹುದು. ಆದರೆ ವ್ಯತ್ಯಾಸವಿರುವುದಂತೂ ನಿಜ. ಠೀ ಪ್ರಪಂಚದ ಮುಂದಿನ ಹೆಜ್ಜೆಯೇ—ಕನಸಿನ ಲೋಕ.

ಠೀ ಪ್ರಪಂಚಕ್ಕೆ ಹೋಲಿಸಿದರೆ, ಕನಸಿನ ಪ್ರಪಂಚದ್ದು ಒಂದು ರೀತಿಯಲ್ಲಿ ಬೇರೆಯೇ. ಕನಸು ಬಡವರ ಕಲ್ಪವೃಕ್ಷ. ಕೇಳಿದ್ದನ್ನೆಲ್ಲ ಕನಸಿನಲ್ಲಿಯೇ ತೋರಿಸುವ ಕಾಮಧೇನು. ಅದು ಭಾವಜೀವಿಗಳ ಆಧಾರ ಸ್ತಂಭವೂ ಹೌದು. ಕನಸಿನ ಬಗ್ಗೆ, ಕನಸು ಕಾಣುವವರ ಬಗ್ಗೆ ಅದೆಷ್ಟೋ ಸಂಶೋಧನೆಗಳೇ ನಡೆದಿವೆ. ವರ್ಣರಂಜಿತವಾದ ಫಲಿತಾಂಶಗಳೂ ಹೊರಬಿದ್ದಿವೆ. ಮನಶ್ಶಾಸ್ತ್ರಜ್ಞರು ಕನಸಿನ ಕಾರಣಗಳನ್ನು ಹುಡುಕುವ ಕನಸನ್ನು ಕಂಡು ಅದೇ ನಿಜವೆಂದು ಭ್ರಮಿಸಿ ಖುಷಿಪಟ್ಟದ್ದೂ ಹೌದು.

ಬಡವರಿಗಾಗಲಿ, ಶ್ರೀಮಂತರಿಗಾಗಲಿ ಕನಸು ಬೀಳುವುದಕ್ಕೆ ಮನಶ್ಶಾಸ್ತ್ರಜ್ಞರು ಕೊಡುವ ಕಾರಣಗಳೇನೇ ಇರಲಿ, ನಮ್ಮ ಜನಪದದ ನಂಬಿಕೆಯೇ ಬೇರೆ. ಮಲಗಿದಾಗ, ದಪ್ಪ ತೊಲೆಯ ಕೆಳಗೆ ಅಂತಾರ ಮಲಗಿದರೆ ಕನಸು ಖಂಡಿತ ಎಂಬುದು ಜನಪದರ ನಂಬಿಕೆ. ಹಾಗೆಯೇ ಭಾಗಶಃ ಮನಶ್ಶಾಸ್ತ್ರದ ಸತ್ಯವನ್ನು ಬಳಗುಮಾಡಿಕೊಂಡು ಅವರು ಹೇಳುವ 'ಮಲಗುವಾಗ ಮನಸ್ಸಿನಲ್ಲಿ ಏನನ್ನಾದರೂ ನೆನಪುಮಾಡಿಕೊಂಡು ಮಲಗಿದರೆ ಕನಸು ಬೀಳುತ್ತದೆ' ಎಂಬುದು ಕೂಡ ಆದರದ್ದೇ. ಇವುಗಳಲ್ಲಿ ಮೊದಲನೆಯದಾದ 'ತೊಲೆಯ ಕೆಳಗೆ ಮಲಗುವ' ನಂಬಿಕೆ ಪೂರ್ಣವಾಗಿ ಬಡವರದ್ದೆಂದೇ ಕಾಣುತ್ತದೆ. ಇಲ್ಲವಾದರೆ ಹಳ್ಳಿಯ ಶ್ರೀಮಂತರಿಗೆ ಸೇರಿದ್ದು. ಏಕೆಂದರೆ, ನಗರ ಶ್ರೀಮಂತರ ಮನೆಗಳಲ್ಲಿ ತೊಲೆಗಳೇ ಇಲ್ಲವಲ್ಲ! 'ತೊಲೆ' ಎಂದರೇನೆಂಬುದೇ ತಿಳಿಯದ ನಗರ ಶ್ರೀಮಂತರಿಗೂ ಕನಸುಗಳು ಅಪರೂಪವೇನಲ್ಲ. ಇತ್ತೀಚೆಗೆ ಹೆಚ್ಚಾಗಿ ಕನಸು ಕಾಣುವವರು ನಗರ ಶ್ರೀಮಂತರೇ ಎಂಬುದು ಬಹುಜನಾಭಿಪ್ರಾಯ. ಇದರ ಪ್ರಕಾರ ಗುಡಿಸಿಲವಾಸಿಗಳಿಗಾದರೂ, ಕನಸು ಎಲ್ಲಿಯದು! ಕನಸಿಗೂ—ಬಡವರಿಗೂ ಸಂಬಂಧವೇ ಇಲ್ಲದಂತಾಗುತ್ತದೆ. ನನ್ನ ದೃಷ್ಟಿಯಲ್ಲಿ ಕನಸು ನಿಷ್ಪಕ್ಷಪಾತಿ. ಅದಕ್ಕೆ ಬಡವ—ಶ್ರೀಮಂತ ಎಂಬ ಭೇದವಿಲ್ಲ. ಕನಸು ಕಾಣುವ ಹಕ್ಕು ಎಲ್ಲರಿಗೂ ಇದೆ ಎಂಬೇ ನನ್ನ ನಂಬಿಕೆ. ಆದರೆ ಅದಕ್ಕೆ ಕನಸುಕಾಣುವ ಮನಸ್ಸು ಬೇಕು ಅಷ್ಟೆ. ಜೀವನೋತ್ಸಾಹಜೀವಿಯಲ್ಲದವನು ಭಾವ ಜೀವಿಯಲ್ಲದವನು, ಕನಸುಗಳನ್ನು ಕಾಣಲಾರ. ಹಾಗಾದರೆ ಭೂಮಿತಾಯಿನ್ನೇ ಹಾಸಿಗೆ ಮಾಡಿಕೊಂಡು ಅಂಬರವನ್ನೇ ಹೊದಿಕೆ ಮಾಡಿಕೊಂಡವರಿಗೆ ಕನಸುಗಳೇ ಇಲ್ಲವೆಂದಂತಾಗುತ್ತದೆ. ಹೀಗಿರುವಾಗ ಕನಸಿಗೂ—ತೊಲೆಗೂ ಸಂಬಂಧವನ್ನು ಕಲ್ಪಿಸುವುದಾದರೂ ಹೇಗೆ?

ಈ ಮೇಲಿನ ಮೊದಲ ಕಾರಣವನ್ನು ವಿಶ್ಲೇಷಿಸಿದರೆ ಜನಪದದ ನಂಬಿಕೆಯೊಂದು ಮೂಢನಂಬಿಕೆಯಾಗಿ, ಮೊನ್ನೆಮೊನ್ನೆ ನಮ್ಮವರು ದಕ್ಷಿಣ ಆಫ್ರಿಕಾ ವಿರುದ್ಧ ಅವರ ನೆಲದಲ್ಲಿಯೇ ಅನುಭವಿಸಿದ ಹೀನಾಯ ಸೋಲಿನಂತೆ ಸೋಲನ್ನನುಭವಿಸುತ್ತದೆ.

ಅಲ್ಲಿ ಹೋಗಿದ್ದ ದಾಂಡಿಗರು ತಮ್ಮ ದಾಂಡಿನಿಂದಲೇ ತಮ್ಮ ಕನಸುಗಳನ್ನು ನುಚ್ಚುನೂರು ಮಾಡಿಕೊಂಡಂತಾಗುತ್ತದೆ.

ಅದೇನೇ ಇರಲಿ, ಕನಸಿನ ಲೋಕದ ಪ್ರವೇಶ, ರೇ ಪ್ರಪಂಚದ ಮೂಲಕವೇ ಎಂಬುದು ನನ್ನ ನಂಬಿಕೆ. ಈ ಲೋಕದಲ್ಲಿ ಅದೆಷ್ಟು ಮಂದಿ ಕನಸುಗಾರರಿದ್ದಾರೆ! ಒಂದು ರೀತಿಯಲ್ಲಿ ಇವರೆಲ್ಲ ಸೊಗಸುಗಾರರೇ. ಏಕೆಂದರೆ, ರೇ ಪ್ರಪಂಚದ ಮೂಲಕ ಸೊಗಸಾದ ಸುಂದರ ಲೋಕವನ್ನು ಸೃಷ್ಟಿಸಿಕೊಳ್ಳಬಲ್ಲ ಕಲೆಗಾರಿಕೆ ಇವರಿಗೆ ಸಿದ್ಧಿಸಿದ್ದು. ಕನಸಿನ ಲೋಕ ಇಂದು ನೆನ್ನೆಯದಲ್ಲ. ಮಾನವನಲ್ಲಿ ಭಾವನೆಗಳು ಉದಯಿಸಲು ತೊಡಗಿದಂದೇ ಅದರ ಜನನವೂ ಆಯಿತೆಂದು ತೋರುತ್ತದೆ. ನಮ್ಮ ಜನಪದಕತೆಗಳಲ್ಲಿ ಅದರ ಅದೆಷ್ಟು ರೂಪಗಳು ಗೋಚರಿಸುತ್ತನೆ! ಪುರಾಣಕಥೆಗಳಲ್ಲಾದರೂ ಏನು ಕಡಿಮೆಯೆ? ಅಲ್ಲೆಲ್ಲ ಕನಸುಗಳನ್ನು ಕಾಣದವರೇ ಇಲ್ಲ. ತಮ್ಮ ತಮ್ಮ ಕನಸುಗಳ ಮೂಲಕವೇ ತಮ್ಮ ತಮ್ಮ ಮುಂದಿನ ಭವಿಷ್ಯದ ಕಹಿ–ಸಿಹಿಗಳನ್ನು ಉಂಡವರು ಅದೆಷ್ಟೋ ಮಂದಿ.

ಕನಸಿದ ಲೋಕದ ವ್ಯಾಪಾರ ಒಂದೆರಡು ಬಗೆಯದಲ್ಲ. ಕನಸುಗಳನ್ನು ಹೊತ್ತು ಮಾರುವ ವ್ಯಕ್ತಿ ಅಥವಾ ಶಕ್ತಿ, ಅದ್ಯಾರೇ ಇರಲಿ ಅಥವಾ ಅದೇನೇ ಇರಲಿ, ಅವುಗಳನ್ನು ಕೊಳ್ಳುವವರ ಸಂಖ್ಯೆಗೇನೂ ಕಡಿಮೆ ಇಲ್ಲ. ಅಲ್ಲಿರುವಷ್ಟು ನೂಕು ನುಗ್ಗಲು ಬಹುಶಃ ಬೇರೆಲ್ಲಿಯೂ ಇರಲಾರದೇನೋ! ಆದರೆ, ಪುಣ್ಯವಶಾತ್ ಅದಕ್ಕಾಗಿ ಕ್ಯೂ ನಿಲ್ಲುವ ಅಗತ್ಯವಿಲ್ಲ. ಏಕವ್ಯಕ್ತಿಯಾಗಿ ಮಾತ್ರ ಅದನ್ನು ಪಡೆಯಲು ಸಾಧ್ಯ. 'ತಿರುಕನೋರ್ವನೂರ ಮುಂದೆ, ಮುರುಕು ಧರ್ಮ ಶಾಲೆಯಲ್ಲಿ ಕನಸನೊಂದ ಕಾಣುತ್ತಿದ್ದ' ಹಾಡು ಅದೆಷ್ಟು ಪ್ರಸಿದ್ಧವಾದದ್ದು! ಕನಸುಗಳೆಲ್ಲವು ನಿಜವಾಗುತ್ತವೆ ಎಂದಲ್ಲ. ಹಾಗೆಯೇ ಎಲ್ಲ ಕನಸುಗಳೂ ಸುಖಾಂತವಾಗುತ್ತವೆ ಎಂದೂ ಅಲ್ಲ. ಅವುಗಳಲ್ಲಿ ಶೃಂಗಾರದ ಕನಸುಗಳು ಉಂಟು, ರಸಿಕತೆಯ ಕನಸುಗಳೂ ಉಂಟು, ಹಾಗೆಯೇ ಭಯಾನಕ ಕನಸುಗಳೂ ಉಂಟು. ಭಯಾನಕ ಕನಸುಗಳನ್ನು ಬಿಡಿ, ಆದರೆ ಸುಖಾಂತ ಕನಸುಗಳೆಂಬುವು ನಂತರ ನಿಜವಾಗಲಿ ಬಿಡಲಿ, ಆದರೆ ಅದನ್ನು ಕಾಣುವಷ್ಟು ಹೊತ್ತು ವ್ಯಕ್ತಿ ಪಡೆಯುವ ಆನಂದವಿದೆಯಲ್ಲ ಅದು ಮಾತ್ರ ಯಾವ ಕಂಪ್ಯೂಟರ್ ಮಾಪಕದ ಅಳತೆಗೂ ನಿಲ್ಲುಕದ್ದು ಎಂದೇ ನನಗನ್ನಿಸುತ್ತದೆ.

ಕನಸುಗಳ ವ್ಯಾಪಾರಿ ಆ ಸೃಷ್ಟಿಕರ್ತನೇ ಇರಬೇಕೆಂಬುದು ನನ್ನ ಒಂದು ಬಲವಾದ ನಂಬಿಕೆ. ಏಕೆಂದರೆ, ಕಾಸಿನ ಖರ್ಚಿಲ್ಲದೆ ಕನಸುಗಳನ್ನು ಕೊಳ್ಳಬಹುದು. ಹಾಗೆಯೇ ಕನಸುಗಳ ಸೃಷ್ಟಿಗೂ ಯಾವ ಬಂಡವಾಳವನ್ನೂ ಹೂಡಬೇಕಾಗಿಲ್ಲ. ಯಾವ ಭೌತಿಕ ವಸ್ತುಗಳ ಅಗತ್ಯವೂ ಇರುವುದಿಲ್ಲ. ಅವು ಒಮ್ಮೊಮ್ಮೆ ನಮ್ಮ ರಾಜಕಾರಣಿಗಳು ಕೊಡುವ ಆಶ್ವಾಸನೆಗಳಂತೆ. ಸರ್ಕಾರದಲ್ಲಿ ಖಜಾನೆ ಖಾಲಿಯಾಗಿದ್ದಾಗ, ಇಲ್ಲವೇ ಅಷ್ಟು ಹಣವನ್ನು ವ್ಯಯಮಾಡುವುದು ಸಾಧ್ಯವಾಗದೆ ಹೋದಾಗ

ಅಥವಾ ಸತ್ಪ್ರಜೆಗಳನ್ನು ನಿರಾಶೆಗೊಳಿಸಬಾರದು ಎಂಬ ಮಾನವೀಯತೆ ಅವರಲ್ಲಿ ಎಚ್ಚೆತ್ತಾಗ ಇಂತಹ ಆಶ್ವಾಸನೆಗಳ ವ್ಯಾಪಾರಗಳು ನಡೆಯುತ್ತವೆ. ಹಾಗೆ ನೋಡಿದರೆ ಕನಸುಗಳಿಗೂ, ಆಶ್ವಾಸನೆಗಳಿಗೂ ಹೆಚ್ಚು ಅಂತರವಿರುವುದಿಲ್ಲ. ಏಕೆಂದರೆ ಎರಡೂ ಕೈಗೆಟಕುವುದು ಅನುಮಾನ. ಅವೆರಡೂ ಅಳುವ ಮಕ್ಕಳಿಗೆ ಚಾಕಲೇಟಿನ ಆಸೆ ಹುಟ್ಟಿಸಿದಂತೆ. ಕನಸುಗಳ ವ್ಯಾಪಾರವನ್ನು ಕಂಡಾಗ ದೇವರಿಗೂ ಅಂತಹ ಸ್ಥಿತಿ ಒದಗಿದೆಯೇ ಎಂಬ ಅನುಮಾನ ಮೂಡುತ್ತದೆ. ಎಲ್ಲರ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ಸಾಧ್ಯವಾಗದೆ ಹೋದಾಗ ಇಂತಹ ಕನಸುಗಳನ್ನು ಸೃಷ್ಟಿಸಿ ಅಂತಹವರ ಮೂಗಿಗೆ ತುಪ್ಪಹಚ್ಚುವ ಜಾಣ್ಮೆಯನ್ನು ಅವನು ತೋರಿರಬೇಕು!

ಕ್ಷಮಿಸಿ. ನಾನೇನೂ ಕೊಂಕಣ ಸುತ್ತಿ ಮೈಲಾರಕ್ಕೆ ಹೋಗುತ್ತಿಲ್ಲ. ಗಣಪತಿ ಮಾಡಲು ಹೋಗಿ ಅವನ ಅಪ್ಪನನ್ನು ಮಾಡುವಂತೆ ತೋರುತ್ತದೆ ಎಂಬ ನಿರ್ಧಾರಕ್ಕೂ ಬರಬೇಡಿ—ನಾನು ಸರಿಯಾದ ದಾರಿಯಲ್ಲಿಯೇ ಇದ್ದೇನೆ. ನಿಮ್ಮನ್ನು ಗುರಿಮುಟ್ಟಿಸುವ ಜವಾಬ್ದಾರಿ ನನ್ನದು. ರೇಪ್ರಪಂಚದ ಮೂಲಕವೇ ಕನಸಿನ ಲೋಕವನ್ನು ಪ್ರವೇಶಿಸಲು ಸಾಧ್ಯ ಎಂಬುದು ನನ್ನ ಸಿದ್ಧಾಂತ. ಅದೇ ಸ್ಫೂರ್ತಿ ಪ್ರೇರಣೆ, ಮಾರ್ಗ ಎಲ್ಲವೂ. ಅದಕ್ಕೆ ಆಕರವಾದದ್ದು ಮನುಷ್ಯನ ಮನಸ್ಸೇ ಹೊರತು, ಮನೆಯ ತೊಲೆಯಲ್ಲ ಎಂಬುದು ನೆನಪಿರಲಿ.

ಸಾಮಾನ್ಯನಿಂದ ಅಸಾಮಾನ್ಯನವರೆಗೆ ಎಲ್ಲರೂ ರೇ ಪ್ರಪಂಚದಲ್ಲಿ ವಿಹರಿಸುವವರೇ ಆಆ–ಇಈ ಬಾರದ ಅನಕ್ಷರಸ್ಥ ಕೂಡ ಕೆಲವೊಂದು ಸಂದರ್ಭಗಳಲ್ಲಿ ಘೋಷಿಸುವುದುಂಟು ''ನನಗೇನಾದರೂ ನಾಲ್ಕಕ್ಷರ ಬರೆಯುವುದು ಓದುವುದು ಗೊತ್ತಿದ್ದಿದ್ದರೆ ಈ ಜಗತ್ತನ್ನೇ ತುದಿ ಬೆರಳಿನಲ್ಲಿ ಆಡಿಸಿಬಿಡುತ್ತಿದ್ದೆ'' ಎಂದು. ಅಂತಹ ಮಾತುಗಳನ್ನಾಡುವವರ ಒಳ ತಿರುಳು ಏನೇ ಇರಲಿ, ಅವರಲ್ಲಿ ಕೆಲವರಾದರೂ ಅಪ್ರತಿಮ ಚಾಲಾಕಿನವರಾಗಿರುತ್ತಾರೆ. ಬೆರಳು ತೋರಿಸಿದರೆ ಹಸ್ತವನ್ನೇ ನುಂಗುವ ಖಿಲಾಡಿಗಳಾಗಿರುತ್ತಾರೆ. ಅವರಲ್ಲಿಯ ಆತ್ಮವಿಶ್ವಾಸ ಮೆಚ್ಚುವಂತಹುದು. ಅದು ತೋರಿಕೆಯದ್ದೇ ಆಗಿದ್ದರೂ, ಅದನ್ನು ಸಾರಾಸಗಟು ಎಲ್ಲರನ್ನೂ ಒಳಗುಮಾಡಿ ಹೇಳಲಾಗುವುದಿಲ್ಲ. ನಮ್ಮ ಸಮಾಜದಲ್ಲಿ ಅವಕಾಶದಿಂದ ವಂಚಿತರಾದವರು ಅದೆಷ್ಟೋ ಮಂದಿ ಇದ್ದಾರೆ. ಅವರಿಗೆ ಸ್ವಲ್ಪ ಅವಕಾಶ ದೊರೆತರೂ ಸಾಕು ಅದ್ಭುತವಾದುದನ್ನೇ ಸಾಧಿಸಬಲ್ಲರು ಎಂಬುದು ಅವರ ಅದೆಷ್ಟೋ ಸಣ್ಣಪುಟ್ಟ ಕಾರ್ಯಗಳಿಂದ ಸ್ಫುಟಗೊಂಡಿರುತ್ತದೆ. ಇವರು ಒಳ್ಳೆಯ ಬಾಣಸಿಗನಿದ್ದಂತೆ. ಎಲ್ಲ ಬಗೆಯ ರಸಪಾಕಗಳನ್ನು ಸಿದ್ಧಪಡಿಸುವ ಕಲೆಗಾರಿಕೆ ಗೊತ್ತಿರುತ್ತದೆ. ಅದನ್ನು ಚಪ್ಪರಿಸಿ ತಿನ್ನುವ ಚಪಲವನ್ನು ಹೊಂದಿರುತ್ತಾರೆ. ಆದರೆ, ಅವನ್ನು ತಯಾರಿಸಲು ಬೇಕಾದ ಪದಾರ್ಥಗಳು ಅವರ ಬಳಿ ಇರುವುದಿಲ್ಲ. ಇವರಿಗೆ ಅವೆಲ್ಲವೂ ಚಿತ್ರದಲ್ಲಿ ಬಿಡಿಸಿದ ತಿಂಡಿಯ ಪದಾರ್ಥಗಳಂತೆ ಕಣ್ಣಿಗಷ್ಟೇ ಹಬ್ಬ, ಹೊಟ್ಟೆಗೆ ಉಪವಾಸ, ಮನಸ್ಸಿಗೆ ತ್ರಾಸ.

ನನ್ನ ಸ್ನೇಹಿತರೊಬ್ಬರಿದ್ದಾರೆ. ಅವರು ದಪ್ಪ ಸೂಜಿಯ ಡಾಕ್ಟರ್, ಒಳ್ಳೆಯ ಹೆಸರು ಮಾಡಿದವರು. ಹಾಗೆಯೇ ಹಣವನ್ನು ಮಾಡಿದವರು. ನಿಮಗೆ ಆಶ್ಚರ್ಯವೆನಿಸಬಹುದು. ಹಣವನ್ನೂ ಮಾಡಿ ಹೆಸರನ್ನೂ ಗಳಿಸುವುದು ಹೇಗೆ ಸಾಧ್ಯ ? ಎಂದು ಅದೇ ಅವರ ಹೆಚ್ಚುಗಾರಿಕೆ : 'ಬಾಯುಳ್ಳವನು ಬರಗಾಲದಲ್ಲಿಯೂ ಬದುಕಿದ' ಎನ್ನುವಂತೆ ಇಂತಹವರು ಎಂತಹುದೇ ಸಂದರ್ಭದಲ್ಲಿಯೂ ತಮ್ಮ ಪಾಲಿನದನ್ನು ಗಿಟ್ಟಿಸಿಕೊಂಡು ಬಿಡುತ್ತಾರೆ. ಅದಕ್ಕಾಗಿ ಅವರು ಹೆಚ್ಚು ಶ್ರಮ ಪಡಬೇಕಾಗಿರುವುದಿಲ್ಲ. ಬೆಣ್ಣೆಯಲ್ಲಿ ಕೂದಲು ತೆಗೆದಂತೆ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವ ಕಲೆಗಾರಿಗೆ ಅವರಿಗೆ ಸಿದ್ಧಿಸಿರುತ್ತದೆ. 'ಅಕ್ಕಸಾಲಿ ಚುಚ್ಚಿದರೆ ನೋವಾಗುವುದಿಲ್ಲ' ಎನ್ನುವಂತೆ ಇವರು ಮಾತಿನ ಮೋಡಿಯನ್ನು ಬಡ್ಡಿ ಹಣವನ್ನು ತಮ್ಮದನ್ನಾಗಿಸಿಕೊಳ್ಳಬಲ್ಲರು. ಈ ದಪ್ಪ ಸೂಜಿಯ ವೈದ್ಯರೂ ಕೂಡಾ ಅದೇ ಜಾತಿಗೆ ಸೇರಿದವರು. ಅವರನ್ನು ಕೆಟ್ಟವರೆಂದು ನಾನು ಹೇಳುವುದಿಲ್ಲ. ಅವರು ಕೆಟ್ಟವರೂ ಅಲ್ಲ. ತುಂಬಾ ಉದಾರಿಗಳೇ. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆದರು' ಎಂಬಂತೆ ತಮ್ಮ ಧಾರಾಳತನವನ್ನು ಮೆರೆದು ಸುತ್ತಮುತ್ತಲ ಊರುಗಳಲ್ಲಿ ಒಳ್ಳೆಯ ಹೆಸರಾಗಿದ್ದಾರೆ.

ಇಲ್ಲಿ ಅವರ ಮಾತುಗಾರಿಕೆಯನ್ನು ಪ್ರತ್ಯೇಕವಾಗಿ ಹೇಳಲೇಬೇಕು. ಅವರದ್ದೊಂದು ವಿಶಿಷ್ಟ ವ್ಯಕ್ತಿತ್ವ. ಅವರ ವೇಷಭೂಷಣ ಪೂರ್ಣವಿದೇಶಿ. ಆದರೆ ಮಾತು ಮಾತ್ರ ಪೂರ್ಣ ಸ್ವದೇಶಿ. ಅದರಲ್ಲಿಯೂ ಅಪ್ಪಟ ಗ್ರಾಮ್ಯ. ನೂರಕ್ಕೆ ನೂರರಷ್ಟು ಜನಪದ ಭಾಷೆ. ಅದೊಂದು ಅಪೂರ್ವ ಸಂಗಮವೆಂದೇ ನನ್ನ ಭಾವನೆ. ಭಾಷಾ ಮಡಿವಂತಿಕೆಯನ್ನು ಅವರೆಂದೂ ತೋರಿದವರೇ ಅಲ್ಲ. ಕತ್ತಿ ಒದ್ದಂತೆ ಮಾತನಾಡುವುದೇ ಅವರ ಶೈಲಿ. ಹಳ್ಳಿಗರು ನಾಚಿ ನೀರಾಗುವಂತೆ ಮಾಡುತ್ತಿದ್ದ ಅವರ ಭಾಷಾ ಬಳಕೆ ಅದೇಕೋ ಏನೋ, ಅವರ ವೇಷಭೂಷಣಗಳ ಕಾರಣದಿಂದಾಗಿ ಹಲವರಿಗೆ ಎಣ್ಣೆ-ತುಪ್ಪಗಳನ್ನು ಬೆರೆಸಿದಂತೆ ತೋರುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ.

ಇಷ್ಟನ್ನೆಲ್ಲ ಏಕೆ ಹೇಳಿದೆನೆಂದರೆ, ಇಂತಹ ವ್ಯಕ್ತಿ ಆಗಾಗ್ಗೆ ತನ್ನ ವೃತ್ತಿಯ ಬಗೆಗೆ ನೊಂದುಕೊಳ್ಳುತ್ತಿದ್ದುದುಂಟು ಅವರು ಆ ವೃತ್ತಿಯಲ್ಲಿಯೇ ಗಳಿಸಿದ್ದ ಅಪಾರ ಹಣದ ಬಗೆಗೆ ಅವರೊಂದಿಗೆ ತೀರ ಸಲಿಗೆಯಿದ್ದವರು "ನಿನಗೇನಪ್ಪ ಗಂಟುಹಾಕಿ ಇಟ್ಟಿದ್ದೀಯ'' ಎಂದು ಕೆಣಕಿದರೆ ಸಾಕು, ಅವರು ಹೇಳುತ್ತಿದ್ದರು : ಆದರೆ ಒಂದು ತಪ್ಪು ಮಾಡಿದೆ. ಈ ದಪ್ಪ ಸೂಜಿಯ ಬದಲು ಸಣ್ಣ ಸೂಜಿ ಡಾಕ್ಟರ್ ಆಗಿದ್ದಿದ್ದರೆ ಅದರ ಕಥೆಯೇ ಬೇರೆ ಇತ್ತು'' ಎಂದು. ಅವರ ಪ್ರಾಮಾಣಿಕತೆ ನನಗೆ ಮೆಚ್ಚುಗೆಯಾಗುತ್ತಿತ್ತು. ಏಕೆಂದರೆ ಹಾಗೆ ಹಣ ಸಂಪಾದನೆ ಮಾಡುವವರು ಆ ಬಗ್ಗೆ ಏನನ್ನೂ ಹೇಳಿಕೊಳ್ಳುವುದಿಲ್ಲ. ತಾವು ಹರಿಶ್ಚಂದ್ರನ ವಂಶಸ್ಥರು ಎಂಬಂತೆಯೇ ಹೇಳಿಕೊಂಡು ಬೇರೆಯವರ ಕಡೆ ಬೆರಳು ಮಾಡಿ ತೋರಿಸುತ್ತಿರುತ್ತಾರೆ. ಆದರೆ,

ಈ ದಪ್ಪಸೂಜಿಯ ಡಾಕ್ಟರು ಹಾಗಲ್ಲ. ಅವರಿಗೆ ಇದ್ದ ಒಂದೇ ಒಂದು ಕೊರಗೆಂದರೆ, ಸಣ್ಣಸೂಜಿಯ ಡಾಕ್ಟರ್ ಆಗಲಿಲ್ಲವಲ್ಲ ಎಂಬುದು. ದಪ್ಪ ಸೂಜಿಯಲ್ಲಿಯೇ ಅವರು ಸಂಪಾದಿಸಿದ್ದನ್ನು ಮುಚ್ಚುಮರೆ ಇಲ್ಲದೆ ಹೇಳಿಕೊಳ್ಳುತ್ತಿದ್ದರು. ಅವರಿಗಿದ್ದ ತೃಪ್ತಿಯೆಂದರೆ, ತಾವು ಮಾಡುತ್ತಿದ್ದ ವೃತ್ತಿಯಲ್ಲಿಯೂ ಅವರು ತೋರುತ್ತಿದ್ದ ಪ್ರಾಮಾಣಿಕತೆ ಹಾಗೂ ಹೊಂದಿದ್ದ ತೃಪ್ತಿ. ಹಣ ಪಡೆದು ಕೈಕೊಡುವ ಆದೆಷ್ಟೋ ಮಂದಿಯ ನಡುವೆ ನನ್ನಂತಹವನೊಬ್ಬನಿದ್ದೇನಲ್ಲ ಎಂಬ ಹೆಮ್ಮೆಯೂ ಅದಕ್ಕೆ ಕಾರಣವಾಗಿರಬಹುದು! ಹೀಗಿದ್ದೂ ಜನ ಅವರನ್ನು ಪ್ರೀತಿಸಲು ಇದ್ದ ಕಾರಣ ಕೂಡ ಅದೇ ಎಂಬುದು ಮುಖ್ಯ. ಒಳ್ಳೆಯ ಕೆಲಸವನ್ನೂ ಮಾಡಿಕೊಟ್ಟು ಒಳ್ಳೆಯ ಮಾತನ್ನೂ ಆಡುವ ಜನರೇ ದುರ್ಲಭವಾಗುತ್ತಿರುವ ಇಂದಿನ ದಿನಗಳಲ್ಲಿ ಅಂತಹವ ರೊಬ್ಬರು ಸಿಕ್ಕಾಗ ಸಂತೋಷವಾಗುವುದು ಸಹಜ ತಾನೆ? ಆಗ ಅವರಲ್ಲಿದ್ದಿರ ಬಹುದಾದ ಸಣ್ಣ ಪುಟ್ಟ ಅರೆಕೊರೆಗಳು ಗಮನಕ್ಕೆ ಬರುವುದಿಲ್ಲ.

ಈ ದಪ್ಪ ಸೂಜಿಯ ಡಾಕ್ಟರದ್ದೂ ಅದೇ. ಆದರೆ ಅವರಲ್ಲಿ ಇಂದಿಗೂ ಇರುವ ಕೊರಗೆಂದರೆ—ಈ 'ರೇ ಪ್ರಪಂಚಕ್ಕೆ' ಸಂಬಂಧಿಸಿದ್ದೇ. ದಪ್ಪ ಸೂಜಿಯಿಂದ ಈ ಮೂಕ ಪ್ರಾಣಿಗಳಿಂದಲೇ ಇಷ್ಟನ್ನು ಸಂಪಾದಿಸುವುದಾದರೆ, ಇನ್ನು ನೇರವಾಗಿ ಸಣ್ಣ ಸೂಜಿಯಿಂದ 'ಟಾಕೀ ಪ್ರಾಣಿ 'ಗಳಿಂದ ಅದೆಷ್ಟೊಂದನ್ನು ಸಂಪಾದಿಸಬಹುದಾಗಿತ್ತು' ಎಂಬ ಲೆಕ್ಕಾಚಾರಕ್ಕೆ ಸಂಬಂಧಿಸಿದ್ದು. ಅವರು ನಿವೃತ್ತಿ ಹೊಂದಿದರೂ ಅವರಿಂದ ಈ ಕೊರಗು ನಿವೃತ್ತಿ ಹೊಂದಿಲ್ಲ ಎಂದು ಕೇಳಿದ್ದೇನೆ! ಅವರು ಈಗ ಎಲ್ಲಿದ್ದಾರೋ ತಿಳಿಯದು. ಆದರೆ ಅವರ 'ಆದ....ರೇ'—ಎಂಬ ಮಾತು ಮಾತ್ರ ನನ್ನಿಂದ ದೂರವಾಗಿಲ್ಲ. ಹಾಗೆಯೇ ಅವರ ಸಂಪರ್ಕ ಹೊಂದಿದ್ದ ಹಲವರಿಗೆ ಈ ಅನುಭವ ಹಸಿರಾಗಿ ಉಳಿದಿದೆ ಎಂದೇ ನನ್ನ ಭಾವನೆ. ಏಕೆಂದರೆ ಅದು ಮರೆಯಲಾಗದ ವ್ಯಕ್ತಿತ್ವ!

'ಆದ....ರೇ' ಎಂಬುದು ಹಲವರಿಗೆ ಒಂದು ಒಳ್ಳೆಯ ರಕ್ಷಾ ಕವಚ. ಅದರಿಂದ ಅವರು ತಮ್ಮೆಲ್ಲ ಹುಳುಕುಗಳನ್ನು ಸುಲಭವಾಗಿ ಮುಚ್ಚಿಕೊಳ್ಳಬಲ್ಲರು. ಕಾರ್ಯ ಗಳನ್ನು ಸಾಧಿಸಿಕೊಳ್ಳಬಲ್ಲರು. ಹಾಗೆಯೇ ಬೇರೆಯವರನ್ನು ಆಶ್ಚರ್ಯಕರ ರೀತಿ ಯಲ್ಲಿ ವಂಚಿಸಲೂ ಬಲ್ಲರು. ಅದು ಅವರಿಗೆ ಕತ್ತಿ—ಗುರಾಣಿಗಳಿದ್ದಂತೆ. ಒಳ್ಳೆಯ ಮುಖವಾಡವಾಗಿಯೂ ಅದು ಕೆಲಸಮಾಡಬಲ್ಲದು.

'ನಾನೇನಾದರೂ ಈ ದೇಶದ ಪ್ರಧಾನಿಯಾಗಿದ್ದ....ರೇ' ಎಂದು ಕೆಲವರು ಹೇಳಿಕೊಳ್ಳುವುದುಂಟು. ಅಂತಹವರು ಈ ದೇಶದ ಬಗ್ಗೆ ಕಾಳಜಿ ಇರುವವರೇ ಎಂಬುದು ನನ್ನ ದೃಢವಾದ ನಂಬಿಕೆ. ಏಕೆಂದರೆ ಹಾಗೆ ಮಾತಾನಾಡುವವರೆಲ್ಲಾ ಸ್ವಲ್ಪ ಮಟ್ಟಿಗಾದರೂ ಈ ದೇಶದ ಬಗೆಗೆ ತಿಳಿದವರಾಗಿರುತ್ತಾರೆ. ಇಲ್ಲಿಯ ಅನ್ಯಾಯಗಳ ಬಗೆಗೆ ಅರಿತು ನೊಂದವರಾಗಿರುತ್ತಾರೆ. ಈ ದೇಶದ ಬಗೆಗೆ ಹಲವು ಕನಸುಗಳನ್ನು ಹೊತ್ತವರೂ ಆಗಿರುತ್ತಾರೆ. ಹೇಗಾದರೂ ಮಾಡಿ ಅವನ್ನೆಲ್ಲ ಸರಿಪಡಿಸಬೇಕೆಂಬ

ಸ್ವಲ್ಪಮಟ್ಟಿನ ತುಡಿತ ಅವರು ಮಾತುಗಳಲ್ಲಿ ಧ್ವನಿಸುತ್ತದೆ. ಅದನ್ನು ಪೂರ್ಣವಾಗಿ ತಳ್ಳಿಹಾಕಲು ಸಾಧ್ಯವಾಗವುದಿಲ್ಲ. ಅವರು ಪ್ರಧಾನಿಯಾಗದೆ ಇರುವುದು ಪೂರ್ಣ ಸತ್ಯವೆನಿಸಬಹುದು; ಆದರೆ ಅಂತಹವರ ರೇ ಪ್ರಪಂಚದ ಮಾತುಗಳಲ್ಲಿ ಅವರ ಅರ್ಧ ಸತ್ಯವನ್ನಾದರೂ ನಾವು ಕಾಣಲು ಸಾಧ್ಯ. ಅವರಲ್ಲಿ ಕೆಲವರಾದರೂ ಒಳ್ಳೊಳ್ಳೆಯ ಯೋಜನೆಗಳನ್ನು ಕೊಡಬಲ್ಲರು. ಮಾರ್ಗದರ್ಶನ ಮಾಡಬಲ್ಲರು. ಅಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರ ಬಗೆಗೆ ಅವರು ಚಿಂತಿಸಿರಲಾರರು. ಆದರೆ, ಅಂತಹ ಒಂದು ಯೋಜನೆ ಕಾರ್ಯರೂಪಕ್ಕೆ ಬಂದರೆ ಅದೆಷ್ಟು ಚೆನ್ನಾ ಎಂದು ಕನಸು ಕಾಣಬಲ್ಲ ಜಾಣರು ಅವರಾಗಿರುತ್ತಾರೆ. ಅವರ ಎಲ್ಲಾ ಮಾತುಗಳನ್ನೂ ಸುಲಭವಾಗಿ ತಳ್ಳಿಹಾಕುವುದು ಸರಿಯಲ್ಲ. ಏಕೆಂದರೆ, ರೇ ಪ್ರಪಂಚದ ಅವರ ಮಾತುಗಳಲ್ಲಿ ಅವರಂತಹ ಅಭೀಪ್ಸೆಗಳೂ ಅಡಗಿರುತ್ತವೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ.

ಆದರೆ, ಅವೆಲ್ಲ ಹಣವಿಲ್ಲದವರ-ಅಧಿಕಾರವಿಲ್ಲದವರ ಮಾತುಗಳು. ನೀರಿನ ಮೇಲೆ ಬರೆದ ನಕ್ಷೆಯಂತೆ ಎಂದು ಹೇಳುವುದುಂಟು. ಅದು ಕಣ್ಣಿಗೆ ಕಾಣುವುದೂ ಇಲ್ಲ. ಕಾರ್ಯರೂಪಕ್ಕೆ ಬರುವುದೂ ಇಲ್ಲ. ಈ ಮಾತು ಎಷ್ಟೇ ನಿಜ ಅನಿಸಿದರೂ ಅದರಿಂದ ಆಗುತ್ತಿರುವ ಅನ್ಯಾಯ ಮಾತ್ರ ಅತಿ ದೊಡ್ಡದು ಎಂಬ ಆಲೋಚನೆ ಯಾರ ಗಮನಕ್ಕೂ ಬಾರದೆ ಇರುವುದು ಒಂದು ದೊಡ್ಡ ದುರಂತ. ಎಷ್ಟೋ ಜನರಿಗೆ ಬೀಳುವ ಬೆಳಗಿನ ಜಾವದ ಕನಸುಗಳು ಅವರ ಮುಂದಿನ ಶುಭ ದಿನದ ಸೂಚಕಗಳಾಗಬಲ್ಲವು ಎಂದು ನಂಬುವುದುಂಟು. ಹಾಗೆಯೇ ಈ ರೇ ಪ್ರಪಂಚದವರ ಆಲೋಚನೆಗಳೂ, ನೀಲಿ ನಕ್ಷೆಗಳೂ ಏಕೆ ಒಂದು ದೇಶದ ನಕ್ಷೆಯನ್ನು ಬದಲಿಸಲು ಸಾಧ್ಯವಾಗುವುದಿಲ್ಲ ?

ರಾಮರಾಜ್ಯದ ಕನಸು ಕಂಡ ನಮ್ಮ ರಾಷ್ಟ್ರಪಿತ ಮಹಾತ್ಮಾಜಿ ಕೂಡ ಈ ಸಮಾಜದ ಸುಂದರ ಕನಸನ್ನು ಕಂಡವರೇ. ಅದನ್ನು ನನಸಾಗಿಸುವ ಆಸೆಯನ್ನು ಹೊತ್ತವರೇ. ಮಹಾತ್ಮರು ಕೂಡ ರೇ ಪ್ರಪಂಚದಿಂದ ದೂರ ಉಳಿದವರು ಎಂದು ನಾನು ಭಾವಿಸುವುದಿಲ್ಲ. ಏಕೆಂದರೆ, ರೇ ಪ್ರಪಂಚ ಒಂದು ರೀತಿಯಲ್ಲಿ ಮುಂದಿನ ಕನಸಿನ ಲೋಕಕ್ಕೆ ಅಥವಾ ಯಾವುದೇ ಯೋಜನೆಗೆ ಒಂದು ಬಗೆಯ ನೀಲಿ ನಕಾಶೆಯಂತೆ. ಆ ಮೂಲಕವೇ ತನ್ನ ಆದರ್ಶ ರಾಜ್ಯದ ಅಥವಾ ಲೋಕದ ಕಲ್ಪನೆಯನ್ನು ಕಾಣಲು ಸಾಧ್ಯ. ಅಲ್ಲಿ 'ಆದ....ರೇ-ಎಂಬುದಕ್ಕೆ ಅವಕಾಶವೇ ಇರುವುದಿಲ್ಲ. ಅಲ್ಲಿ ಎಲ್ಲವೂ ದೃಢ, ನಿಶ್ಚಿತ' ಎಂದು ಕೆಲವರು ಭಾವಿಸಬಹುದು. ನಾನು ಅದನ್ನು ಒಪ್ಪುವುದಿಲ್ಲ. ಬೇಕಾದರೆ, ಅದು ಹುಸಿಯಿಂದ ಅಥವಾ ಉಡಾಫೆಯಿಂದ ಕೂಡಿದ್ದಲ್ಲ ಎಂಬುದರ ಬಗ್ಗೆ ನನ್ನ ಸಮ್ಮತಿ ಇದೆ. ರಾಮರಾಜ್ಯವನ್ನು ನಿರ್ಮಿಸಬಹುದು. ಆ ಮೂಲಕ ಸುಖೀರಾಜ್ಯವನ್ನು ಕಾಣಬಹುದು. ಅದು ಕಷ್ಟದ

ಕೆಲಸವಲ್ಲ. ಅದಕ್ಕಿರುವ ಅಡ್ಡಿಗಳೆಂದರೆ—ಈ ದೇಶದ ಜನ ಕಷ್ಟಪಟ್ಟು ದುಡಿಯಬೇಕು, ಪ್ರಾಮಾಣಿಕರಾಗಬೇಕು, ಸತ್ಯಸಂಧರಾಗಿ ನಡೆದುಕೊಳ್ಳಬೇಕು ಮುಂತಾಗಿ ಹೇಳುವಾಗ, 'ಆದ....ರೇ' ಎಂಬುದನ್ನು ಈ ವಾಕ್ಯದ ಹಿಂದಾಗಲಿ ಮುಂದಾಗಲಿ ಬಳಸದೆ ಹೋದರೆ ಅದು ಪೂರ್ಣಗೊಳ್ಳುವುದಿಲ್ಲ. ಮಹಾತ್ಮರಿಗೂ ಆ ಕಲ್ಪನೆ ಇರುವುದಿಲ್ಲ.

ಕೆಲವರಿಗೆ ಇದೊಂದು ಕುಂಟುನೆಪ ಎಂದು ಹೇಳುವುದುಂಟು. ಆದ....ರೇ ಎಂಬುದನ್ನೇ ಒಂದು ಅಸ್ತ್ರವಾಗಿ ಬಳಸಿಕೊಂಡು ಅದೆಷ್ಟೋ ಜನ ಹೇಗೇಗೋ ಬದುಕನ್ನು ಸಾಗಿಸುತ್ತಾ ಬಂದಿದ್ದಾರೆ ಎಂದು ಹೇಳುವುದನ್ನೂ ಕೇಳಿದ್ದೇನೆ. ಅಂತಹವರು ಆ ಒಂದು ಪದದಿಂದಲೇ ಅದೆಷ್ಟೋ ಕೆಲಸಗಳನ್ನು ಸಾಧಿಸಿಕೊಳ್ಳಬಲ್ಲ ಚತುರರಾಗಿರುತ್ತಾರೆ ಎಂಬುದು ಅನೇಕರಿಗೆ ತಿಳಿದಿಲ್ಲವೆಂದು ತೋರುತ್ತದೆ. ನಮ್ಮ ಕೈಲಾಗದ್ದನ್ನು ಬೇರೆಯವರೂ ಮಾಡಬಾರದು ಎಂದು ಹೇಳುವುದು ಯಾವ ನ್ಯಾಯ? ಹಾಗೆ ಮಾತನಾಡುವುದರಿಂದ ಯಾವುದೇ ಕೆಲಸ ಕೈಗೂಡದೆ ಹೋಗಬಹುದು. ಹಾಗೆಂದು ಅವರ ರೇ ಪ್ರಪಂಚವನ್ನೇ ಅಲ್ಲಗಳೆಯುವುದು ಸರಿಯಲ್ಲ. ಅಂತಹವರು ಕಡು ಜಾಣರೂ ಆಗಿರುತ್ತಾರೆ.

ಒಮ್ಮೆ ಹೀಗಾಯಿತಂತೆ-ಊರಿನ ಮಧ್ಯಭಾಗದಲ್ಲಿದ್ದ ದೊಡ್ಡ ಬಂಡೆಯೊಂದನ್ನು ಹೇಗಾದರೂ ಮಾಡಿ ಅಲ್ಲಿಂದ ಸ್ಥಳಾಂತರಿಸಬೇಕಾಗಿತ್ತಂತೆ. ಊರಿನ ಮಧ್ಯಭಾಗದಲ್ಲಿದ್ದುದರಿಂದ ಅದನ್ನು ಮದ್ದಿನಿಂದ ಸಿಡಿಸುವ ಹಾಗೂ ಇರಲಿಲ್ಲ. ಊರಿನವರಿಗೆ ಅದೊಂದು ದೊಡ್ಡ ತಲೆನೋವಾಗಿತ್ತು. ಒಂದು ಶುಭ ಮುಂಜಾನೆ ಒಬ್ಬ ದಢೂತಿಯ ವ್ಯಕ್ತಿ ಇದ್ದಕ್ಕಿದ್ದಂತೆಯೇ ಅಲ್ಲಿ ಅವತರಿಸಿದ. ಈ ವಿಚಾರವನ್ನು ತಿಳಿದ ಆತ ಅದನ್ನು ಸ್ಥಳಾಂತರಿಸುವುದಾಗಿ ಹೇಳಿ ಕೆಲವು ಷರತ್ತುಗಳನ್ನು ಹಾಕಿದ. ಅದರಲ್ಲಿ ಮೊದಲನೆಯ ಷರತ್ತು, ಅವನಿಗೆ ಹದಿನೈದು ದಿನಗಳು ಕಾಲಾವಕಾಶ ಕೊಡುವುದು. ಅನಂತರ, ಅಷ್ಟು ದಿನಗಳೂ ಅವನಿಗೆ ಪುಷ್ಟಿಯಾದ ಆಹಾರವನ್ನೊದಗಿಸುವುದು. ಹೀಗೆಂದು ಹೇಳಿ, ಆ ಆಹಾರದ ಪಟ್ಟಿಯನ್ನು ಅವನೇ ತಿಳಿಸಿದನಂತೆ. ಅವನ ಆಕಾರವನ್ನು ನೋಡಿದ ಅವರಿಗೆ ಅವನ ಬಗ್ಗೆ ಯಾವ ಸಂಶಯವೂ ಉಂಟಾಗಲಿಲ್ಲ. ಅವನು ಇದನ್ನು ಸಾಧಿಸಿಯೇ ತೀರುತ್ತಾನೆಂದು ಅವರೆಲ್ಲ ಹರ್ಷಿತರಾದರು. ಬಹಳ ದಿನಗಳ ಪ್ರಯತ್ನವೊಂದು ಈಡೇರುತ್ತಿರುವ ಆಸೆ ಹೊತ್ತು ಊರಿನವರೆಲ್ಲ ಸಂತೋಷದಿಂದ ಅವನಿಗೆ ಪ್ರತಿದಿನ ಒಬ್ಬೊಬ್ಬರಮನೆಯಂತೆ ಸರದಿಯ ಮೇಲೆ ಅವನ ಪಟ್ಟಿಯಂತೆ ಸತ್ಕರಿಸತೊಡಗಿದ್ದೂ ಆಯಿತು. ಮೊದಲೇ ಭೀಮಕಾಯವನ್ನು ಹೊಂದಿದ್ದ ಆತ ಮತ್ತಷ್ಟು ಕೊಬ್ಬಿ ಉಬ್ಬಿದ. ಕೊನೆಗೆ ಬಂಡೆಯನ್ನು ಸ್ಥಳಾಂತರಿಸಲು ಗೊತ್ತುಪಡಿಸಿದ್ದ ಆ ದಿನವೂ ಬಂದಿತು. ಊರಿಗೆ ಊರೇ ಬಿಟ್ಟ ಕಣ್ಣು ನೆಟ್ಟು ನೋಡತೊಡಗಿತ್ತು. ಈ ಹಿಂದೆ ಪ್ರಯತ್ನಪಟ್ಟಿದ್ದ ಬೇರೆ ಬೇರೆ

ಊರುಗಳ ದೊಡ್ಡ ದೊಡ್ಡ ಪೈಲ್ವಾನರುಗಳೂ ಅಲ್ಲಿ ಕಂಡೂ ಕಾಣದಂತೆ ಸುತ್ತು ವರೆದಿದ್ದರು; ಈ ಆಸಾಮಿಯೂ ಕುಸ್ತಿಯ ಕೆಲವು ಕಸರತ್ತುಗಳನ್ನೂ ತೋರುತ್ತ, ಸುತ್ತುವರೆದಿದ್ದವರ ಕುತೂಹಲವನ್ನು ಮತ್ತಷ್ಟು ಹೆಚ್ಚಿಸುವಂತೆ ನಟಭಯಂಕರನಾಗಿ ವರ್ತಿಸುತಿದ್ದುದೂ ಒಂದು ಅಪೂರ್ವ ದೃಶ್ಯವೇ ಆಗಿತ್ತು. ಎಲ್ಲ ಕಸರತ್ತುಗಳು ಮುಗಿದ ಮೇಲೆ ಮಂಡಿಯೂರಿ ಕುಳಿತು ಸುತ್ತಲೂ ಕಣ್ಣಾಡಿಸಿ, ಊರಗೌಡರತ್ತ ಕಣ್ಣು ನೆಟ್ಟು ಹೇಳಿದ : "ಗೌಡರೇ ಬಂಡೆಯನ್ನು ಬೆನ್ನ ಮೇಲೆ ಇರಿಸಲು ಹೇಳಿ." ಗೌಡರು ಕಂಗಾಲಾದರು. ಊರಿನ ಜನ ಬೆಕ್ಕಸಬೆರಗಾದರು. ದೊಡ್ಡ ಮೂರ್ಖರಾದದ್ದನ್ನು ಅವರಿಗೆ ಬೇರೆ ಯಾರೂ ಹೇಳಬೇಕಾದ ಅಗತ್ಯವಿರಲಿಲ್ಲ!

ಇಷ್ಟಾದರೂ, ಆ ದಢೂತಿ ಮನುಷ್ಯ ಪಕ್ಕದ ಊರಿಗೆ ಹೋದಾಗ ಹೇಳಿ ಕೊಂಡಿದ್ದು : "ಬಂಡೆಯನ್ನು ಬದಿಗೆ ಎತ್ತಿಡಲು ಎಲ್ಲಾ ಸಿದ್ಧತೆಯೂ ಆಗಿತ್ತು 'ಆ....ದ ರೇ' ನನ್ನ ಬೆನ್ನ ಮೇಲೆ ಅದನ್ನು ಎತ್ತಿಡುವವರು ಆ ಊರಿನಲ್ಲಿ ಯಾರೂ ಇರಲಿಲ್ಲ" ಎಂದು,

ರೇ ಪ್ರಪಂಚ ಬದುಕಿನ ಎಲ್ಲ ಕ್ಷೇತ್ರವನ್ನೂ ಆವರಿಸಿಕೊಂಡಿದೆ. ಅದು ಹೇಗೆ ಇಂದು ನೆನ್ನೆಯದಲ್ಲವೋ ಹಾಗೆಯೇ ಯಾವುದೋ ಒಂದು ಕ್ಷೇತ್ರಕ್ಕಷ್ಟೇ ಸೀಮಿತ ವಾದದ್ದೂ ಅಲ್ಲ. ಅದಕ್ಕೆ ದೊಡ್ಡ ಪರಂಪರೆಯೂ ಇದೆ, ಅಷ್ಟೇ ಹಿರಿದಾದ ಸಾರ್ವತ್ರಿಕತೆಯೂ ಇದೆ. ಸೀತೆ ಮಾಯಾಮೃಗಕ್ಕೆ ಆಸೆಪಡದೆ ಹೋಗಿದ್ದರೆ, ಅನಂತರವೂ ಲಕ್ಷ್ಮಣ ಹಾಕಿದ ಗೆರೆಯನ್ನು ದಾಟದೆ ಹೋಗಿದ್ದರೆ ಎಂದೋ ಹಾಗೆಯೇ ಮಹಾಭಾರತದ ಕಾಲಕ್ಕೆ ಬಂದರೆ: ಪಾಂಡು ಸ್ವಲ್ಪ ಸಂಯಮಿ ಯಾಗಿದ್ದರೆ ಗಾಂಧಾರಿ ಅಸೂಯೆಯಿಂದ ಆತುರ ಪಡದಿದ್ದರೆ ದುರ್ಯೋಧನ ಒಂದು ರಾತ್ರಿ ವೈಶಂಪಾಯನ ಸರೋವರದಲ್ಲಿ ಅಡಗಿದ್ದರೆ! ದುಶ್ಯಾಸನ ದ್ರೌಪದಿಯ ಸೀರೆಯನ್ನು ಸೆಳೆಯದೆ ಹೋಗಿದ್ದಿದ್ದರೆ! ಇವೆಲ್ಲವೂ ರಾಮಾಯಣ ಮಹಾಭಾರತದ ಕಾಲದ ಮಾತಾಯಿತು. ಆ ರೇ ಪ್ರಪಂಚದಲ್ಲಿಯೇ ಮುಂದುವರೆದಿದ್ದರೆ, ಈಗ ಸಂಭವಿಸಿದ್ದು ಯಾವುದೂ ಸಂಭವಿಸುತ್ತಲೇ ಇರಲಿಲ್ಲ ಎಂಬ ತೀರ್ಮಾನಕ್ಕೆ ಬರ ಬೇಕಾಗುತ್ತದೆ. ಆಗ ರಾಮಾಯಣ ಮಹಾಭಾರತಗಳ ಕಥೆಯ ಸ್ವರೂಪವೇ ಬೇರೆಯಾಗುತ್ತಿತ್ತು. ಆಗ ನಾವು ಓದುತ್ತಿದ್ದುದು ಈಗಿನ ಸ್ವರೂಪದ ರಾಮಾಯಣ ಮಹಾಭಾರತದ ಕತೆಯನ್ನಲ್ಲ; ಅದು ಮತ್ತಿನ್ನೇನೋ ಆಗಿರುತ್ತಿತ್ತು.

ಕಾಲ ಯಾವುದಾದರೇನಂತೆ, ಬದುಕಿನ ಗತಿಯಲ್ಲಿ ಮಹತ್ತರದ ಘಟನೆಗಳು ಸಂಭವಿಸುವುದು ಯಾವುದೇ ಒಂದು ಸಂದರ್ಭದಲ್ಲಿ ಮಾತ್ರ. ಆ ವೇಳೆಗೆ ಒಳ್ಳೆಯದೋ ಕೆಟ್ಟದ್ದೋ ಘಟನೆಗಳನ್ನು ಹಿಂಬಾಲಿಸಿರುತ್ತದೆ. 'ಆದ...ರೇ' ಎಂಬ ಪಲ್ಲವಿ ಆ ಘಟನೆಗಳನ್ನು ಹಿಂಬಾಲಿಸಿರುತ್ತದೆ. ಸಂಸಾರಿಯನ್ನಾಗಲಿ—ಸನ್ಯಾಸಿಯನ್ನಾಗಲಿ; ಕಳ್ಳರನ್ನಾಗಲಿ ಸುಳ್ಳರನ್ನಾಗಲಿ, ಕಾಮಿಗಳನ್ನಾಗಲಿ, ಪ್ರೇಮಿಗಳನ್ನಾಗಲಿ,

ರಾಜಕಾರಣಿಗಳನ್ನಾಗಲಿ – ಕ್ರೀಡಾಪಟುಗಳನ್ನಾಗಲಿ, ಉಪಾಧ್ಯಾಯರನ್ನಾಗಲಿ – ವಿದ್ಯಾರ್ಥಿಗಳನ್ನಾಗಲಿ ಯಾರನ್ನೂ ಅದು ಬಿಟ್ಟದ್ದಲ್ಲ. ಎಲ್ಲರನ್ನೂ ಸರಿಸಮನಾಗಿ ಕಾಡುತ್ತದೆ. ಅದೂ ಕೂಡಾ ಒಂದು ರೀತಿ ನಿದ್ರಾದೇವಿಯಂತೆ ನಿಷ್ಪಕ್ಷಪಾತಿ. ಬಡವ–ಬಲ್ಲಿದನೆನ್ನದೆ, ಹೆಣ್ಣು-ಗಂಡೆನ್ನದೆ ತನ್ನ ಔದಾರ್ಯ ಗುಣವನ್ನು ಪ್ರದರ್ಶಿಸುತ್ತದೆ.

ಜೀವನದ ಯಾವುದೇ ರಂಗದಲ್ಲಿ ಘಟನೋತ್ತರ ಕೈಹಿಸುಕಿಕೊಳ್ಳುವಿಕೆ ಸಾಮಾನ್ಯ. ವ್ಯಕ್ತಿ ಆಗ ತನ್ನನ್ನು ತಾನೇ ಶಪಿಸಿಕೊಳ್ಳುತ್ತಾನೆ. ತನ್ನ ಬುದ್ಧಿ ಶಕ್ತಿಯ ಬಗೆಗೆ, ವಿವೇಕ ವಿವೇಚನೆಯ ಬಗ್ಗೆ ಅನುಮಾನ ಹೊಂದುತ್ತಾನೆ. ಚುನಾವಣೆಗಳು ನಡೆದು ಫಲಿತಾಂಶಗಳು ಹೊರಬಿದ್ದ ಬಳಿಕ ತನ್ನ ವೈಯಕ್ತಿಕ ಸೋಲಿಗೋ ಅಥವಾ ಪಕ್ಷದ ಸೋಲಿಗೋ ಕಾರಣವಾದ ಅಂಶಗಳನ್ನು ಕುರಿತು ಸಮಾಲೋಚಿಸುವುದುಂಟು. ಆಗ ಹೊರಹೊಮ್ಮುವ ಅಭಿಪ್ರಾಯಗಳು, ಚಿಮ್ಮುವ ಚಿಂತನೆಗಳು ನವನವೋನ್ಮೇಷಣಶಾಲಿಯಾದವು. ಚಿಂತಕರ ಚಾವಡಿಯ ಆ ಆಣಿ ಮುತ್ತುಗಳು ಸಕಾಲದಲ್ಲಿ ಬಳಕೆಯಾಗಿದ್ದಿದ್ದರೆ ಆ ವ್ಯಕ್ತಿಯ ಅಥವಾ ಪಕ್ಷದ ಭವಿಷ್ಯ ಏನಾಗುತ್ತಿತ್ತು ? ಎಂಬ ಪ್ರಬಲವಾದ ಅನುಮಾನವನ್ನು ಎಂತಹವರಲ್ಲಿಯಾದರೂ ಆಳವಾಗಿ ನಾಟಿಸದೆ ಇರದು. ಸೋಲನ್ನು ಕಂಡ ವ್ಯಕ್ತಿ ತನ್ನ ತಪ್ಪಿನಿಂದಲೋ ಅಥವಾ ಇತರರ ತಪ್ಪಿನಿಂದಲೋ ಎಲ್ಲೋ ಒಂದು ಕಡೆ, ಇಲ್ಲವೆ ಹಲವೆಡೆ ಎಡವಿರುತ್ತಾನೆ. ಆಗ ಅದು ಅವನ ಗಮನಕ್ಕೆ ಅಷ್ಟಾಗಿ ಬಂದಿರುವುದಿಲ್ಲ. ಆಗ ಅವೆಲ್ಲ ಹುಮ್ಮಸ್ಸಿನಿಂದಷ್ಟೇ ನಡೆಯುವ ಕಾರ್ಯಗಳಾಗಿರುತ್ತವೆ. ವಿವೇಕ ವಿವೇಚನೆಗಳು ಬೇರೆಯವರಿಗೆ ಅಡವಾಗಿರುತ್ತವೆ. ಹುಮ್ಮಸ್ಸು ಅವಕ್ಕೆ ಮಾಯೆಯ ಮುಸುಕನ್ನು ಹಾಕಿರುತ್ತದೆ.

ವಿದ್ಯಾರ್ಥಿಗಳದ್ದು, ಕ್ರೀಡಾಪಟುಗಳು ಅಥವಾ ಕೀಡಾಸಕ್ತರದ್ದೂ ಕೂಡ ಇದಕ್ಕಿಂತ ಭಿನ್ನವಾದ ಸ್ಥಿತಿಯೇನೂ ಆಗಿರುವುದಿಲ್ಲ. ಒಂದೆರಡು ಅಂಕಗಳಲ್ಲಿ ಪ್ರಥಮ ದರ್ಜೆಯನ್ನೋ, ಪ್ರಥಮ ರ್‍ಯಾಂಕನ್ನೋ ಕಳೆದುಕೊಂಡ ವಿದ್ಯಾರ್ಥಿಯಿಂದ ಹಿಡಿದು, ಒಂದೆರಡು ಅಂಕಗಳಲ್ಲಿ ನಪಾಸಾದ ವಿದ್ಯಾರ್ಥಿಗಳವರೆಗೆ ಎಲ್ಲರೂ ಫಲಿತಾಂಶ ಹೊರಬಿದ್ದ ಮರುದಿನ ನಡೆಸುವ ಚರ್ಚೆಯನ್ನು ನೀವು ಆಲಿಸಬೇಕು. ಅದರದ್ದೇ ಒಂದು ಪ್ರಪಂಚ. ಇಲ್ಲೆಲ್ಲಾ ' ರೇ ' ಪ್ರಪಂಚದ್ದೇ ಮೇಲುಗೈ—ನನಗೆ ಇನ್ನು ಐದು ನಿಮಿಷ ಸಿಕ್ಕಿದ್ದಿದ್ದರೆ, ಆ ಇನ್ವಿಜಿಲೇಟರ್ " ಪತ್ರಿಕೆಯನ್ನ ಕೈಯಿಂದ ಕಿತ್ತುಕೊಳ್ಳದೆ ಇದ್ದಿದ್ದರೆ, ಆ ಒಂದು ಟಿಪ್ಪಣಿಯನ್ನು ಬಿಡದೆ ಹೋಗಿದ್ದರೆ, ಆ ಕೊನೆಯ ಪ್ರಶ್ನೆಯನ್ನು ಪೂರ್ಣಮಾಡಿದ್ದಿದ್ದರೆ, ನಿನ್ನೆ ರಾತ್ರಿ ಇನ್ನೊಂದು ಎರಡು ಗಂಟೆ ಹೆಚ್ಚಾಗಿ ಓದಿದ್ದರೆ, ಬೆಳಗ್ಗೆ ಸ್ವಲ್ಪ ಬೇಗ ಎದ್ದು ಒಂದು ಸಾರಿ ರಿವೈಸ್ ಮಾಡಿದ್ದರೆ—ಎಂದು ಅವುಗಳ ಪಟ್ಟಿಯನ್ನು ಬೆಳೆಸುತ್ತ, ಕೊನೆಗೆ ಸ್ವಲ್ಪ ಲಿಬರಲ್

ಆಗಿ ವ್ಯಾಲ್ಯು ಮಾಡಿದ್ದರೆ ಎಂಬುದರಿಂದ ಹಿಡಿದು, ಗ್ರೇಸ್ ಮಾರ್ಕ್ಸ್‌ನ್ನು ಹೆಚ್ಚಾಗಿ ಕೊಡಬೇಕಾಗಿತ್ತು ಎನ್ನುವವರೆಗೆ ಆ ಪಟ್ಟಿ ಬೆಳೆಯುತ್ತ ಹೋಗುತ್ತದೆ.

ಕ್ರೀಡಾಪಟುಗಳದ್ದೂ ಅನೇಕ ಸಂದರ್ಭಗಳಲ್ಲಿ ಇದೇ ಸ್ಥಿತಿ. ಘಟನಾ ಪೂರ್ವದ ಚಿಂತನ ಮಂಥನಗಳಿಗಿಂತ, ಘಟನೋತ್ತರ ಆಲೋಚನೆಗಳೇ ಹೆಚ್ಚು. ಕ್ರೀಡಾ ಸಕ್ತರೂ ಇದರಲ್ಲಿ ಹಿಂದೆಬಿದ್ದಿಲ್ಲ. ಅದರದ್ದೇ ಒಂದು ಮೋಜು. ಸಚಿನ್ ಸೆಂಚುರಿ ಹೊಡೆಯದೆ ಹೋದಾಗ, ಅಜರ್ ಹೆಚ್ಚು ಹೊತ್ತು ನಿಲ್ಲದೆ ಔಟಾದಾಗ, ಗಂಗೂಲಿ ಎಲ್.ಬಿ.ಡಬ್ಲ್ಯು. ಆದಾಗ, ಶ್ರೀನಾಥ್ ಕ್ಯಾಚ್ ಬಿಟ್ಟಾಗ, ಕುಂಬಳೆ ಹೆಚ್ಚು ವಿಕೆಟ್ ತೆಗೆಯದಾದಾಗ–ಹೀಗೆ ಹತ್ತು ಹಲವು ಕಾರಣಗಳನ್ನು ಶೋಧಿಸಿ ತೆಗೆದು-ಆದ ಸೋಲನ್ನು ಸಮರ್ಥಿಸಿಕೊಳ್ಳುವ ಅಥವಾ ಕೆಲವು ಕೈತಪ್ಪಿಹೋದ ಬಗೆಯನ್ನು ವಿಶ್ಲೇಷಿಸುವ ಬಗ್ಗೆ ಆಟಗಾರರಿಗಿಂತ ಆಟವಾಡದೆಯಿದ್ದವರದ್ದೇ ಹೆಚ್ಚಾಗಿರುತ್ತದೆ. ಅಷ್ಟೇ ಅಲ್ಲ ಹೆಚ್ಚು ರಂಜನೀಯವಾಗಿಯೂ ಇರುತ್ತದೆ. ಒಂದು ಆಟದ ಸೋಲು ಅಥವಾ ಗೆಲವು ಅಂತಹವುಗಳ ಮೇಲೆಯೇ ನಿಂತಿರುತ್ತದೆ ಎಂಬುದನ್ನು ಆಗ ನಾವು ಮರೆತಿರುತ್ತೇವೆ. ಅವೆಲ್ಲದರ ಒಟ್ಟು ಮೊತ್ತವೇ ಆಟ ಮತ್ತು ಫಲಿತಾಂಶದ ನಿರ್ಧಾರಕ್ಕೆ ಕಾರಣವಾಗುವ ಅಂಶಗಳು ಎಂಬುದನ್ನು ಯಾರೂ ಗಮನಿಸಿರುವುದಿಲ್ಲ. ಏಕೆಂದರೆ ನಾವು ನಮ್ಮ ಅಥವಾ ನಮ್ಮವರ ಗೆಲುವನ್ನಷ್ಟೇ ಆಶಿಸಿ, ಅದರ ಕನಸುಕಂಡು ಲೆಕ್ಕಾಚಾರದಲ್ಲಿ ತೊಡಗಿರುತ್ತೇವೆ. ಇಲ್ಲೆಲ್ಲ ' ರೇ ' ಒಂದು ರೀತಿ ಓಡುವ ಕುದುರೆಯ ಮುಂದೆ ತೋರಿಕೆಗೆ ಕಟ್ಟಿದ ಹಸಿರು ಹುಲ್ಲಿನ ರೀತಿ, ಅದರ ಜೊತೆಯಲ್ಲಿಯೇ ಅದೂ ಮುಂದೆ ಮುಂದೆ ಸಾಗುತ್ತಲೇ ಇರುತ್ತದೆ. ದೊರೆಯಬಹುದೆಂಬ ಆಸೆಯಿಂದ ಕುದುರೆಯೂ ಆಸೆಯಿಂದ ಓಡುತ್ತಲೇ ಇರುತ್ತದೆ. ಹಲವು ಕನಸುಗಳನ್ನು ಹೊತ್ತ ಮನುಷ್ಯನ ಜೀವನವೂ ಹಾಗೆಯೇ. ಇದ್ದಿದ್ದರೇ, ಆಗಿದ್ದರೇ, ಹೋಗಿದ್ದರೇ, ಬಂದಿದ್ದರೇ, ಕೊಟ್ಟಿದ್ದರೇ, ಸಿಕ್ಕಿದ್ದರೇ ಹೀಗೆ ರೇ............ರೇ............ರೇ ಗಳಲ್ಲಿಯೇ ಅನೇಕರ ಆಯುಷ್ಯ ಕಳೆದು ಹೋಗಿರುತ್ತದೆ. ಅನೇಕ ವೇಳೆ ಜೀವನದ ಊರುಗೋಲೂ ಬಹುಮಟ್ಟಿಗೆ ಅದೇ ಆಗಿರುತ್ತದೆ.

ಕಳ್ಳರು–ಸುಳ್ಳರು–ಕೊಲೆಗಡುಕರೂ ಇಂತಹ ಚಿಂತಕರ ಚಾವಡಿಯಿಂದ ದೂರಸರಿದವರಲ್ಲ. ಎಂತಹ ನಿಷ್ಣಾತ ಕೊಲೆಗಡುಕನಾದರೂ, ಕಳ್ಳನಾದರೂ ಏನಾದರೂ ಒಂದು ಸುಳುವನ್ನು ಬಿಟ್ಟೇಹೋಗಿರುತ್ತಾನೆ ಎಂಬ ಪ್ರಬಲವಾದ ನಂಬಿಕೆ ಇದೆ. ಇದು ಮೂಢನಂಬಿಕೆ ಅಲ್ಲ ಎಂಬುದು ನನ್ನ ನಂಬಿಕೆ. ಏಕೆಂದರೆ ತಪ್ಪು ಮಾಡುವ ವ್ಯಕ್ತಿ ಎಷ್ಟೇ ಬುದ್ಧಿವಂತನಾಗಿದ್ದರೂ, ಅವಸರದಲ್ಲಿ ಏನಾದರೂ ಮತ್ತೊಂದು ತಪ್ಪನ್ನು ಎಸಗುವುದು ಸಹಜ. ಅದೇ ಅವನನ್ನು ಕಂಬಿ ಎಣಿಸುವುದಕ್ಕೋ ನೇಣುಗಂಬ ಏರಿಸುವುದಕ್ಕೋ ಕಾರಣವಾಗಬಹುದು. ಪೋಲೀಸರಿಗೆ ಪ್ರಶಸ್ತಿ ದೊರಕಿಸಲು ಪೂರಕವಾಗಬಹುದು. ಸತ್ಯಕ್ಕೆ ನ್ಯಾಯ ದೊರಕಿಸಲು ಪ್ರೇರಕವಾಗಲೂ

ಬಹುದು. ಭಾರೀ ಶ್ರೀಮಂತರ ಮನೆಯನ್ನು ಹೊಕ್ಕ ಕಳ್ಳರ ತಂಡವೊಂದು ಏನೂ ದೊರೆಯದೆ ಬರಿಗೈಯಲ್ಲಿ ಹಿಂತಿರುಗಿದ ನಂತರ, ಹಿಂದಿನ ದಿನವಷ್ಟೇ ಆ ಮನೆಯನ್ನು ಆದಾಯ ತೆರಿಗೆಯವರು ಹೊಕ್ಕಿದ್ದರು ಎಂಬುದನ್ನು ತಿಳಿದಾಗ—"ಅಯ್ಯೋ! ನೆನ್ನೆಯಾದರೂ ನಾವು ಬರಬಾರದಾಗಿತ್ತೆ" ಎಂದಂದುಕೊಳ್ಳುವುದು ಹಾಸ್ಯವಾಗಿ ತೋರಿದರೂ ಸುಳ್ಳಿನ ಸಂಗತಿಯೇನೂ ಅಲ್ಲ. ಅವರ ಲೆಕ್ಕಾಚಾರ ಸರಿಯಾದದ್ದೇ. ಆಲೋಚನೆ ಅರ್ಥವತ್ತಾದದ್ದೇ. 'ಆದರೆ ಕಾಲ ಮಿಂಚಿದೆ ಎಂಬುದೇ' ಅಲ್ಲಿನ ಮುಖ್ಯ ಸಂಗತಿ. ಕಳ್ಳತನದಲ್ಲಿ ಸಿಕ್ಕಿಹಾಕಿಕೊಂಡ ವ್ಯಕ್ತಿಗಳದ್ದೂ ಅದೇಚಿಂತನೆ. ಸಿಕ್ಕಿಹಾಕಿಕೊಳ್ಳಲು ಕಾರಣವಾದ ವಸ್ತುವನ್ನೋ ಅಥವಾ ವ್ಯಕ್ತಿಯನ್ನೋ ಉದ್ದೇಶಿಸಿ ಚರ್ಚೆ ಮುನ್ನಡೆಯುತ್ತದೆ. ಯಾವುದೋ ವಸ್ತುವನ್ನು ಕದಿಯಲೇ ಬಾರದಿತ್ತು ಎಂದೋ ಇಲ್ಲವೇ, ಅವನನ್ನು ಕರೆದುಕೊಂಡು ಹೋಗಬಾರದಿತ್ತು ಎಂದೋ ಸಬೂಬುಗಳನ್ನು ಹುಡುಕತೊಡಗುತ್ತಾರೆ. 'ಎಲ್ಲವೂ ಸರಿಹೋಗುತ್ತಿತ್ತು, ಆ.. ದ....ರೇ'—ಎಂಬ ಸೊಲ್ಲಿನೊಂದಿಗೆ ಇಂತಹವರ ವಿಶ್ಲೇಷಣೆ ಮುಕ್ತಾಯ ಗೊಳ್ಳುತ್ತದೆ.

ನಾವು ಶಾಲೆಗೆ ಹೋಗುತ್ತಿದ್ದ ಸಂದರ್ಭದಲ್ಲಿ, ಆಗತಾನೇ ಇಂಗ್ಲಿಷ್ ಕಲಿಯುತ್ತಿದ್ದ ಹೊಸತರಲ್ಲಿ ಅಂದುಕೊಳ್ಳುತ್ತಿದ್ದುದುಂಟು. 'ಬಟ್ ಆದರೆ—ವಾಟ್ ಏನು? ಇದೊಂದು ತಮಾಷೆಯ ಆಟವೂ ಆಗಿತ್ತು. ಎದುರಾಳಿಯನ್ನು ಕೆಣಕಿ ಅವನಿಂದ ಆ ಪದಗಳಿಗೆ ಉತ್ತರವನ್ನು ಪಡೆಯುವ ಉದ್ದೇಶವೂ ಆಗಿತ್ತು. ಆ ಪದಗಳ ಜೋಡಣೆ ಯಲ್ಲಿರುವ ಬಂಧ ಹಾಗೂ ಅವುಗಳ ಸಂಬಂಧ ಒಂದು ವಿಶಿಷ್ಟ ಸ್ವರೂಪವನ್ನು ತಂದುಕೊಟ್ಟಿದ್ದೇ ಅದಕ್ಕೆ ಕಾರಣ ಅನಿಸುತ್ತದೆ. ಆದರೆ ಈಗ, ಆ ಪದಗಳಲ್ಲಿ ಏನೆಲ್ಲ ಅರ್ಥ ತುಂಬಿಕೊಂಡಿದೆ ಎಂದು ಆಶ್ಚರ್ಯವಾಗುತ್ತದೆ. 'ಆದರೆ' ಮತ್ತು 'ಏನು?' ಅವೆರಡರ ಸಂಬಂಧ ಸಾಮಾನ್ಯ ಅಥವಾ ಅಷ್ಟೇ ಸೀಮಿತ ಅರ್ಥವನ್ನು ಮೈಗೂಡಿಸಿ ಕೊಂಡಂತಿದೆ ಎಂದು ಈಗ ನನಗನಿಸುವುದಿಲ್ಲ. ಅದಕ್ಕಿಂತ ತೀರ ಭಿನ್ನವಾಗಿ, ವ್ಯಾಪಕವಾಗಿ ತೋರುತ್ತಿದೆ. ಆದರೆ ಎನ್ನುವುದು, ಏನು? ಅನ್ನುವುದರ ಅರ್ಥವನ್ನೂ ಉತ್ತರವನ್ನೂ ಹುಡುಕಿಕೊಂಡು ಹೋಗುವಂತೆ ಭಾಸವಾಗುತ್ತದೆ. ದೊಡ್ಡ ಬ್ರಹ್ಮಾಂಡವನ್ನೇ ತೆರೆದು ತೋರುವ ಗವಾಕ್ಷಿಯಂತೆ ತೋರುತ್ತದೆ.

'ಆದರೆ' ಅಥವಾ 'ರೇ'—ಎಂಬ ಒಂದು ಅಕ್ಷರ ಅಥವಾ ಮೂರಕ್ಷರದ ಒಂದು ಪದದ ಬಗ್ಗೆ ಇಷ್ಟೆಲ್ಲಾ ವ್ಯಾಖ್ಯಾನವೇ ಎಂದು ಯಾರು ಏನೇ ಹೇಳಲಿ, ನನ್ನ ಪಾಲಿಗೆ ಅದು ತ್ರಿವಿಕ್ರಮನಂತೆ. ಅದನ್ನು ಬಿಟ್ಟು ನಮ್ಮ ಬದುಕಿಲ್ಲ, ಆಲೋಚನೆ ಗಳಿಲ್ಲ. ಕೆಲವರು ಅದನ್ನು ಕೈಲಾಗದವರ ಪ್ರಬಲ ಅಸ್ತ್ರ ಎಂದು ಭಾವಿಸಬಹುದು. ಇನ್ನು ಕೆಲವರು ವಂಚಕರ, ಸುಳ್ಳುಗಾರರ ಸೂತ್ರ ಎಂದು ವ್ಯಂಗ್ಯವಾಡಬಹುದು. ಮತ್ತೆ ಕೆಲವರು ನನ್ನ ಅರ್ಥಕೋಶದಲ್ಲಿ 'ಆದರೆ'—'ರೇ' ಎಂಬ ಪದವೇ ಇಲ್ಲ

ಎಂದು ಜಂಬ ಕೊಚ್ಚಿಕೊಳ್ಳಬಹುದು. ಅವರೆಲ್ಲರಿಗೂ ನನ್ನ ನಮಸ್ಕಾರ. ಯಾರು ಏನೇ ಅಂದುಕೊಳ್ಳಲಿ ನನಗೆ ಮಾತ್ರ ಆದು ಪ್ರಿಯವಾದದ್ದು. ಏಕೆಂದರೆ ಆದು ಮನುಷ್ಯನಾದವನಿಗೆ—ಮರು ಚಿಂತನೆಗೆ ದಾರಿಮಾಡಿಕೊಡುತ್ತದೆ. ಆತ್ಮ ವಿಮರ್ಶೆಗೆ ಎಡೆಮಾಡಿಕೊಡುತ್ತದೆ. ಇದು ರೈಲು ಹೋದ ಮೇಲೆ ಟಿಕೆಟ್ ಪಡೆದಂತೆ ಎಂದು ಕೆಲವರಿಗೆ ಅನ್ನಿಸಬಹುದಾದರೂ, ಮನುಷ್ಯನಾದವನಿಗೆ, ಬದುಕಿಗೆ ಅದು ಅನಿವಾರ್ಯ ಅನ್ನಿಸದೆ ಇರದು. ಎಷ್ಟೋ ವೇಳೆ ನಾವು ತಿಳಿದೋ ತಿಳಿಯದೋ ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುವುದು, ಮರುಚಿಂತನೆಯ ಮೂಲಕ ಅದನ್ನು ಸರಿಪಡಿಸಿಕೊಳ್ಳಲು ಪ್ರಯತ್ನಿಸುವುದು ಸಹಜ. ಆತ್ಮ ವಿಮರ್ಶೆ ಇಲ್ಲದೆ ಯಾವೊಬ್ಬ ಮನುಷ್ಯನೂ ತನ್ನನ್ನು ತಾನು ತಿದ್ದಿಕೊಳ್ಳಲಾರ, ಸರಿಪಡಿಸಿಕೊಳ್ಳಲಾರ. ಅದು ಮುಂದಿನ ಅವನ ಗೆಲುವಿಗೆ ಕಾರಣವಾಗಬಹುದು. 'ರೇ' ಯನ್ನು ಎಲ್ಲರೂ ಸುಳ್ಳು ನೆಪವಾಗಿಯೇ ಬಳಸುತ್ತಾರೆ ಎಂದಲ್ಲ. 'ಆದರೆ' ಎಂಬ ಮೂರಕ್ಷರದ ಒಂದು ಪದ ಮನುಷ್ಯನನ್ನು ಮರುಚಿಂತನೆಗೆ, ಆತ್ಮ ವಿಮರ್ಶೆಗೆ ಒಳಗುಮಾಡುವಷ್ಟು ದೊಡ್ಡದು ಎಂದಾಗ ಆದನ್ನು ಚಿಕ್ಕದೆಂದು ಕಲ್ಪಿಸಿಕೊಳ್ಳುವುದಾದರೂ ಹೇಗೆ?

ನಾನು ಸನ್ಯಾಸಿಯಾಗಲು ಹೊರಟಿದ್ದೆ
ಆದರೆ :
ಹೆಣ್ಣು ಅಡ್ಡ ಬಂದು
ಸಂಸಾರಿಯಾದೆ !
ನಾನು ದಾನಮಾಡಲು ಸಿದ್ಧನಿದ್ದೆ
ಆದರೆ :
ಮಕ್ಕಳು ಅಡ್ಡ ಬಂದು
ಸ್ವಾರ್ಥಿಯಾದೆ!

ಇಂತಹ ಕುಂಟುನೆಪಗಳಿಗಿಂತ, 'ಆದರೆ' ಇಷ್ಟೇ ಬದುಕೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡು ಹೊರಟಾಗ ಆದರಿಂದ ನುಸುಳುವ ಅರ್ಥದ ಪದರಗಳೇ ಬೇರೆಯಾಗುವುದಿಲ್ಲವೆ? ನೋಡಿ ಸ್ವಾಮಿ! ಮತ್ತೆ But ಆದರೆ, What ಏನು? ಎಂದು ಮರು ಪ್ರಶ್ನೆ ಹಾಕಬೇಡಿ ಅಷ್ಟೆ?

ಪಿ. ಗೂ. ರಮೇಶ್

ಮೂರನೆಯ ಕಣ್ಣೊಳಗಿನ 'ಚಿಟ್ಟೆ ತೊಟ್ಟಿಲ ಭೂಮಿ'....!

ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯಗಳನ್ನು ಹಾಯ್ದು ಬಂದ ಆಧುನಿಕ ಕನ್ನಡ ಸಾಹಿತ್ಯವಾಹಿನಿಯ ಮುಂದಿನ ದಿಕ್ಕೇನು? —ಇದು ಎಲ್ಲರ, ವಿಶೇಷವಾಗಿ 90ರ ದಶಕದಲ್ಲಿ ಬರೆಯುತ್ತಿರುವವರ ಮುಂದಿರುವ ಪ್ರಶ್ನೆ. ದಲಿತ ಬಂಡಾಯ ಚಳುವಳಿಗಳು ತಮ್ಮದೇ ದಿಕ್ಕಿನಲ್ಲಿ ಸಾಗಿ ಮಬ್ಬಲ್ಲಿ ಮರೆಯಾಗುತ್ತಿರುವಾಗ 'ಬಂಡಾಯ' ಅಥವಾ 'ದಲಿತ' ಹಣೆಪಟ್ಟಿ ಹಚ್ಚಿಕೊಂಡು ಬರೆಯುವ ಕಾಳಜಿ ಈಗ ಹೆಚ್ಚಿನವರಿಗೆ ಉಳಿದಂತಿಲ್ಲ. ಹಾಗಾಗಿಯೇ ಆ ನೆಲೆಯ ಬರವಣಿಗೆ ಈಗ ಗೌಣವಾಗಿದೆ. ಕೆಲ ಬರಹಗಾರರು ಈ ಸಂಘಟನೆಯ ವೈಚಾರಿಕ ನೆಲೆಗಳನ್ನು ಪ್ರಶ್ನಿಸಿ ದೂರ ಸರಿದರೂ ಅದು ಕೇವಲ ಪ್ರತಿಕ್ರಿಯೆ ಸ್ವರೂಪದ್ದಾಗಿದ್ದುದು ಕಂಡುಬರುತ್ತದೆ. ಆದರೆ ಆ ಪ್ರಶ್ನೆಗಳಿಗೆ ಯಾವುದೇ ಅಧಿಕೃತತೆಯನ್ನು ಒದಗಿಸದಿರುವುದರಿಂದ ಹಳೆಯ ಕಳೆ ಅಂತೆಯೇ ಅಪ್ರತ್ಯಕ್ಷವಾಗಿ ಬೆಳೆಯುತ್ತಿದೆ.

ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಹೊಸ ತಲೆಮಾರಿನ ಬರಹಗಾರರನ್ನು ನಿರ್ದೇಶಿಸುವ ಅವರ ಮುಂದಿರುವ ಸವಾಲುಗಳನ್ನು ಮನವರಿಕೆ ಮಾಡಿಕೊಡುವ ಹೊಣೆಗಾರಿಕೆ ಹಿರಿಯ ತಲೆಮಾರಿನವರದೆಂಬುದು ಸಹಜ ನಂಬಿಕೆ. ಆದರೆ, 'ಹೊಸ ತಲೆ'ಗಳಿಗೆ ಕೆಲವು ಹಿರಿಯರು ನೀಡುವ ಅಭಿಪ್ರಾಯಗಳ ಸುಖ ಅನುಭವಿಸಿದವರಿಗೆಲ್ಲಾ ಗೊತ್ತೇ ಇದೆ. ಆದರೆ, ಆ ನಿರಾಶೆ ಎಲ್ಲರ ಬಗ್ಗೆಯೂ ಅವಶ್ಯವಿಲ್ಲ. ಯುವ ಚಿಂತಕರ ಬಗ್ಗೆ ಒಂದಿಷ್ಟು ಮರ್ಜಿಯುಳ್ಳ ಕೆಲವಾದರೂ ಹಿರಿಯ ಸೃಜನಶೀಲ ಮನಸ್ಸುಗಳು ನಮ್ಮೊಂದಿಗಿವೆ ಎನ್ನುವುದೇ ಸಮಾಧಾನದ ಸಂಗತಿಯಾಗಿದೆ.

'ಬಂಡಾಯ ದಣಿದಿದೆ ಅದಕ್ಕೆ ವಿಶ್ರಾಂತಿ ಬೇಕಿದೆ' ಎಂದು ಸಾರಿದ ಪ್ರೊ. ಅರವಿಂದ ಮಾಲಗತ್ತಿಯವರು ಅಲ್ಲಿಗೆ ನಿಲ್ಲದೆ ಹಾಗಾದರೆ ನಾವು ಕ್ರಮಿಸಬೇಕಾದ ಮುಂದಿನ ದಿಕ್ಕು ಯಾವುದು? ಎನ್ನುವ ಪ್ರಶ್ನೆಯನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡು ಹೊಸ ಹೆಜ್ಜೆ ಇಡಬೇಕಾದ ದಿಕ್ಕಿನೆಡೆಗೆ ಬೆರಳಿಟ್ಟು ತೋರಿಸು

ತ್ತಿದ್ದಾರೆ. ಅಷ್ಟೇ ಅಲ್ಲ ಆ ದಿಕ್ಕಿನಲ್ಲಿಯ ಕಿರಣಗಳಂತೆ ವೈಚಾರಿಕ ನೆಲೆಯನ್ನು ತಮ್ಮ 'ಮೂರನೆಯ ಕಣ್ಣು' ಎಂಬ ಕವನ ಸಂಕಲನದ ಮೂಲಕ ಮುಂದಿಟ್ಟಿದ್ದಾರೆ. ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಡುವಮುನ್ನ ಕನ್ನಡದ ಯುವ ಲೇಖನಿಗಳು ರೂಢಿಸಿಕೊಳ್ಳಬೇಕಾದ್ದು 'ಸಂಯುಕ್ತವಾದ'ದ ಮಾರ್ಗವೆಂದು, ಅವರ ಮುಂದಿರುವ ಸವಾಲುಗಳು : ಹೊಸ ಆರ್ಥಿಕನೀತಿ, ಉದಾರೀಕರಣದ Slow poison ಪರಿಣಾಮ, ಕೇವಲ ಬಂಡಾಯದ ವಿರುದ್ಧ ಪ್ರತಿಬಂಡಾಯ, ಸದ್ಯದ ರಾಜಕೀಯ ಅಸ್ಥಿರತೆಯ ಕಾರಣ-ಪರಿಣಾಮ-ಪರಿಹಾರಗಳು, ಭ್ರಷ್ಟಾಚಾರಕ್ಕೆ ಸೂಕ್ತ ಔಷಧೋಪಚಾರ, ನಮ್ಮೊಳಗೆ ನೆಲೆ ನಿಂತಿರುವ ಜಾತಿಯೆಂಬ ರಾಕ್ಷಸನ ನಿರ್ನಾಮ....ಇಂತಹ ವಿಶಿಷ್ಟ ಆಲೋಚನೆಗಳನ್ನು ಮುಂದಿಡುತ್ತಿರುವವರು ದಲಿತ–ಬಂಡಾಯ ಪರಂಪರೆಯ ಪ್ರಮುಖರಲ್ಲೊಬ್ಬರಾಗಿದ್ದ ಪ್ರೊ. ಅರವಿಂದ ಮಾಲಗತ್ತಿ ಯವರೇ ಎಂಬುದನ್ನು ಲಕ್ಷಿಸಬೇಕು.

ಕೃತಿಯ ಹೆಸರೇ ಸೂಚಿಸುವಂತೆ ದಲಿತ ಮತ್ತು ಬಂಡಾಯ ಪರಂಪರೆಯ ನಂತರದ ಹೊಸ ದಿಕ್ಕೊಂದನ್ನು ಅನ್ವೇಷಿಸಿ ತೆರೆದು ತೋರುವ ಸದ್ಯದ ಜರೂರು ಆವಶ್ಯಕತೆಯೊಂದನ್ನು ತುಂಬಿಕೊಡುವ ಆಶಯಗಳನ್ನುಹೊತ್ತ ಸಂಕಲನವಿದು. ಅದು ಮಾತ್ರವಲ್ಲ. ಇದೇ ಕನ್ನಡ ಸಾಹಿತ್ಯ ಪರಂಪರೆಯ ವಿಚಕ್ಷಣ ಸಿಂಹಾವಲೋಕನವೂ ಕೃತಿಯ ಅಂತರ್ಯದಲ್ಲಿ ಸೂಕ್ಷ್ಮವಾಗಿ ನಡೆದುಹೋಗುತ್ತದೆ.

ಕರ್ತೃವೇ ಗುರುತಿಸುವಂತೆ ಮೂರನೆಯ ಕಣ್ಣು ಕವನ ಸಂಕಲನ ನೀಳ್ಗವನಗಳ ಸಂಕಲನ. ಇಲ್ಲಿನ ಕವನಗಳನ್ನು ಮೂರು ರೀತಿಯಲ್ಲಿ ವಿಂಗಡಿಸ ಬಹುದಾಗಿದೆ.

೧. ಒಪ್ಪಿಕೊಂಡ ಮೌಲ್ಯಗಳ ಸೋಲನ್ನು ಸಾರಿ ಹೊಸ ಮೌಲ್ಯಗಳಿಗೆ ಹುಟ್ಟುಕೊಡುವ ಕವನಗಳು.

೨. ಸಂಯುಕ್ತವಾದದ ಬುನಾದಿಯಾಗಬಲ್ಲ ವಸ್ತುನಿಷ್ಠ ಕವನಗಳು.

೩. ದಲಿತ ಬಂಡಾಯದ ಹಾಗೂ 'ಸಂಯುಕ್ತವಾದ'ವೆಂಬ ಹೊಸ ಹುಟ್ಟು ಕೊಡುವ ಕವನಗಳು.

ಈ ಮೂರು ಹಿನ್ನಲೆಯ ಕವನಗಳನ್ನೊಳಗೊಂಡ ಈ ಸಂಕಲನ ಹೊಸ ಹುಡುಕಾಟದ ಕಾವ್ಯ ಮಾರ್ಗದ ಹಿನ್ನೆಲೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದು ಕೊಳ್ಳುತ್ತದೆ. ಇಲ್ಲಿರುವ ಒಂದೊಂದು ನೀಳ್ಗವನಗಳು ಅಧ್ಯಯನಾತ್ಮಕ ಬರಹವನ್ನು ನಿರೀಕ್ಷಿಸುತ್ತವೆ. ಈ ಹಿನ್ನೆಲೆಯಲ್ಲಿ ನಾನು ಇದೇ ಸಂಕಲನದ ಚಿಕ್ಕ ಬರಹಕ್ಕೆ ತೊಡಗದೆ ನನ್ನನ್ನು ತುಂಬಾ ಆಕರ್ಷಿಸಿದ ಕವಿತೆ ಯೊಂದರ ವಿಶ್ಲೇಷಣೆಗೆ ಮಾತ್ರ ಪ್ರಯತ್ನಿಸುತ್ತೇನೆ.

'ಚಟ್ಟ ತೊಟ್ಟಿಲ ಭೂಮಿ' ಮೂರನೇಕಣ್ಣೊಳಗಿರುವ ಒಂದು ಮುಖ್ಯ ಕವನ. ಕವಿ ಸೂಚಿಸಬಯಸುವ ಮೂರನೇ ಕಣ್ಣಿನ ಒಳನೋಟ ಈ ಕವನದಲ್ಲಿದೆ. 'ಚಟ್ಟ' ಎನ್ನುವುದು ಸಾವಿನ ಸಂಕೇತವಾದರೆ 'ತೊಟ್ಟಿಲು' ಎನ್ನುವುದು ಹೊಸತರ ಬರುವಿನ ಸಂಕೇತವಾಗಿ ಕಾಣುತ್ತದೆ. ಜೊತೆಗೆ ಈ ಭೂಮಿಯಲ್ಲಿ ಹೊಸತರ ಆಗಮನ ಹಳೆಯದರ ನಿರ್ಗಮನ ಒಂದು ಸಹಜ ಪ್ರಕ್ರಿಯೆ ಎನ್ನುವುದನ್ನು ಹೇಳುತ್ತದೆ. ಹೀಗೆಯೇ ಬಂಡಾಯದ ತಾತ್ವಿಕ ನೆಲೆಗಳಿಗೆ ವಿದಾಯ ಹೇಳುತ್ತಾ ಹೊಸ ಚಿಂತನೆಯ ನೆಲೆಗಳ ಹಾಸಿಗೆ ಹೂ ಹಾಸುವ ಎಚ್ಚರದ ಸ್ಪಂದನ ಇಲ್ಲಿರುವುದು ಕಂಡುಬರುತ್ತದೆ.

ಇಡೀ ಕವನದಾದ್ಯಂತ 'ಕಾವ್ಯ ಕನ್ನಿಕೆ'ಯು ಬೇರೆ ಬೇರೆ ಆಯಾಮದಲ್ಲಿ ಬೆಳೆಯುತ್ತಾ ಹೋಗುತ್ತಾಳೆ. ದಲಿತ ಬಂಡಾಯ ಚಳವಳಿಯ ಘಟ್ಟದಲ್ಲಿ ಶೋಷಿತ ಮೂಕನಿಗೂ ಬಾಯಿಕೊಟ್ಟು ಕ್ರಮೇಣ ತನ್ನ ದನಿಯನ್ನೇ ಕುಗ್ಗಿಸಿಕೊಂಡ ಕಾವ್ಯ ಶಕ್ತಿಯನ್ನು ಕವಿ ನಿರಂತರವಾಗಿ ಪ್ರಶ್ನಿಸತೊಡಗುತ್ತಾರೆ. ಅದು ವೈಯಕ್ತಿಕವಾಗಿ ಈ ಕವಿಯ ಸ್ವಾನುಭವದ ಸ್ಥಿತಿಯೂ ಹೌದು ('ಮೂಕನಿಗೆ ಬಾಯಿ ಬಂದಾಗ' ಮಾಲಗತ್ತಿಯವರ ಚೊಚ್ಚಲ ಕವನ ಸಂಕಲನ). ಅಂದು ಎಲ್ಲರಿಗೂ ದನಿಯಾಗಿ ಎಲ್ಲರಿಂದ ಸಿಂಗರಿಸಿಕೊಂಡು ಹೂ ಗಂಧಗಳಿಂದ ಸಿಂಚನಗೊಂಡವಳು ಇಂದೇಕೆ ದನಿ ಹೀನಳಾಗಿದ್ದೀಯೆ ? 'ಸತ್ತಿರುವೆಯೋ ಬದುಕಿರುವೆಯೋ ?' 'ಕಾವ್ಯಬಾಲೆ....ತರತರದ ಸೀರೆಗಳ ತಂದಿರುವೆ ತೊಡು ಏಳು'—ಎಂದೆಲ್ಲಾ ಮುಂದೆ ಕಾವ್ಯ ದೇವಿಯು ಕಣ್ಣು ತೆರೆಸಲು ಹಾಡುವ ಹಾಡಿಗೆ ಪಲ್ಲವಿ ಮಾಡಿಕೊಳ್ಳುತ್ತಾರೆ. ಕವಿತೆಯ ಒಟ್ಟು ಆಶಯವೂ ಈ ಹೊಸತನದ ಆವಿಷ್ಕಾರದ ಮನೋಭೂಮಿಕೆಯ ಮೇಲೆ ನಿಂತಿದೆ ಎಂಬುದು ಗಮನಾರ್ಹ.

ಅಂದೊಮ್ಮೆ ಕಾವ್ಯ ಎಲ್ಲರನ್ನೂ ಒಂದಾಗಿ ಬೆರೆಸಿದ ಪವಿತ್ರ ಮಡಿಲು. ಆಗ ಕಾವ್ಯ ಗಂಗೆಯಾಗಿದ್ದಳು. ಆಂತಹ ಹಿತವಾದ ಬೆಳದಿಂಗಳಲ್ಲಿ ಬೀದಿಗಿಳಿದ ಈ ಗಂಗೆ ಸಮಾಜದ ಎಲ್ಲಾ ಸಾಮಾನ್ಯ ಸ್ತರದ ಜನತೆಯ ಸೊತ್ತಾಯಿತು, ಮುಖವಾಣಿಯಾಯಿತು ಎಂದು ವಿವರಿಸುವ ಕವಿ—

ಬೆಳ್ಳಿ ಚುಕ್ಕಿ ಮೂಡುವ ಮುನ್ನ
ಬಯಲಿಗೆ ಬಂದು ಬಯಲಾಯಿತು ಎಂದು

ದಲಿತ–ಬಂಡಾಯದ ಪರಂಪರೆಯ ಮಾರ್ಗ ಹಳಿ ತಪ್ಪಿದ್ದರ ಬಗ್ಗೆ ವಿಷಾದದ ದನಿಯೆತ್ತುತ್ತಾರೆ. ಅಂದು ರೆಪ್ಪೆಗೆ, ಪೊರಕೆ-ಗಡ್ಡ-ಬಳೆ ದಾರಗಳು ಮೊಳಕೆಯು ಒಂದೇ ತಟ್ಟೆಯಲುಂಡು ಕೈತೊಳೆದ ಉನ್ಮತ್ತ ಕ್ಷಣಗಳು ಕಾಣ ಕಾಣುತ್ತಿದ್ದಂತೆಯೇ ಮಾಯವಾಗತೊಡಗಿದ್ದ ಒಂದು ಸಂಗತಿಯಾದರೆ, ಅತ್ತ ಇವೆಲ್ಲವನ್ನೂ ಕಂಡ ಅನುಭವಿ ಜೋಯಿಸನೊಬ್ಬ ಹೇಳುತ್ತಿದ್ದ—'ಊರಿಗೆ ಬಂದವಳು ನೀರಿಗೆ ಬರಲಾರಳೆ ?'

(ಅಡಿಗರು ಈ ಹಿಂದೆ ಪ್ರತಿಕ್ರಿಯಿಸಿದ್ದನ್ನು ಕವಿ ಹೀಗೆ ದಾಖಲಿಸುತ್ತಾರೆ). ಕವಿತೆಯ ಮೊದಲ ಹಂತ ಆಶಾದಾಯಕವಾದರೆ ಎರಡನೆಯದು ಸಾಹಿತ್ಯ ಚರಿತ್ರೆಯೊಳಗೆ ಜರುಗಿ ಹೋದ ಬೆಳವಣಿಗೆಯನ್ನು ವಸ್ತುನಿಷ್ಠವಾಗಿ ಪರಾಮರ್ಶಿಸುತ್ತದೆ ಅಂದರೆ ಆಧುನಿಕ ಕನ್ನಡ ಕಾವ್ಯಧಾರೆ ಹರಿದು ಬಂದ ಹಾದಿಯನ್ನೊಮ್ಮೆ ತಿರುಗಿ ನೋಡುತ್ತಾರೆ.

ನವೋದಯದ ಅರುಣ ಕಾಲದಲ್ಲಿ ಸಮಾಜದ ಬೇಕು ಬೇಡಗಳಿಗೆ ಸ್ಪಂದಿಸಿ ' ದೇಶ ಭಕ್ತಿಯ ಸೆಂಟರು ' ಮಾಡಿದ್ದು ತಮ್ಮ ತ್ಯಾಗ ತಮ್ಮ ಮನೆಯ ನೀರನ್ನೆ ತಂದು ವ್ಯವಸ್ಥೆಯನ್ನು ಶುಚಿಗೊಳಿಸಲು ದುಡಿದರು. ನಂತರದ ಪ್ರಗತಿಶೀಲರು ಮಾಡಿದ ಸಾಹಸವನ್ನು ವ್ಯಂಗ್ಯವಾಗಿ ಮತ್ತು ಅಷ್ಟೇ ಹರಿತವಾಗಿ ಕವಿ ತಿವಿಯುತ್ತಾರೆ.

ಕಡಲ ನೀರ ಗಿಂಡಿಯಲಿ ತಂದು ತೊಳೆಯಲೋಗಿ ಸೋತರು
ಪ್ರಗತಿ ಪಂಥದ ಭಂಟರು

ಇಷ್ಟಾಗಿಯೂ ಬಂಡಾಯದ ಭೂಪರು ಮಾಡಿದ್ದಾದರೂ ಏನು ? ಕೀಳುಜಾತಿಯ ಜನರ ಉದ್ಧಾರದ ಪ್ರಣಾಳಿಕೆ ಹಿಡಿದು, ಶೋಷಿತರಿಗೆ ದನಿಯಾಗುವ ಪಣ ತೊಟ್ಟು 'ತಮ್ಮದೆಲ್ಲವನ್ನೂ' ಸುರಕ್ಷಿತವಾಗಿ ಕಾಪಾಡಿಕೊಂಡು ಬೀದಿಗೆ ಬಂದರೂ ನವೋದಯ ದವರಂತೆ ತಮ್ಮ ಮನೆಯ ನೀರು ತಂದು ಶುಚಿಗೊಳಿಸದೆ ದಲಿತರ ಕೇರಿಯಲ್ಲಿಯ ನೀರನ್ನೇ ತೆಗೆದುಕೊಂಡು ದಲಿತರನ್ನು ಶುಚಿಗೊಳಿಸಲು ನಿಂತ ರೀತಿಯನ್ನು, ಪ್ರಾಮಾಣಿಕತೆ ಮೀರಿದ ಇರುವಿಕೆಯನ್ನು ಕವಿ ಪ್ರಗತಿಶೀಲ ಬರಹಗಾರರಿಗೆ ಮಾಡಿದ ವ್ಯಂಗ್ಯಕ್ಕಿಂತ ಹರಿತವಾಗಿ ಚುಚ್ಚುತ್ತಾರೆ.

ಪಾ. ಂಟು ಶರ್ಟಿನ ತೋಳು ಏರಿಸಿ
ಸಾಕವ್ವಳ ಕೇರಿಯ ನೀರು ತಂದು
ಶುಚಿಗೊಳಿಸಲು ನಿಂತೇ ಇದ್ದಾರೆ ....
ಬಂಡಾಯದ ಬೀದಿ ; ಸ್ಮಶಾನ ಯಾತ್ರೆ
ಊರು ಸೇರಲಿಲ್ಲ

ಮೇಲೆ ಉಲ್ಲೇಖಿಸಲಾದ ಕೊನೆಯ ಎರಡು ಸಾಲುಗಳು ಬಂಡಾಯದ ತಾತ್ವಿಕತೆ ಯನ್ನೇ ಬುಡಮೇಲು ಮಾಡಿದಂತೆ ವ್ಯಕ್ತವಾಗಿವೆ. ಈ ಸಂಕಲನದ ಆರಂಭದಲ್ಲಿ ಮಾಲಗತ್ತಿಯವರು :

" ವೈಯಕ್ತಿಕವಾಗಿ ನಾನು ಬಂಡಾಯವನ್ನು ಪ್ರೀತಿಸುತ್ತೇನೆ. ಆದರೆ ಬಂಡಾಯದ ಮನೋಧರ್ಮವನ್ನೆ ಬಂಡವಾಳವಾಗಿ ಮಾಡಿಕೊಂಡು ಬದುಕುವ ಬಂಡವಳೀಕರಣ ನೀತಿಯನ್ನು ವಿರೋಧಿಸುತ್ತೇನೆ. ....ಇದಕ್ಕೆ (ಬಂಡಾಯಕ್ಕೆ) ವರ್ತಮಾನದ ಮೇಲೆ ಇರುವಷ್ಟು ಕಣ್ಣು ಭವಿಷ್ಯತ್ತಿನ ಮೇಲೆ ಇರಲಿಲ್ಲ.

ಭಾರತೀಯ ಮನಸ್ಸನ್ನು ಸಂಪೂರ್ಣವಾಗಿ ಗ್ರಹಿಸಲಿಲ್ಲ. ಪ್ರತಿಭಟನೆಯನ್ನೇ ಕೇಂದ್ರಮುಖವಾಣಿ ಮಾಡಿಕೊಂಡಿದ್ದರಿಂದ ಜೇನುಗೂಡಿನ ಹುಳುಗಳೆಲ್ಲಾ ಎದ್ದವು, ಎದ್ದ ಹುಳುಗಳಿಗೆ ಪರ್ಯಾಯವನ್ನು ಕೊಡದೆ ಹೋದದ್ದರ ಪರಿಣಾಮವಾಗಿ, ಅಪ್ರತ್ಯಕ್ಷವಾಗಿ ಜಾತಿ, ಮತ, ಜನಾಂಗ, ವರ್ಣ, ಧರ್ಮ ಕೇಂದ್ರಿತ ಸಂಘಟನೆಗಳಿಗೆ ನಾಂದಿ ಹಾಡಿದಂತೆ ಆಯಿತು. ಯಾವ ವ್ಯವಸ್ಥೆಯನ್ನು ವಿರೋಧಿಸಲು ಬಂಡಾಯ ಮುಂದಾಯಿತೋ ಅಪ್ರತ್ಯಕ್ಷವಾಗಿ ಆ ವ್ಯವಸ್ಥೆಗೆ ಅಡಿಯಾಳಾಗಿ ಛಿದ್ರವಾಯಿತು. ಹೀಗಾಗಿ ಬಂಡಾಯ ಪ್ರತಿಭಟಿಸುವುದನ್ನು ಕಲಿಸಿತೇ ವಿನಃ ಸಮಾಜದೊಂದಿಗಿದ್ದು ಬದುಕುವುದನ್ನು ಕಲಿಸಲಿಲ್ಲ.''

ಈ ಮೇಲಿನ ಮಾತುಗಳಲ್ಲಿ 'ಬಂಡಾಯದ ಬೀದಿ ಸ್ಮಶಾನ ಯಾತ್ರೆ' ಯಾಕಾಗಿ ಆಯಿತು ? ಮತ್ತು ಅದರ ಮಾರ್ಗ ಯಾಕಾಗಿ ಊರ ಸೇರಲಿಲ್ಲ ? ಎನ್ನುವ ಪ್ರಶ್ನೆಗಳಿಗೆ ಉತ್ತರ ರೂಪದಂತಿವೆ.

ಹಾಗಾಗಿಯೇ ಒಟ್ಟಾಗಿಯೇ ಇದ್ದ ದಲಿತ-ಬಂಡಾಯದ ಹೆಜ್ಜೆಗಳು ಹಳಿ ತಪ್ಪುವಂತಾದವು. ಆದ್ದರಿಂದ 'ಭೂಮಿ ಬಿರಿಯಿತು ಬೆಸೆಯಲಿಲ್ಲ'. ಇಂತಹ ಸ್ಥಿತಿಯಲ್ಲಿ ಇವುಗಳ ಸೋದರತ್ವದ ಸಂಬಂಧವೂ ಉಳಿಯದೆ ಚರಮಗೀತೆಯೇ ಮುಂದಾದಾಗ, ಎಂದರೆ ಕಾವ್ಯ ಸೋದರಿ, ಕಾವ್ಯ ಮುದಿ ಜವ್ವನೆಯಾದಾಗ ಆ ಕಾವ್ಯ ಪರಂಪರೆ ಬಡವಾಯಿತು. ವೈಯಕ್ತಿಕ ಆಶೋತ್ತರಗಳೇ ಮುಂದಾಗಿ ಒಂದು ಸಾಮಾಜಿಕ ಆಂದೋಲನದ ಸ್ವರೂಪವನ್ನು ಕಳೆದುಕೊಂಡು ಶುಷ್ಕವಾಯಿತು ಎಂಬ ಅಂಶವನ್ನು ಮಾಲಗತ್ತಿಯವರು ಸ್ಪಷ್ಟವಾಗಿ ನಿರೂಪಿಸಿಯೇ ಮುಂದೆ ಸಾಗುತ್ತಾರೆ.

' ಕಾವ್ಯ ಬಾಲೆ ' ಮುಂದೆ ' ಕಾವ್ಯ ಕುಂಕುಮೆ 'ಯಾಗಿ ಹಲವರ ಒಡಲಿಗೆ ಸಾಂತ್ವನವನ್ನು ತುಂಬಬೇಕಾಗಿದ್ದ ಪವಿತ್ರ ಕಾವ್ಯ ತನ್ನನ್ನು ತಾನು ' ಗರತಿ ' ಎಂದು ಸಾಬೀತು ಮಾಡಿಕೊಳ್ಳಲೂ ತೊಳಲಾಡಬೇಕಾಯಿತು. ಬೀದಿಗೆ ಬಂದ ಕಾವ್ಯ ಬಾಲೆಗೆ ಬದ್ಧತೆಯ ನೈತಿಕತೆ ಇಲ್ಲದೆ ಬೀದಿಗೆ ಬಿದ್ದ ಸೂಳೆಯಾಗಿ 'ಏಡ್ಸ್ ರೋಗದಿಂದ ಬಾಗಿ/ಹನ್ನೆರಡರ ಹರೆಯದಲ್ಲೇ ಗೂನುಬೆನ್ನಿನ ಮುದುಕಿಯಾದಳು'.

ಇನ್ನು ದಲಿತ ಬಂಡಾಯ ಚಳವಳಿಯ ಹೋರಾಟ, ಸಾಹಿತ್ಯ ಸುಧಾರಣೆಯಿಂದ ಶೋಷಿತರಿಗೆ ನೆಮ್ಮದಿ ನೀಡಿ 'ಬಂದೂಕಿನ ಬಾಯಿಯಲಿ ಗುಬ್ಬಿ ಗೂಡು ಕಟ್ಟುತ್ತದೆ. ಎಂಬ ಬಂಡಾಯ ಕವಿ ರಂಜಾನ್ ದರ್ಗಾರ ಕನಸು ನನಸಾಗಿಯೇ ಉಳಿದದ್ದನ್ನು ವಿಷಣ್ಣರಾಗಿ ಸ್ಮರಿಸುತ್ತಾರೆ, ಕವಿ. ಆದರ ಬದಲಿಗೆ ದಲಿತರ ಪಾಲಿಗೆ ಒದಗಿದ ಸ್ಥಿತಿಗತಿಗಳನ್ನು ಪಟ್ಟಿ ಮಾಡಿ ನೆನಪಿಸುತ್ತಾರೆ (ಕೂಳಿಲ್ಲದ ಗುಡಿಸಲು......).

ಒಂದು ಸಾಹಿತ್ಯಿಕ ಸಾಮಾಜಿಕ ಚಳವಳಿಯ ಬೆನ್ನ ಹಿಂದೆಯೇ ಇಂತಹ ಕೃತ್ಯಗಳಲ್ಲೂ ವೈತಾಳಿದವೆಂದರೆ ಅದರ ಸತ್ವ ಶೀಲತೆ ಹಾಗೂ ಅದು ಹಾಕಿ

ಕೊಟ್ಟ ಮಾರ್ಗದ ಬಗ್ಗೆ ಮಾಲಗತ್ತಿಯವರಂಥ ನೂರಾರು ಸೃಜನಶೀಲ, ಆರೋಗ್ಯಕರ ಮನಸ್ಸುಗಳು ಆತಂಕ, ನೋವು, ವಿಷಾದ ಸೂಚಿಸುವುದು ಸಹಜವೇ ಆಗುತ್ತದೆ. ಗಂಭೀರ ಗುರಿಯಿದ್ದರೂ ಗಾಢಬೆಸುಗೆಯಿಲ್ಲದೆ ಸಂಘಟಿತ ಹೋರಾಟಕ್ಕೆ ತಾಯ್ನೆಲವೇ ಇಲ್ಲದ್ದು ಮಾತ್ರವಲ್ಲದೆ, ಒಳಗೊಳಗೆ ಹೊಗೆಯಾಡಿ, ಬರೀ ಗುಡುಗು, ಸಿಡಿಲಿಗೆ ಮಳೆ ಬಂದು ಮೊಳಕೆಯೊಡೆದೀತು ಎಂದು ಕಾದು ನಿರಾಶೆಯನ್ನು ಮೈಮೇಲೆ ಎಳೆದು ಕೊಂಡಂತಾಯಿತು. ಇನ್ನಾದರೂ "ಕೋಗಿಲೆ ಪಾರಿವಾಳಗಳ ದಿಬ್ಬಣ ಹೊರಟೀತೇನು ? " ಎಂದು ಹಂಬಲಿಸುವ ಕವಿ " ಕಣ್ಣಿಗೆ ಕನ್ನಡಕ ಬೇಕಿಲ್ಲ–ಕಣ್ಣು ಬೇಕು" "ಎದೆಗೆ ಕರ್ಣ ಕವಚ ಬೇಕಿಲ್ಲ ಹೃದಯ ಬೇಕು"–ಎಂದು ಎಚ್ಚರಿಸು ವುದನ್ನು ಗಮನಿಸಬೇಕಾಗುತ್ತದೆ.

ಆ ಕಾವ್ಯವೂ ಮಯೋ ಸಹಜವಾದ ಮಾಲೆಯ ಸ್ಥಾನವನ್ನು ಹೊಂದಿದ್ದು ಸರಿಯಷ್ಟೆ. ಇಂದಾದರೂ ನೆಮ್ಮದಿಯ ನಿಟ್ಟುಸಿರು ಬಿಡಲು ಈ ಕಾವ್ಯ ಮಾತೆಯ ಮಡಿಲು ಆಸರೆಯಾದೀತೇ ಎಂಬ ಆಶಯಕ್ಕೆ ಉತ್ತರ ಹರ್ಷದಾಯಕವಾಗಿಯೇನೂ ಇಲ್ಲ. ಒಂದು ಕಡೆ ಸಲ್ಲದ ವಿಷಯಕ್ಕೆ ರಕ್ತದೋಕುಳಿಯಾದರೆ, ಇನ್ನೊಂದೆಡೆ ವಿವೇಕ ಮತ್ತು ನಾಗರಿಕತೆಯ ಸ್ಪರ್ಶದಲ್ಲಿ ಕರಗಿ ಹೋಗಬೇಕಾಗಿದ್ದ ಜಾತಿ ಮತ ಗಳೆಂಬ ಅನಿಷ್ಟಗಳು ಒಂದರ್ಥದಲ್ಲಿ ಹಿಂದೆಂದಿಗಿಂತಲೂ ಅಪಾಯಕಾರಿ ಪರಿಣಾಮ ಬೀರತೊಡಗಿವೆ.

ತಾಯೇ ಇದು ಕ್ಲಾಸ್ ವಾರ್ ಅಲ್ಲ ಕಾಸ್ಟ್ ವಾರ್
ಕಡಲು ಎತ್ತಿದರೂ ಕಡಲ ನೆಲ ಬತ್ತದು

ಮಂದಿರದ ಮೇಲಿನ ಧ್ವಜ ಮಸೀದಿಯ ಮೇಲೆ ಹೇಗೆ ಬಂತು ? ಎಂಬ ವಿಶಿಷ್ಟ ಪ್ರಶ್ನೆಯ ಜೊತೆಗೆ ಕವಿಯ ಮನದಾಳದ ಆಕ್ರೋಶ ಅಥವಾ ವಿಷಾದ ಕಂಡೂ ಕಾಣ ದಂತೆ ಹರಿದಾಡುತ್ತದೆ.

ಹಾಗಾದರೆ, ಇಂತಹದಕ್ಕೆಲ್ಲಾ ಪರಿಹಾರವೇ ಇಲ್ಲವೇ ? ಇದೆ. ಅತ್ಯಂತ ಮಾರ್ಮಿಕ ಹಾಗೂ ಅರ್ಥಪೂರ್ಣವಾಗಿ ಮಾಲಗತ್ತಿಯವರು ಉತ್ತರಿಸುತ್ತಾರೆ—

ಭವಿಷತ್ತಿನ ಬದುಕಿಗೆ ವರ್ತಮಾನ ಸಮರ್ಥಿಸಬೇಕು
ಭೂತದ ಗರಿಹಿರೆದು ಎಳೆಎಳೆಯ ಅರಿಯಬೇಕು
ತೊಳೆಯಲಾಗದು ರಕ್ತದ ಕೈ ರಕ್ತದಿಂದ
ಹುಡುಕ ಬೇಕಿದೆ ಹೊಸ ನೀರಿನ ಸೆಲೆ ಈಗಿಂದ

ವ್ಯಾಖ್ಯಾನ ರೂಪಿಯಾದ ಕವನದ ಈ ಸಾಲುಗಳಲ್ಲಿ ಮಾಲಗತ್ತಿಯವರ ಆಲೋಚನೆಯ ವೈಶಿಷ್ಟ್ಯತೆ ಥಟ್ಟನೆ ಎದುರಾಗುತ್ತದೆ. ಯಾವುದು ಆಗಬಾರದಿತ್ತೋ ಅದು ಆಗಿ ಹೋದ ಮೇಲೆ, ಆಗಬೇಕಾದುದರತ್ತ ಭರವಸೆಗಳನ್ನು ತುಂಬಿಕೊಂಡು ಹೊಸ

ದಿಕ್ಕಿನತ್ತ ನಡೆಯುವಂತೆ ಮಾಡುವ ಕವಿಹೃದಯ ಇಲ್ಲಿ ಅಡಗಿದೆ. ಭವಿಷ್ಯತ್ತನ್ನು ಕಟ್ಟಲು ವರ್ತಮಾನವನ್ನು ಸಮರ್ಥಿಸಿದ ನವೋದಯ ಭಾವಇಲ್ಲಿ ಭೂತದ ಪರಿಭಾಷೆಯಾಗಿ ಮೂಡಿದೆ. ಪ್ರತಿಭಟನೆ ರಕ್ತಕ್ಕೆ ಪ್ರತೀಕವಾದಂತಿದೆ. ಹಾಗಾಗಿ ಈ ರಕ್ತವನ್ನು ತೊಳೆಯಲು ಹೊಸಚಿಂತನೆಯ ನೆಲೆಯಾಗಿ, ನಾಳಿನ ಸಾಮರಸ್ಯದ ಬದುಕಿಗಾಗಿ ಹೀಗೆ ಪೀಠಿಕೆ ಹಾಕಿಕೊಂಡು ತಮ್ಮ 'ಸಂಯುಕ್ತವಾದ'ದ ಮಂಡನೆಗೆ ತೊಡಗುತ್ತಾರೆ ಅನ್ನಿಸುತ್ತದೆ. ಇದು ಈ ಕವಿತೆಯ ಹಿಂದಿರುವ ಉದ್ದೇಶವೂ ಹೌದು.

ಮಾತೆ ಎನಿಸಿಕೊಳ್ಳುವ ಮಲ್ಲಿಗೆ ಬೆಳೆದ ಈ ಕಾವ್ಯ ಎದುರಿನ ಎಲ್ಲವನ್ನೂ ತುಂಬಿಕೊಂಡ ತಾಯ್ತನದ ಕಸುವಿನ 'ಕಾವ್ಯ ಮಾತೆ'ಯಾಗಬೇಕಿತ್ತು. ಹಾಗಾಗದಿದ್ದಾಗ ನೆನ್ನೆ–ಇಂದು–ನಾಳೆಗಳನ್ನಾವರಿಸಿಕೊಂಡ ಈ ಕಾವ್ಯ ಮಾತೆಯ ಹೊಣೆಗಾರಿಕೆಯ ಬಗ್ಗೆ ಗಮನ ಸೆಳೆಯಲೆತ್ನಿಸುತ್ತಾರೆ. ಇಂದಿಗೆ ಕಾವ್ಯವೆಲ್ಲ ಅಕಾಲದಲ್ಲಿಯೇ ಮುದಿಜವ್ವನೆಯಾಯಿತು. ಆ ಎಲ್ಲಾ ದೌರ್ಬಲ್ಯಗಳ ಹಿಂದೆಯೇ ಸವಾಲುಗಳ ಸಮಯವೂ ಬಂದೊದಗಿದೆ.

ಈ ನೀಳ್ಗವನದ ಕೊನೆಯ ಎರಡು ಭಾಗಗಳು ಆ ದೃಷ್ಟಿಯಿಂದ ತುಂಬಾ ಮಹತ್ವದವು. ಹೊಸ ತಿರುವಿನ ಹೊಸ ಹಾದಿಯನ್ನು ಹೇಳುವಂಥವು. ಈ ಎರಡು ಭಾಗಗಳಲ್ಲಿ ಕಾವ್ಯ ಸಾಂಪ್ರದಾಯಿಕ ಕಲ್ಪನೆಯತ್ತಲೇ ಮತ್ತೆ ತಿರುಗಿ ಕಾವ್ಯಬಾಲೆ ಯಾಗಿದ್ದವಳು ಮುದಿಜವ್ವನೆಯಾಗಿ, ದೇವತೆಯಾಗಿ ನಿಲ್ಲುವುದು ಗಮನಾರ್ಹ. ಕಾಲಕ್ಕೆ ಮುಪ್ಪಿಲ್ಲ. ಅಂತೆಯೇ ಕಾವ್ಯಕ್ಕೂ ಎಂಬುದು ನಂಬಿಕೆ. ಮುಪ್ಪಿದ್ದರೂ ಅದು ಕಾಲಿಕ ಈ ಮುಪ್ಪಲ್ಲೇ ಭವಿಷತ್ತಿಗೆ ರೂಪ ಸಿಗುತ್ತದೆ. ಅಂತೆಯೇ ಆಕೆ ಜವ್ವನೆಯಾಗುತ್ತಾಳೆ ಎಂದು ಕವಿ ಪ್ರತಿಪಾದಿಸುತ್ತಾರೆ.

ಕವನ ಸಂಕಲನದ ಮುನ್ನುಡಿಯಲ್ಲಿ ಲೇಖಕರು ಹೇಳುವಂತೆ, 'ಮಿಶ್ರ ಆರ್ಥಿಕ ನೀತಿಯ ಪರಿಣಾಮವೇ ಉದಾರೀಕರಣವೋ ಅಥವಾ ದಿಕ್ಕು ದೆಸೆಯಿಲ್ಲದ ಪಯಣವೇ ಉದಾರೀಕರಣವೋ ?—ಈ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ರಬ್ಬರನ್ನು ಎಳೆದಾಡುವ ಕಾಲ ಇದಲ್ಲ, ಭವಿಷತ್ತಿನ ನಮ್ಮ ನೆಲೆಯನ್ನು ಅರಸುವ ಕಾಲ, ಎಂದು ಗ್ರಹಿಸುತ್ತಾರೆ. ಹೀಗಾಗಿ ನಮ್ಮ ದೇಶದ ಸ್ಥಿತಿ :

ಬಾಯಿ ಮುಚ್ಚಿದ ಮಣ್ಣಿನ ಗಡಿಗೆಯಲಿ
ನೀರೂ ಕುದಿಯುತ್ತಿದೆ
ನೀರು ಕಾಯಿಸುವ ನೆಪದಲಿ
ವಿದೇಶಿ ಸೌದೆಯೋ ಸೌದೆ–ಬಂದು ಬೀಳುತ್ತಿದೆ
ಹೊರಗಿನ ಉರಿ, ಒಳಗಿನ ಧಗೆ
ಯಾವಾಗ ಸಿಡಿಯುತ್ತದೆಯೋ ಈ ಗಡಿ-ಗೆ ಗೊತ್ತಿಲ್ಲ !

ಈ ಹಿಂದೆಯೇ ವಸಾಹತುಶಾಹೀ ಅನುಭವವನ್ನು ಉಂಡಿದ್ದಾಗ್ಯೂ ಕಂಡೂ ಕಂಡೂ ಮತ್ತೆ ಅದೇ ಹುತ್ತಕ್ಕೆ ಕೈ ಹಾಕುವ ಹುಂಬತನ ತೋರಿದ ಭಾರತೀಯ ಮುಂದಾಳು ಗಳ ಆಲೋಚನಾ ಕ್ರಮದ ನಿರ್ಣಯಗಳು ತಾವಾಗಿಯೇ ಕೈಗೆ ಹಾಕಿಕೊಂಡ ಕೋಳ ಎನ್ನುವುದನ್ನು ತಿಳಿಸುವ ಕವಿ, ಜನತೆಯ ಆಶೋತ್ತರಗಳು ಈ Slow Poisonಗೆ ಸಿಕ್ಕಿ ಬಲಿಯಾಗಬಹುದಾದ ಸಾಧ್ಯತೆಗಳನ್ನು ಮಾರ್ಮಿಕವಾಗಿ ಅಪಾಯದ ಘಂಟೆಯನ್ನು ಬಾರಿಸುವುದರ ಮೂಲಕ ತೆರೆದಿಡುತ್ತಾರೆ. ಆ ಅಪಾಯದ ಘಂಟೆಯ ಸದ್ದನ್ನು ಕಾವ್ಯ ದೇವತೆಯ ಮೂಲಕ ಮೊಳಗಿಸಲು ಕವಿ ಕಾವ್ಯ ದೇವತೆಯ ವರಕೇಳುವಂತೆ ಕಂಡರೂ, ಅಪ್ರತ್ಯಕ್ಷವಾಗಿ ಆ ಕಾವ್ಯ ದೇವತೆಯನ್ನು ಕೈಹಿಡಿದು ನಡೆಸುವ ಸಾಹಸವನ್ನು ಮಾಡುತ್ತೇನೆ ಎಂಬ ಧ್ವನಿಯೂ ಇರುವುದನ್ನು ಗಮನಿಸಲೇಬೇಕು—

ಕಾವ್ಯ ದೇವತೆಯೇ
ತಾ ಕೈ ತಾ
ದುರ್ಬಲನೆಂದು ದೂರದಿರು
....

ಏನಾದರಾಗಲಿ ನಿನ್ನತನದಿಂದ ಎಲ್ಲವನ್ನು ಸರಿಪಡಿಸು ಇಲ್ಲವೇ ಆ ಕಾರ್ಯಮಾಡಲು ನನ್ನೊಂದಿಗೆ ಸಹಕರಿಸು ಎಂದು ಕಾವ್ಯದೇವಿಗೆ ತನ್ಮೂಲಕ ಸೃಜನಶೀಲ ಮನಸ್ಸುಗಳಿಗೆ ಕೋರುತ್ತಾರೆ : ಆಹ್ವಾನಿಸುತ್ತಾರೆ. ಅದರ ಇನ್ನೊಂದು ಮುಖದಲ್ಲೇ ಸವಾಲಾಕುತ್ತಾರೆ. ಆಗಬಾರದ್ದೆಲ್ಲಾ ಆಗತೊಡಗಿದಾಗ ಇಂತಹ ನಿರ್ಧಾರದ ಹೆಜ್ಜೆಗಳು ಅನಿವಾರ್ಯವೆಂದುಕೊಂಡಂತೆ ಕಾಣುತ್ತದೆ. ಹಾಗಾಗಿಯೇ ಕವಿತೆಯ ಅಂತಿಮ ಸಾಲುಗಳು ದನಿಗೈಯುತ್ತವೆ.

ಸಿದ್ಧನಿರುವೆ ಜೈ
ಏನಾದರೂ ಗೈ
ಎಲ್ಲದಕ್ಕೂ ಸೈ
ಇಲ್ಲ ; ತಾಕೈ

ಪಾಚಿಗಟ್ಟಿದ ಕೆಸರೊಳಗೆ ಇರಲೊಲ್ಲದ ಮನಸ್ಸೊಂದು ಹೊಸತೊಂದರ ಆವಿಷ್ಕಾರಕ್ಕೆ ಆಶಿಸಿ ಶ್ರಮಿಸುತ್ತದೆ, ಅದರ ಫಲವನ್ನು ಇಂದಲ್ಲ, ಈಗಲೇ ಉಣ್ಣಬೇಕೆಂಬ ಕಾತರ ತೋರುತ್ತದೆ.

ನಾಡಿನ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಳವಳಿಯೊಂದರ ಪ್ರಮುಖ ರೂವಾರಿಯೂ ಎನಿಸಿದ್ದ ಮಾಲಗತ್ತಿಯವರು ಆ ಚಳವಳಿಯ 'ನಿರೀಕ್ಷಿತಫಲ' ಕಾಣದಾದಾಗ ಉನ್ನತ ಆದರ್ಶದ ಆಂದೋಲನವೊಂದು ಬಲಿಯಾಗುದನ್ನು ತೀವ್ರ

ಅಸಮಾಧಾನದಿಂದ ನೆನೆಯುತ್ತಾರೆ. ಅಂತಹ ಎಲ್ಲಾ ಅನುಭವಗಳನ್ನು ಕವಿತೆಗಳಾಗಿಸಿ ಹೊಸ ತಲೆಮಾರಿನವರಿಗೆ ಪರಿಷ್ಕರಿಸಿಕೊಂಡು ಮುಂದೆ ಸಾಗಲು ಅಪ್ರತ್ಯಕ್ಷವಾಗಿ ನಿರ್ದೇಶಿಸುವ ಕಾಳಜಿಯನ್ನು ತೋರಿಸುವಂತೆ ಭಾಸವಾಗುತ್ತದೆ. ಇಡೀ ಸಂಕಲನಕ್ಕೆ ಈ ಕವನ ಕಲಶಪ್ರಾಯವೂ ಹೌದು, ಪೀಠಿಕಾ ಭಾಗವೂ ಹೌದು.

ಕವಿತೆಯನ್ನು ಒಮ್ಮೆ ಓದುತ್ತಿದ್ದಂತೆಯೇ ನವ್ಯ ಶೈಲಿಯನ್ನು ನೆನಪಿಸುತ್ತದೆ. ಇಲ್ಲಿ ಪ್ರತಿಪಾದಿತವಾಗಿರುವ ವಿಸ್ತೃತ ಸಂಗತಿಗಳ ಮಾಲೆಯನ್ನು ಕಟ್ಟಿಕೊಡಲು ಅದೇ ಅನಿವಾರ್ಯ ಹಾಗೂ ಪರಿಣಾಮಕಾರಿಯಾದ ಮಾರ್ಗವೆಂಬುದು ಮೇಲುನೋಟಕ್ಕೆ ಅಸಂಬದ್ಧವೆನಿಸಿದರೂ ಪೂರ್ಣಕವಿತೆಯನ್ನು ಇರುವ ಸ್ವರೂಪ ಶೈಲಿಯಲ್ಲೇ ಗ್ರಹಿಸಿದ ಮೇಲೆ ಅನ್ಯಸ್ವರೂಪದ ನಿರೂಪಣೆಯೊಂದು ಸಂಗತವಾಗುತ್ತಿರಲಿಲ್ಲವೇನೋ ಅನ್ನಿಸುತ್ತದೆ .... ಆದಾಗ್ಯೂ ಕವಿತೆಯ ಕೆಲವು ಸಾಲುಗಳು ಎಷ್ಟೇ ಪ್ರಯತ್ನಿಸಿದರೂ ಗ್ರಹಿಸಲು, ಸಂಬಂಧಾರ್ಥ ಕಲ್ಪನೆಗೆ ಹೆಣಗಾಡಿಸುತ್ತವೆ. ಪ್ರತಿಮೆಗಳ ಸೃಷ್ಟಿಯಲ್ಲಿ ಕವಿಕಲ್ಪನೆಯು ಓದುಗನ ಮನಸ್ಸಿಗೆ ನಿರಂತರವಾಗಿ ಹರಿಯುವಲ್ಲಿ ಏನೋ ಅಡ್ಡಿಯಾದ ಅನುಭವವಾಗುತ್ತದೆ. ಅಂತಿಮವಾಗಿ ಅವೆಲ್ಲವೂ ಸಹ್ಯ ಎನಿಸುತ್ತವೆ ಅಷ್ಟೆ.

ನೂರಾರು ಕನಸುಗಳೊಂದಿಗೆ ಬೀದಿಗಿಳಿದು ಬಂದು ಸಮೂಹದ ಹಿತಕ್ಕಾಗಿ ದುಡಿಯಲೊರಟ ಹೋರಾಟ ತನ್ನೊಳಗೇ ಭದ್ರತೆ ಕಳೆದುಕೊಂಡು ಸೊರಗಿ ದಿಕ್ಕು ಕಾಣದಾದಾಗ ಅದರ ಹೆಸರಲ್ಲಿ ಲಾಭಪಡೆಯಲಷ್ಟೇ ಮುಂದಾದವರು ಕೆಲವರಾದರೆ, ಇದೆಲ್ಲದರ ಸಹವಾಸವೆ ಬೇಡೆಂದು ದೂರಸರಿದು ಎಲ್ಲೋ ಮರೆಯಾಗಿ ತಮಗನ್ನಿಸಿದ್ದನ್ನು ಗೀಚುತ್ತಾ ಕಾಲಕಳೆಯುತ್ತಿರುವವರು ಮತ್ತೆ ಕೆಲವರು. ಇವೆರಡೂ ವರ್ಗಕ್ಕೆ ಸೇರದೆ ದಿಕ್ಕು ತಪ್ಪಿದ ಚಳವಳಿಯನ್ನು ಪ್ರಸಕ್ತ ಸವಾಲುಗಳಿಗೆ ಅಗತ್ಯವಿರುವಂತೆ ಸಿದ್ಧಪಡಿಸಲು ಮುಂದಾಗಲೊರಟ ಕೆಲವೇ ಅಪರೂಪದ ಮನಸ್ಸುಗಳು ನಮ್ಮನಡುವೆ ಇವೆ. ಅಂತಹವರುಗಳಲ್ಲಿ 'ಸಂಯುಕ್ತಯಾಗ'ದ ರೂವಾರಿಯಾಗಿ ತಮ್ಮ ಆಲೋಚನೆ ಆಶಯಗಳನ್ನು ಬಿತ್ತಲೊರಟಿರುವ ಮಾಲಗತ್ತಿಯವರು ನಮ್ಮ ನಡುವಿನ ಹಿರಿಯರಾಗಿ ಕೇವಲ ಕವಿಗಳಾಗಿರದೆ ಗಮನಾರ್ಹ ಚಿಂತಕರಾಗಿದ್ದಾರೆ.

ಸ. ರಘುನಾಥ

ತಾನೆ ತಾನಾಗಿ....

ಕಾಡು ಹರಟೆಯ ಮಧ್ಯೆ
ಪಕ್ಷಿ ಪ್ರಿಯ ಮಿತ್ರ
ಕ್ವಿಜ್ ಮಾಸ್ತರನಂತೆ ಕೇಳಿದ
ಹಕ್ಕಿಗಳಲ್ಲಿ ಬುದ್ಧಿಶಾಲಿ ಯಾವುದು ಗೊತ್ತ ?

ಹೇಳಿದ್ದನೆಲ್ಲ ತಳ್ಳಿ
ಸೋತೆ ಅನ್ನಿಸಿ ಕೊನೆಗೆ
ಒಡಪು ಬಿಡಿಸಿದ ಹುಡಗನಂತೆ
ಬೀಗಿ ಬಾಯ್ಬಿಟ್ಟ – 'ಆ ಹಕ್ಕಿ ಕಾಗೆ'.

ಒಪ್ಪುವುದು ಕಷ್ಟವಾಗಿತ್ತು ನನಗೆ
ನರಿಯ ಬಾಯಿಗೆ ಮಾಂಸದ ತುಂಡು ಹಾಕಿ
ಮೋಸ ಹೋದದ್ದು ಇರಲಿ, ಇಂದಿಗೂ
'ಉಷ್ ಕಾಕಿ' ಮಾಡಿ ಮಕ್ಕಳ ವಂಚಿಸೋದು ಅದರ ಹೆಸರಿನಲ್ಲಿ !

ಗೆಳೆಯನ ಮಾತು ಒಪ್ಪಲು ಸಾಕ್ಷಿ ಇರದೆ
ಒಪ್ಪದಿರಲು ಆಧಾರವಿಲ್ಲದೆ
ಅವಕಾಶ ಬಂದಾಗ ನೋಡೋಣವೆಂದು
ಆ ಮಾತು ಅಲ್ಲಿಗೆ ಬಿಟ್ಟು ಬಿಟ್ಟೆ.

ಒಂದು ದಿನ ಸಂಪಿಗೆಯ ಮರಕ್ಕೆ ಕಾಗೆ ಬಂತು
ಕಡ್ಡಿ ಪುರಲೆ ತಂದು ಗೂಡು ಕಟ್ಟಿತು.
ತಿಂದಾಗ ಅಗುಳು, ಕೇರಿ ಆರಿಸಿದಾಗ ಕಾಳು
ಹಾಕುತ್ತ ವಿಶ್ವಾಸ ಗಳಿಸಿಕೊಂಡೆ.

ಕಾಗೆ ನಂಬಿದ್ದು ಖಚಿತವಾದ ಮೇಲೆ
ಒಂದು ದಿನ ಬಿಡುವು ಮಾಡಿಕೊಂಡು
ಕಾಳು ಕೊಟ್ಟು, ತಿಂದಾದ ಮೇಲೆ
'ಕಾಕಾ 'ಅಂದೆ. ಸ್ಪಂದಿಸಿ 'ಕಾಕಾ ' ಅಂತು ಕಾಗೆ.

ಇನ್ನೊಂದು ದಿವಸ ದವಸ ಕೊಟ್ಟು
ತಿಂದಾದ ಮೆಲೆ ಕಾಕಾ ಅನ್ನಿಸುತ್ತ
'ಕುಹೂಕುಹೂ ' ಕೂಗಿದೆ. ಕಾಗೆ ಮೌನ ತಳೆದು
ಕ್ಷಣ ನನ್ನನೇ ನೋಡಿ ಪುರ್ರನೆ ಹೋಯ್ತು ಹಾರಿ.

ಅಂದು ಸಂಜೆ ಮರಳಿ ಬರಲಿಲ್ಲ ಗೂಡಿಗೆ
ಮರುದಿನದ ಸಂಜೆಯೂ ಗೂಡಿತ್ತು ಖಾಲಿ
ದಿನ ಕಳೆದರೂ ಬರಲಿಲ್ಲ
ಕಣ್ಣು ಮನಸು ಖಾಲಿ ಉಳಿಸಿ.

ಮೂಲ ಮರಾಠಿ : ಪ್ರೊ. ಶ್ರೀ. ರ. ಭಿಡೆ
ಕನ್ನಡ ಅನುವಾದ : ಕೌಲಗಿ ಶೇಷಾಚಾರ್

ಭೀಷ್ಮ ಪ್ರತಿಜ್ಞೆಯ ಅನ್ವಯಾರ್ಥ

ದೇವವ್ರತನ ಅಭೂತಪೂರ್ವ ಮತ್ತು ಅಸಾಮಾನ್ಯ ಪ್ರತಿಜ್ಞೆ ಏನುಂಟೋ ಅದು ಮಹಾಭಾರತದ ಗಂಗೋತ್ರಿ. ಮಹಾಭಾರತದ ಕಥೆಗೆ ಓಟ ಬರುವುದು ಈ ಪ್ರತಿಜ್ಞೆಯಿಂದಲೆ. ಮಹಾಭಾರತದಲ್ಲಿನ ಅನೇಕ ಘಟನೆಗಳ, ಪ್ರಸಂಗಗಳ, ಪ್ರಶ್ನೆಗಳ ಮತ್ತು ಸಮಸ್ಯೆಗಳ ಮೂಲವು ಈ ಪ್ರತಿಜ್ಞೆಯಲ್ಲಿ ಅಡಗಿದೆಯೆಂದರೆ ಅತಿಶಯೋಕ್ತಿಯಾಗಲಾರದು. ದೇವವ್ರತನು ಈ ಪ್ರತಿಜ್ಞೆಯ ಉದ್ಗಾರ ಮತ್ತು ಅದರ ಚಾಚೂ ತಪ್ಪದ ಪಾಲನೆ ಇವನ್ನು ಮಾಡದೇ ಇದ್ದಿದ್ದರೆ ಇಂದು ನಮ್ಮ ಮುಂದಿರುವ ಮಹಾಭಾರತದ ಸ್ವರೂಪವು ಹಾಗೆಯೇ ಉಳಿಯಲು ಸಾಧ್ಯವಾಗುತ್ತಿತ್ತೆ? ದಶರಥನು ವರವನ್ನು ಕೊಡದೆ ಹೋಗಿದ್ದರೆ ರಾಮಾಯಣಕ್ಕೆ ಯಾವ ಅವಸ್ಥೆಯಾಗುತ್ತಿತ್ತೋ ಅದೇ ರೀತಿ ಈ ಪ್ರತಿಜ್ಞೆಯ ಅಭಾವದಿಂದ ಮಹಾಭಾರತಕ್ಕೂ ಆಗುತ್ತಿತ್ತು. ಅದರ ಇಡೀ ಸ್ವರೂಪವೇ ಸಂಪೂರ್ಣವಾಗಿ ಬದಲಾಗುತ್ತಿತ್ತು. ರಾಮಾಯಣವು ಉಂಟಾದುದು ದಶರಥನ ವರದಿಂದ ಮತ್ತು ಮಹಾಭಾರತವು ಆಕಾರವನ್ನು ತಳೆದಿದ್ದು ದೇವವ್ರತನ ಪ್ರತಿಜ್ಞೆಯಿಂದಲೆ. ಈ ವರ, ಆ ಪ್ರತಿಜ್ಞೆ, ಈ ಮಹಾಕಾವ್ಯಗಳ ಅವಿಭಾಜ್ಯ ಅಂಗಗಳಾಗಿವೆ.

ದೇವವ್ರತನು (ಭೀಷ್ಮ) ಒಂದು ವೇಳೆ ಆಮರಣ ಬ್ರಹ್ಮಚಾರಿಯಾಗಿ ಉಳಿಯುವ ಪ್ರತಿಜ್ಞೆಯನ್ನು ಮಾಡದೆ ಇದ್ದಿದ್ದರೆ ಆಗ ಅವನಿಗೆ ಹುಟ್ಟಿದ ಮಕ್ಕಳು ರಾಜ್ಯದ ಅಧಿಕಾರಿಗಳಾಗುತ್ತಿದ್ದರು. ಆಪದ್ಧರ್ಮವೆಂದು ಅಂಬಿಕೆ ಅಂಬಾಲಿಕೆಯರಿಂದ ನಿಯೋಗ ವಿಧಿಯ ಮೂಲಕ ಸಂತತಿಯನ್ನು ನಿರ್ಮಿಸುವ ಸಮಸ್ಯೆಯು ಬರುತ್ತಿರಲಿಲ್ಲ. ಧೃತರಾಷ್ಟ್ರನು ಕುರುಡನೂ ಪಾಂಡುವು ರೋಗಿಯೂ ಆಗದೆ ಇದ್ದಿದ್ದರೆ, ಒಂದು ವೇಳೆ ವಿದುರನು ಹುಟ್ಟದೇ ಇದ್ದಿದ್ದರೆ, ಧಾರ್ತರಾಷ್ಟ್ರರಿಗೆ ರಾಜ್ಯಾಧಿಕಾರವು ಪ್ರಾಪ್ತವಾಗುತ್ತಿತ್ತು. ಕೌಂತೇಯರಿಗೆ (ಪಾಂಡವರಿಗೆ) ಕಳವಳ ಪಡುವ ಕಾರಣವೇ ಇರುತ್ತಿರಲಿಲ್ಲ, ವೈಮನಸ್ಯವೂ ಹುಟ್ಟಿಕೊಳ್ಳುತ್ತಿರಲಿಲ್ಲ.

ಮೋಸದಿಂದ ಕೂಡಿದ ಜೂಜಿನ ಪ್ರಸಂಗ, ದ್ರೌಪದಿಗೆ ಉಂಟಾದ ಮಾನಭಂಗ, ವನವಾಸ, ಅಜ್ಞಾತವಾಸ, ಇಷ್ಟೇ ಅಲ್ಲ, 18 ಸಾವಿರ ಅಕ್ಷೌಹಿಣೀ ಸೈನ್ಯವನ್ನು ನಾಶಮಾಡುವ ಭಾರತೀಯ ಯುದ್ಧವು ಹುಟ್ಟಿಕೊಳ್ಳುತ್ತಿರಲಿಲ್ಲ. ಮಹಾಭಾರತದಲ್ಲಿ ನೂರಐವತ್ತಕ್ಕೂ ಹೆಚ್ಚಾದ ಶಪಥ ಮತ್ತು ಪ್ರತಿಜ್ಞೆಗಳಿವೆ. ಆ ಪೈಕಿ ಇದೂ ಒಂದಾಗುತ್ತಿತ್ತು. ಆದರೆ ಈ ಪ್ರತಿಜ್ಞೆಯು ಮಕ್ಕಳು ಮೊದಲುಗೊಂಡು ಹಿರಿಯರವರೆಗೂ ಬಾಯಲ್ಲಿದೆ; ತುಂಬ ಆದರ ಕೌತುಕಗಳಿಂದ ಅದರ ಉಲ್ಲೇಖವಿದೆ. ಇದಕ್ಕೆ ಕಾರಣ ಇಡೀ ಸಮಾಜವು ಈ ಪ್ರತಿಜ್ಞೆಯ ಸಂಬಂಧವನ್ನು ಹೊಂದಿದೆ ಅದರ ಪರಿಣಾಮದ ಕಾವು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಎಲ್ಲರಿಗೂ ಮುಟ್ಟಿದೆ. ಮಹಾಭಾರತದಲ್ಲಿ ಅನೇಕ ಉಜ್ವಲ ಪ್ರತಿಜ್ಞೆಗಳಿವೆ. ಆದರೆ ಆ ಪೈಕಿ ಯಾವುದೊಂದೂ ಈ ಪ್ರತಿಜ್ಞೆಯ ಬಳಿ ಬರಲಾರದು. ಕಾರಣ ಇತರ ಪ್ರತಿಜ್ಞೆಗಳ ಪರಿಣಾಮವು ವಿಶಿಷ್ಟವ್ಯಕ್ತಿ, ವಿಶಿಷ್ಟಕಾಲ ಎಂಬೀ ಎಲ್ಲೆಯೊಳಗೆ ಒಳಪಡುತ್ತಿದೆ. ಇಡೀ ಸಮಾಜವನ್ನು ಕಲಕುವ ಸಾಮರ್ಥ್ಯವು ಅವಕ್ಕಿಲ್ಲ. ದೇವವ್ರತನ ಪ್ರತಿಜ್ಞೆಯಿಂದ ಮಹಾಭಾರತದಲ್ಲಿನ ಹತ್ತಿರ ಹತ್ತಿರ ಎಲ್ಲ ವ್ಯಕ್ತಿ, ವಂಶ, ಪ್ರದೇಶ, ಇವು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ತೊಂದರೆಗೆ ಒಳಗಾಗಿವೆ. ಈ ಪ್ರತಿಜ್ಞೆಯಿಂದಲೇ ಮಹಾಭಾರತದ ಇತಿಹಾಸವು ಉಂಟಾಗಿದೆ. ಈ ಪ್ರತಿಜ್ಞೆಯು ಬರೀ ಒಂದು ವ್ಯಕ್ತಿಗಾಗಿ ಉಳಿಯದೆ ಇಡೀ ಸಮಷ್ಟಿಗೆ ಸಂಬಂಧಿಸಿದ್ದಾಗಿದೆ. ಈ ಪ್ರತಿಜ್ಞೆಯಿಂದಲೇ ದೇವವ್ರತನು ಭೀಷ್ಮನಾದನು ಮತ್ತು ಭೀಷ್ಮನಿಂದಲೇ ಈ ಪ್ರತಿಜ್ಞೆಯು ಸಾಧಾರಣವಾಗಿ ಉಳಿಯದೆ ಭೀಷ್ಮ ಪ್ರತಿಜ್ಞೆಯೆಂದಾಯಿತು.

ಭೀಷ್ಮ ಮತ್ತು ಅತನ ಪ್ರತಿಜ್ಞೆ ಇವೆರಡರ ಶ್ರೇಷ್ಠತೆ ಮತ್ತು ಮಹತ್ತ್ವ ಅನನ್ಯವಾಗಿವೆ. ಈ ಪ್ರತಿಜ್ಞೆಯನ್ನು ಭೀಷ್ಮನ ಜೀವನದಿಂದ ಬೇರ್ಪಡಿಸಲಾಗುವುದಿಲ್ಲ. ಬೇರ್ಪಡಿಸಿದ್ದೇ ಆದರೆ ದೇವವ್ರತನ ಭೀಷ್ಮತ್ವವು ಉಳಿಯಲು ಸಾಧ್ಯವಿಲ್ಲ. ಈ ಪ್ರತಿಜ್ಞೆಯು ಭೀಷ್ಮನ ವ್ಯಕ್ತಿರೇಖೆಯ ಪ್ರಾಣವಾಗಿದೆ. ಭೀಷ್ಮನು ಮಹಾಭಾರತದಲ್ಲಿನ ಒರ್ವ ಹಿರಿಯ ಶ್ರೇಷ್ಠ, ಭವ್ಯ, ಉತ್ತುಂಗ ಮತ್ತು ಆದರಣೀಯ ವ್ಯಕ್ತಿಯಾಗಿದ್ದಾನೆ. ಅತನ ಪರಾಕ್ರಮ, ನಿರ್ಧಾರ, ಅತುಲತ್ಯಾಗ, ಆಳವಾದ ಜ್ಞಾನ, ಅಸಮಾಧಾನ ಧೈರ್ಯ ಮತ್ತು ಅಚಲ ನಿಷ್ಠೆ ಇವೆಲ್ಲವೂ ಮನಸ್ಸನ್ನು ಸೆಳೆಯುವಂಥವು. ಗಂಗೆಯಂಥ ಸ್ವರ್ಗೀಯ ಸೌಂದರ್ಯವತಿಯಲ್ಲಿ ಎಂಟು ಮಕ್ಕಳಾಗುವ ತನಕ ಇಂದ್ರಿಯ ಸುಖವನ್ನು ಪಡೆದ ಮೇಲೂ ಯಾವ ಶಂತನುವಿನ ಕಾಮೇಚ್ಛೆಯು ತೃಪ್ತಿಗೊಳ್ಳದೆ ಉಳಿಯಿತೋ ಅಂಥ ತಂದೆಯ ಕಾಮೇಚ್ಛೆಯನ್ನು ತೃಪ್ತಿಗೊಳಿಸುವ ಸಲುವಾಗಿ ಯಾವಾತನು ತನ್ನ ಇಂದ್ರಿಯ ಸುಖವನ್ನು ಸ್ವಯಿಚ್ಛೆಯಿಂದ ತೊರೆದನೋ ಮತ್ತು ಆಡಿದ ಮಾತಿನ ದಾರಿತಪ್ಪದೆ ನಿಷ್ಠೆಯಿಂದ ಸಾಯುವವರೆಗೂ ಪಾಲನೆ ಮಾಡಿದನೋ, ಇಚ್ಛಾಮರಣಿಯಾಗಿ ಇದ್ದುಕೊಂಡು ಮಲತಮ್ಮಂದಿರ

ಸುಖಕ್ಕಾಗಿ ಅಪ್ರತ್ಯಕ್ಷವಾಗಿ ಮೃತ್ಯುವನ್ನು ತನ್ನ ಬಳಿಗೆ ಸೆಳೆದನೋ, ಇಪ್ಪತ್ತೊಂದು ಸಲ ಭೂಮಿಯನ್ನು ಬಳಸಿ ಕ್ಷತ್ರಿಯರಿಂದ ಇಲ್ಲದ್ದನ್ನಾಗಿ ಮಾಡಿದ ಪರಶುರಾಮನೂ ಯಾವಾತನ ಅತುಲ ಪರಾಕ್ರಮದ ಮುಂದೆ ತನ್ನ ತಲೆಯನ್ನು ತಗ್ಗಿಸಬೇಕಾಯಿತೋ; ತುಂಬ ಶಾರೀರಕ ನೋವು ಆಗುತ್ತಿದ್ದರೂ ಕತ್ತನ್ನು ಜೋಲಾಡಿಸುತ್ತ ಶರಪಂಜರದಲ್ಲಿ ಹೊರಳುತ್ತ ಯುಧಿಷ್ಠಿರ ನೆಪದಿಂದ ಇಡೀ ಜಗತ್ತಿಗೆ ಧರ್ಮಶಾಸ್ತ್ರ, ರಾಜ್ಯಶಾಸ್ತ್ರ, ರಾಜನೀತಿ, ರಾಜಧರ್ಮ, ಭಾರತೀಯ ತತ್ತ್ವಜ್ಞಾನ, ಯುದ್ಧ ನೀತಿ, ವ್ಯವಹಾರಶಾಸ್ತ್ರ ಮತ್ತು ಮೋಕ್ಷಧರ್ಮ-ಹೀಗೆ ಲೌಕಿಕ ಮತ್ತು ಪಾರಮಾರ್ಥಿಕ ಜ್ಞಾನವನ್ನು ತರ್ಕಶುದ್ಧವಾದ ರೀತಿಯಲ್ಲಿ ದೊರಕಿಸಿಕೊಟ್ಟನೋ ಅವನೇ ಸತ್ಯವನ್ನು ಬೆಂಬಲಿಸುವ ಸತ್ಯವ್ರತಿ ಪ್ರಕಾಂಡ ಪಂಡಿತ ಭೀಷ್ಮನು. ಹೀಗೆ ಭೀಷ್ಮನದು ಬಹುಗುಣ ವ್ಯಕ್ತಿತ್ವ. ಇಂಥ ವ್ಯಕ್ತಿಯು ಮಾಡಿದ ಪ್ರತಿಜ್ಞೆಯು ಆತನಿಗೆ ಶೋಭಿಸುವುದರಲ್ಲಿ ಆಶ್ಚರ್ಯವಿಲ್ಲ. ಪ್ರತಿಜ್ಞೆಯ ಉದ್ಗಾರವು ಸುಲಭವಾಗಿದ್ದರೂ ಅದರ ಪಾಲನೆ ದುಷ್ಕರವಾದುದು. ಆದರೆ ಭೀಷ್ಮನು ತನ್ನ ಆಚರಣೆಯಿಂದ ಪ್ರತಿಜ್ಞೆಯ ಪಾವಿತ್ರ್ಯವನ್ನು ಸಾಯುವವರೆಗೂ ಬಾಧಕವಿಲ್ಲದಂತೆ ಕಾಪಾಡಿದನು. ಈ ಪ್ರತಿಜ್ಞೆಯಿಂದ ಭೀಷ್ಮನಿಗೆ ಹಿಮಾಲಯದಷ್ಟು ಹಿರಿಮೆ ದೊರಕಿತು, ಆದರೆ ಭೀಷ್ಮನಿಂದ ಈ ಪ್ರತಿಜ್ಞೆಯು ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಭದ್ರವಾದ ಸ್ಥಾನವನ್ನುಗಳಿಸಿ, ಅಜರಾಮರವಾಯಿತು.

ಇವೆಲ್ಲವು ನಿಜವಾಗಿದ್ದರೂ ಮಹಾಭಾರತವನ್ನು ವಿಚಾರಮಾಡುವಾಗ ಒಂದು ವಿಚಾರವು ಸ್ಪಷ್ಟವಾಗಿ ತಿಳಿದು ಬರವುದೇನೆಂದರೆ, ದೇವವ್ರತನು ಯಾವ ಸ್ವರೂಪದಲ್ಲಿ ಮತ್ತು ಮಾತುಗಳಲ್ಲಿ ಪ್ರತಿಜ್ಞೆಯನ್ನು ಉಚ್ಚರಿಸಿದನೋ ಅದು ನಿಜವಾಗಿ ಎಷ್ಟರ ಮಟ್ಟಿಗೆ ಅಗತ್ಯವಾಗಿತ್ತು ? ಎಂಬುದು. ಬೇರೆ ಮಾತಿನಲ್ಲಿ, ಬೇರೆ ರೀತಿಯಲ್ಲಿ ದಶರಾಜನ ಮನಸ್ಸನ್ನೊಲಿಸಿ ಆತನ ವಿಶ್ವಾಸವನ್ನು ಸಂಪಾದಿಸಲು ಸರ್ವಥಾ ಅಶಕ್ಯ ವಾಗಿತ್ತೆ ? ಪಿತೃಭಕ್ತ ದೇವವ್ರತನು ತನ್ನ ತಂದೆಗೆ ಸುಖಸಂತೋಷಗಳನ್ನುಂಟು ಮಾಡಲು ಯಾವರೀತಿ ತ್ಯಾಗವನ್ನು ಮಾಡಬೇಕು ? ಯಾವ ವಿಧವಾದ ಕಠೋರ ಬಂಧನವನ್ನು ತಾಳಿಕೊಳ್ಳಬೇಕು ? ಎಂಬೀ ವಿಷಯಗಳಲ್ಲಿ ಸ್ವಾತಂತ್ರ್ಯವು ಅವನಿಗೆ ನಿಶ್ಚಯವಾಗಿತ್ತು. ಆತನ ಪ್ರತಿಜ್ಞೆಯು ಜುಗುಪ್ಸೆಯಿಂದಾಗಲಿ ಅಥವಾ ವೈರಾಗ್ಯ ದಿಂದಾಗಲಿ ಉಚ್ಚರಿಸಿದ್ದಲ್ಲ. ಆತನು ಸ್ವೇಚ್ಛೆಯಿಂದ ಸ್ವಯಂ ಸ್ಫೂರ್ತಿಯಿಂದ ಪ್ರತಿಜ್ಞೆಯನ್ನು ಉಚ್ಚರಿಸಿದ್ದಾನೆ. ತನ್ನದೇ ಆದ ವಿರಕ್ತಿಗಿಂತ ತಂದೆಯ ವಿಷಯಾ ಸಕ್ತಿಗಾಗಿ ಈ ಪ್ರತಿಜ್ಞೆಯು ಹುಟ್ಟಿ ಬಂದಿದೆ.

ಇಷ್ಟೇ ಅಲ್ಲ, ಆತನು ನಿಷ್ಠೆಯಿಂದ ಉಚ್ಚರಿಸಿದ ಮಾತುಗಳನ್ನು ಪಾಲನೆ ಮಾಡಿದ್ದಾನೆ. ಅಸಾಧ್ಯವನ್ನು ಸಾಧ್ಯವನ್ನಾಗಿ ಮಾಡಲು ಆತನ ಪ್ರಯತ್ನ ಮತ್ತು ನಿಷ್ಠೆ ಇವನ್ನು ನಿಃಸಂಶಯವಾಗಿ ಮೆಚ್ಚಬೇಕಾದುದೆ. ಆದರೆ ಭೀಷ್ಮನು ಬರೀ

ಒರಟು ಸೇನಾನಿಯಲ್ಲ. ಆತನು ಜ್ಞಾನಿಯೂ ವಿಚಾರವಂತನೂ ಆಗಿದ್ದಾನೆ ಸಮಾಜ ಮತ್ತು ಧರ್ಮ ಇವುಗಳನ್ನು ಅಭ್ಯಾಸ ಮಾಡಿದ್ದಾನೆ. ಆತನ ನಿರೀಕ್ಷಣೆಯು ಸೂಕ್ಷ್ಮವಾಗಿದೆ. ಆತನು ಮರ್ಮಜ್ಞನಾಗಿದ್ದಾನೆ. ಸಮಾಜದ ಹಿತಾಹಿತವನ್ನು ತಿಳಿದು ಅದರ ಸ್ಥೈರ್ಯ ಮತ್ತು ಸ್ವಾಸ್ಥ್ಯಗಳ ಬಗ್ಗೆ ಎಚ್ಚರಿಕೆಯನ್ನು ಹೊತ್ತಿರುವ ಕಾರಣ ಆತನ ಪ್ರತಿಜ್ಞೆಯನ್ನು ಸೂಕ್ಷ್ಮವಾಗಿ ವಿಚಾರ ಮಾಡುವುದು ಆವಶ್ಯಕವಾಗಿದೆ. ಪ್ರತಿಜ್ಞೆಯನ್ನು ಉಚ್ಚರಿಸಿದ ಕಾಲದಲ್ಲಿ ಆತನು ತರುಣನಾಗಿದ್ದ. ಪರಿಪಕ್ವದಿಂದ ಕೂಡಿದ ಅನುಭವಿಯಾಗಿರಲಿಲ್ಲ. ಆದ್ದರಿಂದ ಭಾವನೆಯ ಭರದಲ್ಲಿ ಹಠಾತ್ತನೆ ಘೋರ ಪ್ರತಿಜ್ಞೆ ಮಾಡಿದ; ಅದರ ಘೋರತೆಯು ಆತನ ಗಮನಕ್ಕೆ ಬಂದಿದ್ದಾಗಿರಲಿಲ್ಲ ಎಂದು ಹೇಳಲಾದೀತೆ ? ಆತನು ಆತುರಗಾರ, ಹಟವಾದಿ ಮತ್ತು ತನ್ನದೇ ಸರಿಯೆಂದು ಹೇಳುವವನೆಂದು ಶಂತನುವಿನ ('ತ್ವಂ ಶೂರಃ ಸದಾಮರ್ಷೀ'' ನೀನು ಶೂರನು, ಯಾವಾಗಲೂ ಸಹನೆಯಿಲ್ಲದವನು) ಮಾತಿನಿಂದ ತಿಳಿಯುವ ಸಂಭವವಿದೆ. ಆದರೆ ಹೆಚ್ಚು ವಿಚಾರ ಮಾಡಿದರೆ ಇದನ್ನು ಮಾನ್ಯಮಾಡಲು ಆಗುವುದಿಲ್ಲ. ಏಕೆಂದರೆ, ಪ್ರತಿಜ್ಞೆಯನ್ನು ಉಚ್ಚರಿಸುವಾಗ ಬರೀ ಐಹಿಕವಲ್ಲ, ಪಾರ ಲೌಕಿಕ ಗತಿಯನ್ನೂ ವಿಚಾರ ಮಾಡಿದ್ದನೆಂದು ತಿಳಿದು ಬರುತ್ತದೆ. ಆತನು ದಾಶರಾಜನಿಗೆ ಹೇಳುತ್ತಾನೆ : ''ಅಪುತ್ರಸ್ಯಾಪಿ ಮೇ ಲೋಕಾ ಭವಿಷ್ಯಂತ್ಯಕ್ಷಯಾ ದಿವಿ''—ನನಗೆ ಮಕ್ಕಳು ಇಲ್ಲದಿದ್ದರೂ ಸ್ವರ್ಗದಲ್ಲಿ ಶಾಶ್ವತವಾದ ಲೋಕಗಳು ದೊರಕುವುವು. ಇದರಿಂದ ಪ್ರತಿಜ್ಞೆಯ ಪರಿಣಾಮಗಳ ವಿಚಾರವನ್ನು ಮಾಡಲಿಲ್ಲ ವೆಂದು ಹೇಳಲಾಗದು. ಮಹಾಭಾರತಕಾರನ ಮಾತಿನಲ್ಲೇ ಈ ಪ್ರತಿಜ್ಞೆಯ ಸ್ವರೂಪ ಮತ್ತು ಸಂದರ್ಭಗಳನ್ನು ತಿಳಿಯುವುದು ಅಗತ್ಯವಾಗಿದೆ.

ಸತ್ಯವತಿಯ ಶರೀರ ಸೌಂದರ್ಯವನ್ನು ನೋಡಿ ಶಂತನುವಿನ ಕಾಮ ವಾಸನೆಯು ಕುದಿದು ಉಕ್ಕಿ ಬಂದಿತು. ಆತನು ಆಕೆಯ ತಂದೆಯಾದ ಧೀವರರಾಜನ ಬಳಿ ಆಕೆಯ ಬಗ್ಗೆ ತನ್ನ ಬೇಡಿಕೆಯನ್ನು ಮುಂಡಿಸಿದನು. ದಾಶರಾಜನು ಒಂದು ನಿಯಮವನ್ನು ಹಾಕಿ ತನ್ನ ಒಪ್ಪಿಗೆಯನ್ನಿತ್ತನು. ಸತ್ಯವತಿಯ ಹೊಟ್ಟೆಯಲ್ಲಿ ಹುಟ್ಟುವ ಮಗನೇ ಮುಂದೆ ರಾಜನಾಗುವುದಾದರೆ ಮಾತ್ರ ಶಂತನುವಿನೊಡನೆ ಆಕೆಯ ಮದುವೆಯಾಗುವ ಅನುಕೂಲವಿತ್ತು.

ಶಂತನುವಿಗೆ ಸತ್ಯವತಿಯ ಸಹವಾಸವು ತೀರ ಬೇಕಾಗಿದ್ದರೂ ಭೀಷ್ಮನಿಗೆ ರಾಜ್ಯದ ಮೇಲಿರುವ ಅಧಿಕಾರವನ್ನು ತಳ್ಳಿ ಹಾಕಲು ತುಂಬ ಕಷ್ಟದಾಯಕವಾಗಿತ್ತು. ಅದು ಆತನ ಶರೀರದ ಮೇಲೆ ಮಾಡಿದ ಪರಿಣಾಮ ಸ್ಪಷ್ಟವಾಗಿ ಕಾಣುತ್ತಿತ್ತು. ದೇವವ್ರತನ ಗಮನಕ್ಕೂ ಬಂದಿತ್ತು. ಆದರೆ ಅದರ ಕಾರಣವನ್ನು ಮಾತ್ರ ತಿಳಿದಿರಲಿಲ್ಲ. ಅಮಾತ್ಯರಿಂದ ಕಾರಣ ತಿಳಿದ ಕೂಡಲೇ ದಕ್ಷರೂ ಮತ್ತು ಪ್ರತಿಷ್ಠಿತರೂ ಆದ ಕ್ಷತ್ರಿಯ ವೀರರೊಡನೆ ಆತನು ದಾಶರಾಜನ ಬಳಿಗೆ ಹೋಗಿ ತಂದೆಯ ಸಲುವಾಗಿ

ಸತ್ಯವತಿಯನ್ನು ಕೊಡುವಂತೆ ಬೇಡಿದನು ದಾಶರಾಜನು ಆತನ ಬೇಡಿಕೆಯನ್ನು ಮನ್ನಿಸಿದನು; ಆದರೆ ಸ್ವಲ್ಪ ಹಿಡಿತ ಮಾಡಿಯೆ ದೇವವ್ರತನ ಪರಾಕ್ರಮವನ್ನು ಹೊಗಳುತ್ತಾ ಹೇಳಿದ. "ನಿನ್ನ ತಂದೆಯಂಥ ಸುಯೋಗ್ಯನು ಮತ್ತು ಅನುರೂಪನೂ ಆದ ವರನು ನನ್ನ ಮಗಳಿಗೆ ಸಿಗಬೇಕೆಂಬುದೇ ನನ್ನ ಇಚ್ಛೆಯಾಗಿದೆ. ಆದರೆ ಮುಂದಾಗುವ ನನ್ನ ಮೊಮ್ಮಗನು ನಿನ್ನ ಮಲತಮ್ಮನಾಗುತ್ತಾನೆ........ನಿಮ್ಮಿಬ್ಬರಲ್ಲಿ ಆಗುವ ಮಲಸಹೋದರ ಸಂಬಂಧದಿಂದ ವೈಮನಸ್ಯವು ಹುಟ್ಟಿಕೊಳ್ಳುವ ಸಾಧ್ಯತೆಯನ್ನು ಕಡೆಗಣಿಸಲು ಸಾಧ್ಯವಿಲ್ಲ. ನಾನು ನನ್ನ ಮಗಳ ಹಿತವನ್ನು ಕಾಯಲೇ ಬೇಕಾಗಿದೆ." ದಾಶರಾಜನ ಮಾತಿನ ಒಳ ತಿರುಳನ್ನು ತಿಳಿದು ದೇವವ್ರತನು ಆತನಿಗೆ ಆಶ್ವಾಸನಾಪೂರ್ವಕವಾಗಿ ಹೇಳುತ್ತಾನೆ :

> ಇದಂ ಮೇ ವ್ರತಮಾದತ್ಸ್ವ ಸತ್ಯಂ ಸತ್ಯವತಾಂ ವರ ।
> ನೈವ ಜಾತೋ ನ ವಾ ಜಾತ ಈದೃಶಂ ವಕ್ತು ಮುತ್ಸಹೇತ್ ॥
> ಏವಮೇತತ್ ಕರಿಷ್ಯಾಮಿ ಯಥಾತ್ವಮನು ಭಾಷಸೇ ।
> ಯೋಽಸ್ಯಾಂ ಜಾಯಂತೇ ಪುತ್ರಃ ಸ ನೋ ರಾಜಾ ಭವಿಷ್ಯತಿ ॥

["ಎಲೈ ಸತ್ಯವನ್ನು ಪಾಲಿಸುವವರಲ್ಲಿ ಶ್ರೇಷ್ಠನೆ! ಈ ನನ್ನ ಸತ್ಯವಾದ ವ್ರತವನ್ನು ಸ್ವೀಕರಿಸು. ಈ ರೀತಿ ಹೇಳಲು ಸಾಹಸವನ್ನು ಮಾಡುವವನು ಹಿಂದೆ ಹುಟ್ಟಲಿಲ್ಲ, ಮುಂದೆ ಹುಟ್ಟಲಾರ. ನೀನು ಹೇಳಿದಂತೆಯೇ ಮಾಡುತ್ತೇನೆ. ಸತ್ಯವತಿಯ ಹೊಟ್ಟೆಯಲ್ಲಿ ಯಾವ ಮಗನು ಹುಟ್ಟುತ್ತಾನೋ ಅವನೇ ನಮ್ಮ ರಾಜನಾಗುವನು." (ಆದಿ. ಪ. 100/86-87)]

ದೇವವ್ರತನ ಮಾತಿನಿಂದ ದಾಶರಾಜನು ತುಂಬ ಸಂತೋಷಗೊಂಡನು. ತನ್ನಲ್ಲಿ ಉಂಟಾದ ವಿಶ್ವಾಸವನ್ನು ಈ ರೀತಿ ತಿಳಿಯಪಡಿಸುತ್ತಾನೆ :

> ಯತ್ತ್ವಯಾ ಸತ್ಯವತ್ಯರ್ಥೇ ಸತ್ಯಧರ್ಮ ಪರಾಯಣ ।
> ರಾಜಮಧ್ಯೆ ಪ್ರತಿಜ್ಞಾತಮನುರೂಪಂತವೈವತತ್ ॥
> ನಾನ್ಯಥಾ ತನ್ಮಹಾಬಾಹೋ ಸಂಶಯೋಽತ್ರ ನ ಕಶ್ಚನ ।

["ಎಲೈ ಸತ್ಯ ಮತ್ತು ಧರ್ಮಗಳನ್ನು ಪಾಲಿಸುವವನೆ! ನೀನು ರಾಜರ ನಡುವೆ ಏನು ಪ್ರತಿಜ್ಞೆಯನ್ನು ಮಾಡಿದೆಯೋ ಅದು ನಿನ್ನ ಯೋಗ್ಯತೆಗೆ ತಕ್ಕದ್ದಾಗಿದೆ. ಅದು (ಪ್ರತಿಜ್ಞೆ) ಬದಲಾಗಲು ಸಾಧ್ಯವಿಲ್ಲ. ಎಲೈ ವೀರನೆ! ಈ ಬಗ್ಗೆ ಯಾವ ಸಂಶಯವೂ ಇಲ್ಲ (ಆದಿ. ಪ. 100/91-92)]

ಕೊಟ್ಟ ಮಾತನ್ನು ದೇವವ್ರತನು ಉಳಿಸಿಕೊಳ್ಳುತ್ತಾನೆಂಬ ಪೂರ್ಣವಾದ ನಂಬಿಕೆ ದಾಶರಾಜನಿಗಿತ್ತು. ಆದರೂ ಸತ್ಯವತಿಯ ಮಕ್ಕಳು ರಾಜ್ಯವನ್ನು ಯಾವ ತೊಂದರೆಯೂ ಇಲ್ಲದೆ ಭೋಗಿಸಬೇಕೆಂಬುದರಿಂದ, ದೇವವ್ರತನಿಗೆ ತನ್ನ ಮತ್ತೊಂದು

ಶಂಕೆಯನ್ನು ಸ್ಪಷ್ಟವಾಗಿ ತಿಳಿಸಿದನು. ದೇವವ್ರತನು ರಾಜ್ಯದ ಮೇಲಿನ ತನ್ನ ಹಕ್ಕನ್ನು ಬಿಟ್ಟುಕೊಟ್ಟರೂ ಆತನ ಮಕ್ಕಳು ಬಿಟ್ಟು ಕೊಡುತ್ತಾರೆಂಬುದು ಏನು ಖಾತರಿ ? ತನ್ನ ಶಂಕೆಯನ್ನು ತಿಳಿಸಿದ ಕೂಡಲೆ, ದೇವವ್ರತನು ಒಂದು ಕ್ಷಣವೂ ವಿಚಾರ ಮಾಡದೆ, ಲಂಬಿಸದೆ, ಥಟ್ಟನೆ ತನ್ನ ಎರಡನೆಯ ಪ್ರತಿಜ್ಞೆಯನ್ನು ಘೋಷಿಸಿದನು.

> ರಾಜ್ಯಂ ತಾವತ್ಪೂರ್ವಮೇವ ಮಯಾತ್ಯಕ್ತಂ ನರಾಧಿಪಾಃ ।
> ಅಪತ್ಯ ಹೇತೋರಪಿ ಚ ಕರಿಷ್ಯೇಽದ್ಯ ವಿನಿಶ್ಚಯಂ ॥
> ಅದ್ಯ ಪ್ರಭೃತಿ ಮೇ ದಾಶ ಬ್ರಹ್ಮಚರ್ಯಂ ಭವಿಷ್ಯತಿ ।
>
> (ಆದಿ. ಪ. 100/95-96)

["ಎಲೈ ರಾಜರೆ ! ಮೊದಲೇ ನನ್ನಿಂದ ರಾಜ್ಯವು ಬಿಡಲ್ಪಟ್ಟಿದೆ. ಮಕ್ಕಳ ಕಾರಣಕ್ಕಾಗಿ ಇಂದು ನಿಶ್ಚಯವನ್ನು ಮಾಡುವೆನು. ಇಂದಿನಿಂದ ಮೊದಲು ಎಲೈ ದಾಶರಾಜನೆ ! ನಾನು ಬ್ರಹ್ಮಚಾರಿಯಾಗಿ ಉಳಿಯುವೆನು.]

ಈ ಉದ್ಗಾರದಿಂದ ದಾಶರಾಜನ ಎಲ್ಲ ಸಂಶಯುಗಳು ಕಳೆದು ಹೋಗಿ ಸತ್ಯವತಿ ಮತ್ತು ಶಂತನು ಇವರ ಮದುವೆಯನ್ನು ನೆರವೇರಿಸಿದನು. ಈ ಪ್ರತಿಜ್ಞೆಯಿಂದಲೇ ದೇವವ್ರತನು ಭೀಷ್ಮನಾದನು.

ಭೀಷ್ಮನ ಪ್ರತಿಜ್ಞೆಯಲ್ಲಿ ತೇಜಸ್ಸು ಮತ್ತು ಓಜಸ್ಸು ಇವು ಹಾಸುಹೊಕ್ಕುಗಳಂತೆ ತುಂಬಿವೆ, ಉದ್ರೇಕವಿದೆ, ನಿರ್ಧಾರವಿದೆ, ಬಲವಾದ ಆತ್ಮವಿಶ್ವಾಸವಿದೆ. ಇವೆಲ್ಲವನ್ನು ಮಾನ್ಯ ಮಾಡಿದರೂ ಇಷ್ಟು ತಟಕ್ಕನೆ ಪ್ರತಿಜ್ಞೆಯನ್ನು ಉಚ್ಚರಿಸಬೇಕಿತ್ತೆ ? ವಿಚಾರ ವಿನಿಮಯವನ್ನು ಮಾಡಲು ದಾಶರಾಜನು ಕಾಲಾವಕಾಶವನ್ನು ಕೊಡುತ್ತಿರಲಿಲ್ಲವೆ ? ದೇವವ್ರತನು ದಕ್ಷರೂ ಪ್ರತಿಷ್ಠಿತರೂ ಆದ ಜನರನ್ನು ತನ್ನೊಡನೆ ಕರೆದುಕೊಂಡು ದಾಶರಾಜನ ಬಳಿ ತನ್ನ ಬೇಡಿಕೆಯನ್ನು ತಿಳಿಸಲು ಹೋದಾಗ, ಅವರ ಸಲಹೆಯನ್ನು ಪಡೆಯುವ ಆವಶ್ಯಕತೆಯು ಏಕೆ ಹೊಳೆಯಲಿಲ್ಲ ? ದೇವವ್ರತನಿಗೆ ರಾಜ್ಯವು ಲಭಿಸಬಾರದೆಂಬ ಇಚ್ಛೆಯು ದಾಶರಾಜನಲ್ಲಿ ನಿಶ್ಚಯವಾಗಿತ್ತು. ಆದರೆ ಸಾಯುವವರೆಗೂ ಸ್ತ್ರೀ ಸೌಖ್ಯಕ್ಕೆ ವಂಚಿತನಾಗಿರಬೇಕೆಂದು ದಾಶರಾಜನಿಗೆ ಅನಿಸಿತ್ತೇನು ? ಇಂಥ ಪುರಾವೆ ಮಹಾಭಾರತದಲ್ಲಿ ಕಂಡುಬರುವುದಿಲ್ಲ. ತನ್ನ ಮೊಮ್ಮಗನ ರಾಜ್ಯದ ಮೇಲಿನ ಅಧಿಕಾರವು ವಂಶಪಾರಂಪರ್ಯವಾಗಿ ನಡೆಯಬೇಕು, ನಿರ್ವಿಘ್ನವಾಗಿ ನಡೆಯಬೇಕು, ಇಷ್ಟೇ ಅವನ ಇಚ್ಛೆಯಾಗಿತ್ತು. ಅದು ತಪ್ಪೆಂದು ಹೇಳಲಾಗುವುದಿಲ್ಲ. ಅಷ್ಟರಿಂದಲೇ ಅವನಿಗೆ ಸಮಾಧಾನವಾಗಿತ್ತು. ದಾಶರಾಜನಿಗೆ ಇಷ್ಟು ಖಾತರಿಪಡಿಸಲು "ನನ್ನ ಮಕ್ಕಳು ನನ್ನ ಮೊಮ್ಮಕ್ಕಳು ಸಹ ರಾಜ್ಯದ ಮೇಲೆ ತಮ್ಮ ಅಧಿಕಾರವನ್ನು ಕೇಳುವುದಿಲ್ಲ, ಈ ಬಗ್ಗೆ ನಾನು ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತೇನೆ" ಎಂದು ಇಷ್ಟು ಹೇಳಿದ್ದರೂ ಸಾಕಾಗುತ್ತಿರಲಿಲ್ಲವೆ ?

ದೇವವ್ರತನ ಆಶ್ವಾಸನೆಯ ಮೇಲೆ ದಾಶರಾಜನು ನಿಶ್ಚಯವಾಗಿ ನಂಬಿಕೆಯನ್ನು ಇಡುತ್ತಿದ್ದನೆಂಬುದಕ್ಕೆ ಅವನ ಮಾತೇ ಪ್ರಮಾಣವಾಗಿದೆ. "ನಾನ್ಯಥಾ ತನ್ಮಹಾಬಾಹೋ ಸಂಶಯೋऽತ್ರ ನಕಶ್ಚನ" (ಪ್ರತಿಜ್ಞೆಯು ಬದಲಾಗಲು ಸಾಧ್ಯವಿಲ್ಲ. ಎಲೈ ವೀರನೆ! ಈ ಬಗ್ಗೆ ಯಾವ ಸಂಶಯವೂ ಇಲ್ಲ). ಹೀಗಿರುವಾಗ ದೇವವ್ರತನು "ಇಂದಿನಿಂದ ಸಾಯುವವರೆಗೂ ನಾನು ಬ್ರಹ್ಮಚಾರಿಯಾಗಿ ಇದ್ದುಕೊಂಡು ನನ್ನ ಮಾತನ್ನು ಕಾಪಾಡಿಕೊಂಡು ಬರುವೆನು" ಎಂದೇ ರುಜುವಾತು ಕೊಡಬೇಕಾದ ಆವಶ್ಯಕತೆ ಏನಿತ್ತು? ಇಷ್ಟೇ ಹೇಳಿ ಆತನು ನಿಲ್ಲಲಿಲ್ಲ ಮತ್ತೂ ಒತ್ತನ್ನು ಜೋಡಿಸಿದ್ದಾನೆ. ಗೋರಖ್‌ಪುರ್ ಗೀತಾ ಪ್ರೆಸ್ಸಿನ ಪ್ರತಿಯ ಮಹಾಭಾರತದಲ್ಲಿ (ಆದಿ. ಪ. 100/96–97) ಈ ಎರಡು ಶ್ಲೋಕಗಳ ನಡುವೆ ಇರುವ ಎರಡು ಶ್ಲೋಕಗಳನ್ನು ನೋಡಿದರೆ (ಅವಕ್ಕೆ ಸಂಖ್ಯೆಗಳಿಲ್ಲ) ಅವು ಆ ಮೇಲೆ ಸೇರಿರಬೇಕೆಂದು ತೋರುತ್ತದೆ. ಆದರೂ ಅವು ಮಹತ್ತ್ವಪೂರ್ಣವಾಗಿವೆ.

> ಯಾವತ್ಪ್ರಾಣಾ ಧ್ರಿಯಂತೇ ವೈ ಮಮ ದೇಹಂ ಸಮಾಶ್ರಿತಾಃ ।
> ತಾವನ್ನ ಜನಯಿಷ್ಯಾಮಿ ಪಿತ್ರೇ ಕನ್ಯಾಂ ಪ್ರಯಚ್ಛ ಮೇ ॥
> ಪರಿತ್ಯಜಾಮ್ಯಹಂ ರಾಜ್ಯಂ ಮೈಥುನಂ ಚಾಪಿ ಸರ್ವಶಃ ।
> ಉರ್ಧ್ವರೇತಾ-ಭವಿಷ್ಯಾಮಿ ದಾಶಸತ್ಯಂ ಬ್ರವೀಮಿ ತೇ ॥

[ಎಲ್ಲಿಯವರೆಗೆ ನನ್ನ ದೇಹವನ್ನು ಆಶ್ರಯಿಸಿಕೊಂಡಿರುವ ಪ್ರಾಣಗಳು ಉಳಿಯುತ್ತವೆಯೋ ಅಲ್ಲಿಯವರೆಗೂ ಮಕ್ಕಳನ್ನು ಹುಟ್ಟಿಸುವುದಿಲ್ಲ. ನನ್ನ ತಂದೆಗೆ ನಿನ್ನ ಮಗಳನ್ನು ಕೊಡು. ನಾನು ರಾಜ್ಯವನ್ನು ಬಿಡುವುದಲ್ಲದೆ, ಮೈಥುನವನ್ನು ಸರ್ವವಿಧವಾಗಿ ಬಿಡುತ್ತೇನೆ. ಊರ್ಧ್ವರೇತಸ್ಸುಳ್ಳವನಾಗುವೆನು. (ಊರ್ಧ್ವರೇತಸ್ = ಬ್ರಹ್ಮಚರ್ಯೆ). ಎಲೈ ದಾಶನೆ! ನಿನಗೆ ಸತ್ಯವನ್ನು ಹೇಳುತ್ತಿದ್ದೇನೆ.] ಭೀಷ್ಮನು ಯಾವ ಸ್ಪಷ್ಟೀಕರಣವನ್ನು ನೀಡಿದ್ದಾನೋ ಆದನ್ನು ದಾಶರಾಜನು ಬೇಡಿದ್ದನೆ? ಅಥವಾ ಅಪೇಕ್ಷಿಸಿದ್ದನೆ? ರಾಜ್ಯದ ಮೇಲೆ ಅಧಿಕಾರವಿಲ್ಲವೆಂದು ಹೇಳುವ ಮಕ್ಕಳು ದೇವವ್ರತನಿಗೆ ಹುಟ್ಟಿದ್ದರೆ, ಸ್ತ್ರೀ ಸುಖವು ದೇವವ್ರತನಿಗೆ ಲಭಿಸಿದ್ದರೆ, ದಾಶರಾಜನಿಗೆ ಅವನ್ನು ಗಣನೆಗೆ ತೆಗೆದುಕೊಳ್ಳಬೇಕಾದ ಆವಶ್ಯಕತೆಯೇ ಇರುತ್ತಿರಲಿಲ್ಲ. ಬೇಡವಾದಷ್ಟು ಮಾತುಗಳಿಂದ ಭೀಷ್ಮನು ದಾಶರಾಜನಿಗೆ ಖಾತರಿಪಡಿಸುವ ಪ್ರಯತ್ನವನ್ನು ಮಾಡಿದ್ದಾನೆ. ದಾಶರಾಜನ ದೃಷ್ಟಿಯಿಂದ ಆವಶ್ಯಕವಿಲ್ಲದಿದ್ದರೂ ದೇವವ್ರತನಿಗೆ ಆವಶ್ಯಕವೆಂದು ತೋರುತ್ತಿತ್ತು. ಅದಕ್ಕೆ ಎರಡು ಕಾರಣಗಳು ಕಂಡುಬರುತ್ತವೆ: ಸತ್ಯವತಿಯ ವಿವಾಹ ಬಂಧನಕ್ಕೆ ಸ್ವಲ್ಪವೂ ತೊಂದರೆಯಾಗಬಾರದು; ತನ್ನ ಆತ್ಮವಿಶ್ವಾಸವು ಪ್ರಕಟವಾಗಬೇಕು. ಎರಡನೆಯದರಲ್ಲಿ ಅಹಂಕಾರದ ಬಣ್ಣವೇ ಇರಲಿಲ್ಲವೆಂದು ನಿಶ್ಚಯವಾಗಿ ಹೇಳಲು ಬರುವುದಿಲ್ಲ. "ನೈವಜಾತೋऽನವಾಜಾತ ಈ ದೃಶಂ ವಕ್ತುಮುತ್ಸಹೇತ್" ಎಂದು ಹೇಳುವುದರ ಪ್ರಯೋಜನವೇನು? ಈ ಪ್ರತಿಜ್ಞೆಯ

ಘೋಷಣೆಯಿಂದ ತನ್ನ ಪ್ರತಿಮೆಯನ್ನು ಎತ್ತರಿಸುವ ಉದ್ದೇಶವು ದೇವವ್ರತನಿಗೆ ಇಲ್ಲದಿರಬಹುದು. ಆದರೆ ಆತನ ಪ್ರತಿಮೆಯನ್ನು ಎತ್ತರಿಸುವಲ್ಲಿ ಈ ಪ್ರತಿಜ್ಞೆಯು ಸಹಾಯಕವಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಆತನ ವ್ಯಕ್ತಿತ್ವದ ಸುತ್ತಲೂ ವಿಲೋಭನೀಯವಾದ ವಲಯವು ನಿರ್ಮಾಣವಾಗಿದೆ. ಈ ಉದ್ಗಾರದಲ್ಲಿ ಬಲವಾದ ಆತ್ಮವಿಶ್ವಾಸವಿದೆ, ಆದರೆ ಆತ್ಮವಿಶ್ವಾಸ ಮತ್ತು ಅಹಂಕಾರ ಇವುಗಳ ನಡುವಿನ ಸೀಮಾರೇಖೆಯು ತೀರ ಅಳಿದ ಹಾಗಿರುವುದರಿಂದ ಕೆಲವು ಸಲ ಕಾರಣ ಶುದ್ಧ ವಾಗಿದ್ದರೂ ಅಹಂಕಾರವು ಕಾಣದ ಹಾಗೆ ಇಣುಕುತ್ತದೆ. ಯಥೋಚಿತವಾಗಿ ಪ್ರತಿಜ್ಞೆಯ ಪಾಲನೆಯನ್ನು ಮಾಡಿ ಭೀಷ್ಮನು ತನ್ನ ಅದ್ವಿತೀಯತ್ವವನ್ನು ನಿಶ್ಚಯವಾಗಿ ಸಾಧಿಸಿದ್ದಾನೆ. 'ವ್ಯಕ್ತಿ' ಎಂಬ ದೃಷ್ಟಿಯಿಂದ ಈ ಪ್ರತಿಜ್ಞೆಯು ಭೀಷ್ಮನಿಗೆ ಬಹುವಾಗಿ ಪ್ರತ್ಯೇಕ ಮತ್ತು ಆದರಣೀಯ ಸ್ಥಾನವನ್ನು ದೊರಕಿಸಿಕೊಟ್ಟಿದೆ.

ದಾಶ ಮತ್ತು ಶಂತನು ಇವರ ಆಸೆ ಪೂರ್ತಿಗಾಗಿ ಈ ಸ್ವರೂಪದಲ್ಲಿ ಪ್ರತಿಜ್ಞೆಯನ್ನು ಘೋಷಿಸಿ, ಅದರ ಪಾಲನೆ ಮಾಡುವ ಆವಶ್ಯಕತೆಯು ಇದ್ದೇ ಇತ್ತೆ ? ಎಂಬ ಪ್ರಶ್ನೆಯು ಬಾಕಿಯಾಗಿ ಉಳಿಯುತ್ತದೆ. ಮಹಾಭಾರತದ ಕಾಲದಲ್ಲಿ ಮತ್ತು ಅದರ ಹಿಂದಿನ ಕಾಲದಲ್ಲಿ ರಾಜವಂಶಜರಿಗೂ ದಾಸಿಯರಿಗೂ ಸಂಬಂಧವಿರುತ್ತಿತ್ತು. ಅದಕ್ಕೆ ಧರ್ಮ ಮತ್ತು ಸಮಾಜದ ಅಡಚಣೆಗಳು ಇರಲಿಲ್ಲ. ರಾಜ ಮಾನ್ಯತೆಯಂತೂ ಇದ್ದೇ ಇತ್ತು. ಧೃತರಾಷ್ಟ್ರನ ನೂರು ಮಕ್ಕಳು ಎಲ್ಲವೂ ಗಾಂಧಾರಿಯಿಂದಲೆ ಆದುವೆ ? ಹದಿನಾಲ್ಕು ಮಕ್ಕಳು ಮಾತ್ರ ಆಕೆಯದು, ಉಳಿದ ಎಂಬತ್ತಾರು ಮಕ್ಕಳು ದಾಸೀ ಪುತ್ರರಾಗಿರಬೇಕೆಂದು ಶಂಕಿಸಲಾಗಿದೆ. ದಾಸಿಯರೊಡನೆ ಉಪಭೋಗವು ಅಧರ್ಮ, ಅನೈತಿಕ ಎಂದು ಪರಿಗಣಿಸಿರಲಿಲ್ಲ. ಆದರೆ ಇಂಥ ಸಂಬಂಧದಿಂದ ಹುಟ್ಟಿ ಬಂದ ಸಂತತಿಗೆ ರಾಜ್ಯಾಧಿಕಾರ ಮತ್ತು ಪ್ರತಿಷ್ಠೆಗಳು ಸಿಗುತ್ತಿರಲಿಲ್ಲ. ಯಯಾತಿಯೊಡನೆ ದೇವಯಾನಿಯ ಮದುವೆಯನ್ನು ಜರುಗಿಸಿ, ಆಕೆಯನ್ನು ಕಳುಹಿಸಿಕೊಡುವಾಗ ಶುಕ್ರಾಚಾರ್ಯನು ಆಕೆಯೊಡನೆ ಆಕೆಯ ದಾಸಿಯಾದ ಶರ್ಮಿಷ್ಠೆಯನ್ನೂ ಕಳುಹಿಸಿಕೊಟ್ಟನು. ಆದರೆ ಶಯನೀಯ ಕೆಲಸಕ್ಕೆ (ಹಾಸಿಗೆ ಹಾಸುವುದು) ದಾಸಿಯನ್ನು ಕರೆಯಬೇಡ ಎಂದು ಸ್ಪಷ್ಟವಾಗಿ ಸೂಚನೆಯನ್ನು ಕೊಡಲು ಆತನು ಮರೆಯಲಿಲ್ಲ. ಇದಕ್ಕೆ ಕಾರಣ ದಾಸಿಯರೊಡನೆ ಸಂಬಂಧ ಮಾಡಲು ಅನುಮತಿ ಇತ್ತು. ಭೀಷ್ಮನು ಈ ರೀತಿಯ ಸುಖ ಮತ್ತು ಮಕ್ಕಳನ್ನು ಪಡೆಯಲು ದಾಶರಾಜನ ಯಾವ ಆಕ್ಷೇಪಣೆಯೂ ಇರುತ್ತಿರಲಿಲ್ಲ. ಕಾರಣ ದಾಸೀಪುತ್ರರಿಗೆ ರಾಜ್ಯಾಧಿಕಾರವಿರಲಿಲ್ಲವಾಗಿ ಸತ್ಯವತಿಯ ವಂಶಜರು ರಾಜ್ಯವನ್ನಾಳಲು ಅಡ್ಡಿಯೇ ಇರುತ್ತಿರಲಿಲ್ಲ. ವಿದುರನಲ್ಲಿ ರಾಜ್ಯವಾಳುವುದಕ್ಕೆ ಬೇಕಾದ ಎಲ್ಲಗುಣಗಳಿದ್ದರೂ ಆತನು ರಾಜನಾಗಲಿಲ್ಲ. ಆಗಲೂ ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣವೆಂದರೆ ಆತನು ವ್ಯಾಸಪುತ್ರನಾದರೂ ದಾಸೀಪುತ್ರನಾಗಿದ್ದನು. ಆದರೆ ನಿಯೋಗದಿಂದ ಉಂಟಾದ ಸಂತತಿಯನ್ನು ಔರಸ ಸಂತತಿಗೆ ಸಮಾನವೆಂದು ಭಾವಿಸಲಾಗಿತ್ತಾದ್ದರಿಂದ

ಪಾಂಡು ಮತ್ತು ಧೃತರಾಷ್ಟ್ರ ಇವರು ರಾಜ್ಯಾಧಿಕಾರಿಗಳಾದರು. ಆದರೆ ಭೀಷ್ಮನು ಈ ದಾರಿಯನ್ನು ತುಳಿಯಲಿಲ್ಲ. ಆತನು ಇಂಥ ಸಂಬಂಧವನ್ನು ಇಟ್ಟುಕೊಂಡಿದ್ದರೆ ಇಂದು ಆತನ ಪ್ರತಿಮೆ ಏನುಂಟೋ ಅದು ಹಾಗೆ ಉಜ್ವಲವಾಗಿ ಉಳಿಯುತ್ತಿರಲಿಲ್ಲ. ಆತನ ಇಡೀ ಹಿರಿಮೆಯು ಕುಸಿದು ಬೀಳುತ್ತಿತ್ತು. "ಹಿಂದೆ ಯಾರೂ ಮಾಡಲಿಲ್ಲ, ಮುಂದೆ ಯಾರೂ ಮಾಡಲಾರರು'' ಎಂಬ ಆತನ ಆತ್ಮವಿಶ್ವಾಸಕ್ಕೆ ಒಡಕು ಉಂಟಾಗುತ್ತಿತ್ತು.

ದೇವವ್ರತನು ಯಾವಾಗ ಈ ಪ್ರತಿಜ್ಞೆಯನ್ನು ಮಾಡಿದನೋ ದಾಶರಾಜನು ತನ್ನ ಮಗಳ ಹಿತದೃಷ್ಟಿಯಿಂದ ಯಾವ ನಿಯಮವನ್ನು ಹಾಕಿದನೋ ಆ ವೇಳೆಗೆ ಮುಂದೆ ಏನಾಗುತ್ತದೆಯೆಂಬುದರ ಬಗ್ಗೆ ಇವರಿಗೇ ಏಕೆ, ಮತ್ತೆ ಯಾರಿಗೂ ಅದರ ಕಲ್ಪನೆಯೇ ಇರಲಿಲ್ಲ. ಆದರೆ ವಿಧಿಯು ಮಾತ್ರ ಈ ಪ್ರತಿಜ್ಞೆಗೆ ಸಂಬಂಧಿಸಿದ ಭೀಷ್ಮ ಸತ್ಯವತಿಯರ ಮೇಲೆ ಸೇಡನ್ನು ಸಾಧಿಸಿತು. ಮದುವೆಯಾಗದ ಚಿತ್ರಾಂಗದ, ಮಕ್ಕಳಿಲ್ಲದ ವಿಚಿತ್ರವೀರ್ಯ ಇವರ ಸಾವಿನಿಂದ ದಾರುಣವಾದ ಹೊಸ ಸಮಸ್ಯೆಯು ಹುಟ್ಟಿಕೊಂಡಿತು. ಶಂತನುವಿನಿಂದ ಎರಡು ಗಂಡು ಮಕ್ಕಳನ್ನು ಪಡೆದೂ ಅವರ ಅಕಾಲದ ಸಾವಿನಿಂದ ಸತ್ಯವತಿಯು ಮತ್ತೆ ಮಕ್ಕಳಿಲ್ಲದವಳಾದಳು. ಅಷ್ಟೇ ಅಲ್ಲ, ಇಡೀ ಕುರುಕುಲದ ಮೇಲೆ ವಂಶಕ್ಷಯದ ದಟ್ಟವಾದ ನೆರಳು ಹರಡಿತು. ಯಾವ ಸತ್ಯವತಿಯ ಕಾರಣದಿಂದ ತೊಂದರೆಯನ್ನೆಸಗುವ ನಿಯಮವನ್ನು ಒಪ್ಪಿ ಭೀಷ್ಮನು ಸ್ತ್ರೀ ಸೌಖ್ಯಕ್ಕೆ ತಿಲಾಂಜಲಿಯನ್ನು ಕೊಡಬೇಕಾದ ಸಂದರ್ಭವು ಒದಗಿ ಬಂದಿತೋ ಆ ಸತ್ಯವತಿಯೇ ವಿಚಿತ್ರವೀರ್ಯನ ಸಾವಿನ ಅನಂತರ ಆತನ ವಿಧವೆಯರಾದ ಹೆಂಡತಿಯರ ಮೂಲಕ ನಿಯೋಗ ಪದ್ಧತಿಯಿಂದ ಸಂತತಿಯನ್ನು ನಿರ್ಮಿಸುವ ಸಲುವಾಗಿ ಭೀಷ್ಮನನ್ನು ಮೊರೆಯಿಡುವ ಹೊತ್ತು ಬಂದಿತು. ಕಾರಣ ನಿಯೋಗವನ್ನು ಕೈಗೊಳ್ಳಲು ಕುರುವಂಶದ ಅಪ್ಪಟ ರಕ್ತವನ್ನು ಹೊಂದಿದ್ದವನು ಭೀಷ್ಮನೊಬ್ಬನೇ ಪಾತ್ರನಾಗಿ ಉಳಿದಿದ್ದ. ಆತನ ನಕಾರವು ಕುರುಕುಲದ ನಾಶವೇ ಸರಿ. ನಿಯೋಗಕ್ಕಾಗಿ ಭೀಷ್ಮನನ್ನು ಮೊರೆಯಿಡಲು ಸತ್ಯವತಿಯು ಪ್ರತಿಷ್ಠೆಯ ರಂಪವನ್ನು ಮಾಡಲಿಲ್ಲ; ಮಾನಾಪಮಾನವನ್ನು ಮೌನವಾಗಿ ನುಂಗಿದಳು. ಅಹಂಕಾರವನ್ನು ಪಕ್ಕಕ್ಕೆ ಸರಿಸಿದಳು. ಆದರೆ ತನ್ನ ಪ್ರತಿಷ್ಠೆಗೆ ಸ್ವಲ್ಪವೂ ಧಕ್ಕೆ ತಗುಲದೆ ಯಾವುದನ್ನು ಮಾಡಲು ಶಕ್ಯವೋ ಅಷ್ಟನ್ನೇ ಮಾಡಲು ಭೀಷ್ಮನು ತಯಾರಾಗಿದ್ದನು. ಆದರೆ ಈತನ ಈ ಮರ್ಯಾದಿತ ಸಹಕಾರವು ವಂಶನಾಶವನ್ನು ತಡೆಯಲು ಸಾಕಾಗುತ್ತಿರಲಿಲ್ಲ. ಯಾವ ಕುಲದ ಕಲ್ಯಾಣಕ್ಕಾಗಿ ಭೀಷ್ಮನು ತನ್ನ ಇಡೀ ಆಯುಸ್ಸನ್ನು ಸವೆಸಿದನೋ ಅಂಥ ಕುರುಕುಲದ ನಾಶವಾಗುತ್ತಿರುವಾಗಲೂ ತನ್ನ ಪ್ರತಿಜ್ಞೆಗೆ ಅಂಟಿಕೊಂಡಿದ್ದನು. ಕುರುಕುಲದ ನಾಶವನ್ನು ತಡೆಯುವ ಸಾಮರ್ಥ್ಯವು ಅವನಲ್ಲಿ ಮಾತ್ರ ಇದ್ದುದರಿಂದ, ಆತನ ನಕಾರದಿಂದ ಆತನು ತನ್ನ ತೆರೆದ ಕಣ್ಣುಗಳಿಂದ ಕುಲನಾಶವಾಗುತ್ತಿರುವುದನ್ನು ನೋಡಬೇಕಾಯಿತು. ಭೀಷ್ಮನ ಮುಂದೆ ಕುಲನಾಶವೆ ಅಥವಾ ಪ್ರತಿಜ್ಞೆಯೆ ಎಂಬ

ಸಮಸ್ಯೆಯು ಹುಟ್ಟಿಕೊಂಡಾಗ ಆತನು ಪ್ರತಿಜ್ಞೆಯ ಕಡೆ ತನ್ನ ಮಾನ್ಯತೆಯನ್ನಿತ್ತಿದ್ದರಿಂದ ಕುರುಕುಲವು ಅಡಗಿಹೋಯಿತು. ಭೀಷ್ಮನ ವ್ಯಕ್ತಿಗತವಾದ ಪ್ರತಿಮೆಯು ಬೆಳಗಿತು ; ಆದರೆ ಕುರುಕುಲವು ಸಂಪೂರ್ಣವಾಗಿ ನಾಶವಾಯಿತು.

ಪ್ರತಿಜ್ಞೆಯನ್ನು ಪಾಲನೆ ಮಾಡುವುದು ಶ್ರೇಷ್ಠವಾದ ಧರ್ಮವೇನೋ ಸರಿ, ಆದರೆ ವ್ಯಾಪಕ ಹಿತದ ಸಮಷ್ಟಿಯ ದೃಷ್ಟಿಯಿಂದ ಕೆಲವು ಸಲ ಪ್ರತಿಜ್ಞೆಯ ಭಂಗವು ಪ್ರತಿಜ್ಞೆಯ ಪಾಲನೆಗಿಂತ ಮಹತ್ತ್ವಪೂರ್ಣದ್ದಾಗುತ್ತದೆ. ಸತ್ಯವನ್ನು ಮಾತನಾಡುವುದು ಧರ್ಮವಾದರೂ ಅಧರ್ಮ ನಿವಾರಣೆಗೆ ದುಷ್ಟರನ್ನು ನಾಶಮಾಡುವಾಗ ಅಸತ್ಯವನ್ನು ಹೇಳುವುದು ಕ್ಷಮ್ಯವೆಂದೆಣಿಸಲಾಗುತ್ತದೆ. ಗುರುವಾದವನು ಎಷ್ಟೇ ವಂದ್ಯನೂ ಆದರಣೀಯನೂ ಆಗಿದ್ದರೂ ಒಂದು ವೇಳೆ ಆತನಿಂದ ಮರ್ಯಾದೆಯ ಅತಿಕ್ರಮಣವು ಆಗುತ್ತಿದ್ದರೆ, ಅಂಥವನ ವಿರುದ್ಧ ಶಿಷ್ಯನಾದವನು ಶಸ್ತ್ರವನ್ನು ಬಳಸುವುದು ಅಧರ್ಮವಾಗಲಾರದು. ಇದನ್ನು ಭೀಷ್ಮನು ಪರಶುರಾಮನಿಗೆ ಹೇಳಿದ್ದಾನೆ ಮತ್ತು ಯುದ್ಧಕ್ಕೂ ಮುಂದೆ ನಿಲ್ಲುತ್ತಾನೆ. ಅಸತ್ಯವನ್ನು ಮಾತನಾಡುವುದರಿಂದ ಯಾವ ಸಂದರ್ಭಗಳಲ್ಲಿ ಪಾಪವು ತಗುಲುವುದಿಲ್ಲವೆಂಬುದರ ಬಗ್ಗೆ ಶ್ರೀಕೃಷ್ಣನು ಮುಂದಿನ ಪ್ರಮಾಣವನ್ನು ಬಿಡುಗಡೆ ಮಾಡಿದ್ದಾನೆ

> ವಿವಾಹ ಕಾಲೇ ರತಿ ಸಂಪ್ರಯೋಗೇ ಪ್ರಾಣಾತ್ಯಯೇ ಸರ್ವಧನಾಪಹಾರೇ ।
> ವಿಪ್ರಸ್ಯ ಚಾರ್ಥೇ ಹ್ಯನೃತಂ ವದೇತ ಪಂಚಾನೃತಾನ್ಯಾಹುರಪಾತಕಾನಿ ॥

[ಮದುವೆಯ ಕಾಲದಲ್ಲಿ, ಸಂಭೋಗ ಸಂದರ್ಭದಲ್ಲಿ, ಪ್ರಾಣವು ಹೋಗುತ್ತಿರುವಾಗ, ಎಲ್ಲ ಹಣವೂ ನಾಶವಾಗುತ್ತಿರುವಾಗ ಮತ್ತು ಬ್ರಾಹ್ಮಣನ ಕಲ್ಯಾಣಕ್ಕಾಗಿ ಈ ಐದು ಸಂದರ್ಭಗಳಲ್ಲಿ ಸುಳ್ಳನ್ನು ಹೇಳಬಹುದು ಆ ಸುಳ್ಳುಗಳು ಪಾತಕಗಳಲ್ಲ]

ಅನ್ಯಾಯದಿಂದ ಅಪಹರಣ ಮಾಡುವ ಉದ್ದೇಶದಿಂದ ಒಂದು ವೇಳೆ ಕಳ್ಳನು ಸಾಹುಕಾರನು ಇರುವ ಸ್ಥಳವನ್ನು ವಿಚಾರಿಸಲು ಬಂದಾಗ, ತಿಳಿದ ವ್ಯಕ್ತಿಯು ಸುಳ್ಳನ್ನು ಹೇಳುವುದೇ ಇಷ್ಟವೂ ಧರ್ಮವೂ ಆಗಿರುತ್ತದೆ. ಮಕ್ಕಳ ಪ್ರಾಪ್ತಿಗಾಗಿ ಓರ್ವನನ್ನು ಹೆಂಗಸು ಬೇಡಿಕೊಂಡರೆ, ಆತನಿಗೆ ಪರಸ್ತ್ರೀ ಸಂಗವು ದೋಷವುಂಟಾಗುವುದಿಲ್ಲ.

ಭೀಷ್ಮನು ಯುಧಿಷ್ಠಿರನಿಗೆ ಕೊಟ್ಟ ಎರಡು ಪ್ರಮಾಣಗಳು.

> ಶ್ರೇಯಸ್ತತ್ರಾನೃತಂ ವಕ್ತುಂ ಸತ್ಯಾದಿತಿ ವಿಚಾರಿತಮ್ ಶಾಂತಿ. ಪ. 109/16
> ಭಿಕ್ಷಿತೇ ಪಾರದಾರ್ಯಂ ಚ ತದ್ಧರ್ಮಸ್ಯನ ದೂಷಕಮ್ ।
>
> ಶಾಂತಿ. ಪ. 34/27

ನಿಯೋಗ ಪದ್ಧತಿಯನ್ನು ಆಶ್ರಯಿಸಿ, ಸೊಸೆಯರ ಮೂಲಕ ಮಕ್ಕಳನ್ನು ಪಡೆಯುವಂತೆ ಸತ್ಯವತಿಯು ಭೀಷ್ಮನನ್ನು ಕೇಳಿಕೊಂಡಿದ್ದಳು. ಇದಂತೂ ರತಿ

ಪ್ರಸಂಗವೇನೋ ಸರಿ. ಆದರೆ ವ್ಯತ್ಯಾಸವಿಷ್ಟೇ. ನಿಯೋಗದ ಬಗ್ಗೆ ಪ್ರಾರ್ಥನೆಯು ಅಂಬಿಕೆ, ಅಂಬಾಲಿಕೆಯರಿಂದ ಬರಲಿಲ್ಲ. ಆತ್ತೆ ಸತ್ಯವತಿಯಿಂದ ಬಂದದ್ದು. ಕುರುಕುಲ ಕ್ಷಯವನ್ನು ತಡೆಯುವ ತಳಮಳವು ಆಕೆಯಲ್ಲಿತ್ತು. ಪ್ರಸಂಗದ ಗಾಂಭೀರ್ಯವನ್ನು ಗಮನಕ್ಕೆ ತಂದುಕೊಂಡು ಭೀಷ್ಮನು ತನ್ನ ಪ್ರತಿಜ್ಞೆಯನ್ನು ಮುರಿದಿದ್ದರೆ, ಆತನ ಬ್ರಹ್ಮಚರ್ಯವ್ರತವು ಕುಸಿಯುತ್ತಿರಲಿಲ್ಲ. ಭೀಷ್ಮನು ನಿಯೋಗಕ್ಕೆ ಒಪ್ಪಿಗೆ ಇತ್ತಿದ್ದರೆ ಕುರುಕುಲದ ಅಪ್ಪಟ ರಕ್ತ ಮಾಂಸಗಳು ಕುರುಕುಲ ದಲ್ಲಿ ಉಳಿದುಕೊಳ್ಳುತ್ತಿದ್ದವು. ಆತನ ನಕಾರದಿಂದ ನಿಜವಾದ ಕುರುಕುಲವು ನಿಷ್ಫಲವಾಯಿತು. ವ್ಯಾಸರ ಕುಲವು ಆರಂಭವಾಯಿತು. ರಕ್ತ ಸಂಬಂಧಿಗಳು ಅಳಿದರು. ಆದರೆ ಯಾರು ಉಳಿದರೋ ಅವರು ಬರೀ ಧರ್ಮದ ಮಕ್ಕಳಾದರು. ಧರ್ಮ ಸಂಬಂಧದಿಂದ ಅಂಬಿಕೆ, ಅಂಬಾಲಿಕೆಯರು ಕುರುಕುಲವನ್ನು ಸೇರಿದ್ದರು. ಇವರಿಗೂ ವ್ಯಾಸರಿಗೂ ಉಂಟಾದ ನಿಯೋಗದಿಂದ ಕುರುಕುಲದ ರಕ್ತವು ಸಂತತಿಯಲ್ಲಿ ಬರಲೇ ಇಲ್ಲ. ಅದು ಸಂಪೂರ್ಣವಾಗಿ ಒಣಗಿತು. ರಕ್ತ ಸಂಬಂಧದ ಮಕ್ಕಳು ಧರ್ಮ ಸಂಬಂಧದ ಮಕ್ಕಳಿಗಿಂತ ಎಂದಿಗೂ ಉತ್ತಮರಾಗಿರುತ್ತಾರೆ.

ಕುರುಕುಲಕ್ಷಯದ ಆಪತ್ತು ಕುರುವಂಶದ ಮೇಲೆ ಎರಡು ಸಲ ಬಂದಿತ್ತು. ಒಂದು ಸಲ ವಿಚಿತ್ರವೀರ್ಯನು ಸತ್ತಾಗ, ಮತ್ತೊಂದು ಸಲ ಅಭಿಮನ್ಯುವು ಸತ್ತಾಗ. ಈ ಎರಡೂ ಪ್ರಸಂಗಗಳು ಎರಡು ಪ್ರತಿಜ್ಞೆಗಳಿಗೆ ಸಂಬಂಧಿಸಿವೆ. ಪ್ರತಿಜ್ಞಾಪಾಲನೆಯ ನಿರ್ಧಾರದಿಂದ ಭೀಷ್ಮನ ಪ್ರತಿಜ್ಞೆಯು ಕುರುಕುಲಾಂತಕವಾದರೆ, ಉತ್ತರೆಯ ಪ್ರತಿಜ್ಞಾಭಂಗವು (ತಥಾ ಕಥಿತ) ಕುರುಕುಲದ ಅರ್ಥಾತ್ ವ್ಯಾಸಕುಲದ ನಾಶದ ಭೀತಿಯನ್ನು ತಡೆಯುವಂಥಾದ್ದಾಯಿತು. ಭೀಷ್ಮ ಪ್ರತಿಜ್ಞೆಗೆ ಎಲ್ಲ ಕಡೆಯಲ್ಲೂ ಗೌರವವು ದೊರಕಿತು. ನೂರಾರು ವರ್ಷಗಳಿಂದ ಅದರ ಮಹಿಮೆಯನ್ನು ಹೊಗಳ ಲಾಗುತ್ತಿದೆ. ಆದರೆ ಉತ್ತರೆಯು ಮಾಡಿದ ಪ್ರತಿಜ್ಞೆಯು ಆಕೆಯ ಕುಲಕ್ಷಯಕ್ಕೆ ಸಂಬಂಧವನ್ನು ಹೊಂದಿತ್ತೆಂಬುದನ್ನು ಯಾರೂ ಗಮನಕ್ಕೆ ತಂದುಕೊಂಡಂತೆ ಕಾಣ ಬರುವುದಿಲ್ಲ. ಪ್ರತಿಜ್ಞಾಭಂಗದ ಪಾತಕವನ್ನು ತಲೆಯ ಮೇಲೆ ಹೊತ್ತುಕೊಂಡು ಆಕೆ ಯಾವ ನಿರ್ಣಯವನ್ನು ತೆಗೆದುಕೊಂಡಳೋ ಅದರಿಂದ ಕುಲಕ್ಷಯವನ್ನು ತಡೆಯಲು ಸಹಾಯವಾಯಿತು. ಸರಿಯಾದ ಯೌವನದಲ್ಲಿ ಗಂಡನ ಸಾವೆಂಬ ಕೊಡಲಿಯು ಕುಸಿದು ಬೀಳುತ್ತಿರಲಾಗಿ, ಬಸುರಿಯಾಗಿದ್ದಾಗ ಮತ್ತು ಎಳೆಯ ವಯಸ್ಸಿನಲ್ಲಿ, ತಿಳಿದೂ ಕೂಡ ನಿರ್ಣಯವನ್ನು ತೆಗೆದುಕೊಳ್ಳುವುದು ತುಂಬಾ ಅಪಾಯಕಾರಿಯಾದುದು.

ಕುಲಕ್ಷಯವನ್ನು ತಡೆಯುವ ಉದ್ದೇಶದಿಂದ ಆಕೆಯು ಪ್ರತಿಜ್ಞಾ ಭಂಗವನ್ನು ಮಾಡಿದಳು ಎಂದು ಸಿದ್ಧಪಡಿಸಲು ಪುರಾವೆಗಳಿಲ್ಲವೆಂಬುದು ನಿಜ. ಆದರೆ ಆಕೆಯ ನಿರ್ಣಯವು ವಂಶವನ್ನು ಬೆಳೆಸುವ ಸಲುವಾಗಿ ಉಪಯುಕ್ತವಾಯಿತು. ಭೀಷ್ಮನು

ತನ್ನ ಪ್ರತಿಜ್ಞೆಯನ್ನು ಶ್ರೇಷ್ಠ ಮತ್ತು ಪ್ರತಿಷ್ಠಿತ ರಾಜರ ಮತ್ತು ವೀರರ ಎದುರಿನಲ್ಲಿ ಮಾಡಿದ್ದರಿಂದ ಅದು ಸರ್ವತೋಮುಖವಾಯಿತು. ಆದರೆ ಉತ್ತರೆಯು ಮಾಡಿದ ಪ್ರತಿಜ್ಞೆಯು ಪತಿಪತ್ನಿಯರ ಏಕಾಂತಕ್ಕೆ ಸಂಬಂಧಿಸಿದ್ದು. ಆದ್ದರಿಂದ ಓರ್ವ ಅಭಿಮನ್ಯುವನ್ನು ಬಿಟ್ಟು ಮತ್ತ್ಯಾರಿಗೂ ತಿಳಿಯಲು ಶಕ್ಯವಿರಲಿಲ್ಲ. ಮುಂದೆ ಒಂದು ಪ್ರಸಂಗದಲ್ಲಿ ಆಕೆಯು ಶ್ರೀಕೃಷ್ಣನ ಬಳಿ ಗುಟ್ಟಿನಲ್ಲಿ ಪ್ರತಿಜ್ಞೆಯನ್ನು ತಿಳಿಸಿದ್ದಾಳೆ.

ಮಯಾ ಚೈತತ್ಪ್ರತಿಜ್ಞಾತಂ ರಣಮೂರ್ಧನಿ ಕೇಶವ ।
ಅಭಿಮನ್ಯೌ ಹತೇ ವೀರತ್ವಾಮೇಷ್ಯಾಮ್ಯಚಿರಾತಿ ॥
ತಂಚನಾಕರವಂ ಕೃಷ್ಣ ನೃಶಂಸಾ ಜೀವಿತಾಪ್ರಿಯಾ ।

ಅಶ್ವಮೇ.ಪ. 68/23-24

[ವೀರನಾದ ಕೇಶವನೆ ! ಯುದ್ಧದ ಮುಂಭಾಗದಲ್ಲಿ ಅಭಿಮನ್ಯುವು ಕೊಲ್ಲಲ್ಪಟ್ಟದ್ದೇ ಆದರೆ ನಿನ್ನನ್ನೇ ಬೇಗನೆ ಹೊಂದುವೆನು ಎಂದು ನಾನು ಪ್ರತಿಜ್ಞೆಯನ್ನು ಮಾಡಿದ್ದೆನು ಎಲೈ ಕೃಷ್ಣನೆ ! ಬದುಕುವ ಆಸೆಯಿಂದ ಕೆಟ್ಟವಳಾದ ನಾನು ಅದನ್ನು ನೆರವೇರಿಸಲಿಲ್ಲ.]

ಪ್ರತಿಜ್ಞೆಯ ಭಂಗಕ್ಕಿಂತ ಪತಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲಿಲ್ಲವೆಂಬುದೇ ಆಕೆಗೆ ನಿಜವಾದ ದುಃಖವು. ಬಸುರಿಯಾಗಿದ್ದಾಗ ಸಹಗಮನ ಮಾಡುವುದು ಯೋಗ್ಯವೆ ? ಅಯೋಗ್ಯವೆ ಎಂಬ ಪ್ರಶ್ನೆಯನ್ನು ದೂರಸರಿಸಿ ಇಟ್ಟರೂ ಭೀಷ್ಮನಂತೆ ಅಕ್ಷರಶಃ ತನ್ನ ಪ್ರತಿಜ್ಞೆಗೆ ಅಂಟಿಕೊಂಡಿದ್ದರೆ ಕುರುಕುಲಕ್ಷಯವು ಅಪರಿಹಾರ್ಯ ವಾಗುತ್ತಿತ್ತು. ಪರೀಕ್ಷಿತನ ಹಾಗೂ ಪರ್ಯಾಯವಾಗಿ ಜನಮೇಜಯನ ಜನ್ಮವೇ ಆಗುತ್ತಿರಲಿಲ್ಲ. ವೈಶಂಪಾಯನನಿಗೂ ಮಹಾಭಾರತದ ಕಥೆಯನ್ನು ಹೇಳುವ ಪ್ರಸಂಗವೇ ಇರುತ್ತಿರಲಿಲ್ಲ. ಜಗತ್ತು ಒಂದು ಮಹಾಕಾವ್ಯವನ್ನು ಕಳೆದುಕೊಳ್ಳು ತ್ತಿತ್ತು. ಇಷ್ಟು ಈ ಪ್ರತಿಜ್ಞೆಯು ಮಹತ್ತ್ವವುಳ್ಳದ್ದಾಗಿದೆ.

ವ್ಯಾಸನ ಶ್ರೇಷ್ಠತೆಯನ್ನು ವರ್ಣಿಸುವಾಗ ಶಬ್ದ ಸಾಮರ್ಥ್ಯದ ಕೊರತೆಯು ಬೀಳುತ್ತದೆ. ವಶಿಷ್ಠ, ಶಕ್ತಿ, ಪರಾಶರ ಇಂಥ ಉಜ್ವಲ ಜ್ಞಾನಿಗಳ ವಂಶಪರಂಪರೆ ಯಲ್ಲಿ ಜನ್ಮವನ್ನು ತಾಳಿದ್ದರಿಂದ ವಾಂಶಿಕ ಗುಣದ ಹಕ್ಕುದಾರಿಕೆ ಗಳಿಸುವುದಂತೂ ಸರಿಯೆ. ಇದಲ್ಲದೆ ತನ್ನಲ್ಲೇ ಉಂಟಾದ ಜ್ಞಾನ ತಪಶ್ಚರ್ಯೆ ಮತ್ತು ಕರ್ತೃತ್ವ ಶಕ್ತಿ ಇವು ಪ್ರಖರವಾಗಿಯೇ ಇದ್ದವು. ಜಗತ್ತಿಗೆ ತಿಲಕ ಪ್ರಾಯವಾಗುವ ಮಹಾಕಾವ್ಯ ವನ್ನು ನಿರ್ಮಿಸಿದ ಈತನು ದ್ರಷ್ಟ ಪುರುಷನೂ ಆಗಿದ್ದನು. ಇಷ್ಟು ಅಲೌಕಿಕ ಪ್ರತಿಭೆಯುಳ್ಳ ಮತ್ತೋರ್ವ ಮಹಾಪುರುಷನು ಬೇರೆ ಎಲ್ಲೂ ಇರಲು ಶಕ್ಯವಿಲ್ಲ.

ಈತನು ಓರ್ವ ಶ್ರೇಷ್ಠ ಬ್ರಾಹ್ಮಣನಾಗಿದ್ದರೂ ಈತನಿಗೂ ಕುರುಕುಲಕ್ಕೂ ಎಳ್ಳಷ್ಟೂ ಸಂಬಂಧವಿಲ್ಲ. ಈತನು ಸತ್ಯವತಿಯ ಮಗನಾಗಿದ್ದರೂ ಶಂತನುವಿಗೆ ಸಂಬಂಧಿಸಿದ ಮಗನಲ್ಲವೆಂಬುದನ್ನು ಮರೆಮಾಚುವಂತಿಲ್ಲ. ಸತ್ಯವತಿಗೂ ಕುರು ಕುಲಕ್ಕೂ ಸಂಬಂಧವನ್ನು ಕೂಡಿಸುವ ಮೊದಲೆ, ಆಕೆ ಇನ್ನು ಕನ್ನೆಯಾಗಿದ್ದಾಗಲೇ

ಆಕೆಯಿಂದ ಹುಟ್ಟಿದ ಮಗನು (ಕಾನೀನ ಪುತ್ರ). ಆಪತ್ಕಾಲದಲ್ಲಿ ಶ್ರೇಷ್ಠ ಬ್ರಾಹ್ಮಣನಿಂದ ಕ್ಷತ್ರಿಯ ಸ್ತ್ರೀಯರು ಸಂತತಿಯನ್ನು ಪಡೆಯಲು ನಿಯೋಗ ವಿಧಿಯನ್ನು ಆಶ್ರಯಿಸಲು ಧರ್ಮದ ಹಾಗೂ ಆ ಕಾಲದ ಸಮಾಜದ ಒಪ್ಪಿಗೆ ಇತ್ತೆಂಬುದು ನಿಜವಾದರೂ ಇಂಥ ನಿಯೋಗ ಸಂಬಂಧದಲ್ಲಿ ಸ್ತ್ರೀಪುರುಷರ ಪೈಕಿ ಯಾರಾದರೊಬ್ಬರು ತಮ್ಮ ಕುಲದ ರಕ್ತವನ್ನು ಉಳಿಸಿಕೊಳ್ಳುವುದು ಶ್ರೇಯಸ್ಕರವೆಂದು ಭಾವಿಸಲಾಗಿತ್ತು. ಅಂಬಿಕೆ-ಅಂಬಾಲಿಕೆಯರು ವಿಚಿತ್ರವೀರ್ಯನಿಂದ ಅಥವಾ ನಿಯೋಗವನ್ನು ಆಶ್ರಯಿಸಿ ಭೀಷ್ಮನಿಂದ ಮಕ್ಕಳನ್ನು ಪಡೆದಿದ್ದರೆ ಕುರುಕುಲದ ಅಪ್ಪಟರಕ್ತದ ವಂಶವು ಮುಂದೆ ಸಾಗುತ್ತಿತ್ತು. ಆದರೆ ಆಕೆಯ ಮತ್ತು ವ್ಯಾಸರ ಸಂಬಂಧದಿಂದ ನಿರ್ಮಾಣವಾದ ಸಂತತಿಯು ಕುರುಕುಲದ್ದು ಹೇಗೆ ಆದೀತು? ಯಮ, ವಾಯು, ಇಂದ್ರ ಮುಂತಾದವರು ದೇವತೆಗಳೆಂದು ಎಷ್ಟೇ ವಂದ್ಯರಾಗಿದ್ದರೂ ವ್ಯಾಸರಂತೆಯೇ ಅವರಲ್ಲೂ ಕುರುವಂಶದ ರಕ್ತವಿಲ್ಲ. ಸಂತತಿಯ ವಂಶವನ್ನು ಕುಲ ಕ್ಷೇತ್ರದಿಂದ ಮಾನ್ಯಮಾಡಬೇಕೆ? ಅಥವಾ ಬೀಜದಿಂದಲೆ? ಅಂಬಿಕೆ, ಅಂಬಾಲಿಕೆ ಮತ್ತು ವ್ಯಾಸ ಇವರ ಸಂಬಂಧದಲ್ಲಿ ಕುರುಕುಲದ ಕ್ಷೇತ್ರವೂ ಇಲ್ಲ, ಬೀಜವೂ ಇಲ್ಲ. ಹಿರಿಯರ ವಂಶ ಅಥವಾ ಕುಲದಿಂದ ಸಂತತಿಯ ವಿಚಾರವನ್ನೂ ಮಾಡುವುದಾದರೆ, ಪರಾಶರನು ಬ್ರಾಹ್ಮಣನು, ಆದ್ದರಿಂದ ಅವನ ಮಗ ವ್ಯಾಸನು ಬ್ರಾಹ್ಮಣನು. ಇದೇ ನ್ಯಾಯದಿಂದ ಧೃತರಾಷ್ಟ್ರ ಮತ್ತು ಪಾಂಡು ಬ್ರಾಹ್ಮಣರಾಗುತ್ತಾರೆ. ಕ್ಷತ್ರಿಯರಲ್ಲಿ ಇದರ ಬದಲು ತಾಯಿಯ (ಕ್ಷೇತ್ರ) ಕಡೆಯಿಂದ ವಿಚಾರಮಾಡುವುದಾದರೆ, ವ್ಯಾಸನನ್ನು ಬೆಸ್ತನೆಂದು ಭಾವಿಸಬೇಕಾಗುತ್ತದೆ. ಈ ಎರಡು ಕಡೆಯಲ್ಲೂ ಯಾವುದಾದರೊಂದು ನ್ಯಾಯವನ್ನು ಬಳಸಬೇಕು. ಈ ಬಗ್ಗೆ ಮನುವಿನ ಮಾತು ನಿಃಸಂಶಯವಾಗಿಲ್ಲ.

ವಿಶಿಷ್ಟಂ ಕುತ್ರಚಿದ್ಬೀಜಂ ಸ್ತ್ರೀಯೋನಿಸ್ತ್ವೇವ ಕುತ್ರಚಿತ್ ।
ಉಭಯಂತು ಸಮಂ ಯತ್ರ ಸಾಪ್ರಸೂತಿಃ ಪ್ರಶಸ್ಯತೇ ॥

[ಕೆಲವೆಡೆ ಬೀಜವು ಉತ್ತಮವಾದುದು, ಕೆಲವೆಡೆ ಕ್ಷೇತ್ರವು ಉತ್ತಮವಾದುದು. ಎರಡೂ ಸಮವಾದ ಕಡೆಯಿಂದ ಉಂಟಾದ ಸಂತಾನವು ಪ್ರಶಸ್ತವೆಂದೆಣಿಸಲಾಗಿದೆ.]

ವ್ಯಾಸರ ಹುಟ್ಟಿನ ಬಗ್ಗೆ ಒಂದು ನ್ಯಾಯ, ಧೃತರಾಷ್ಟ್ರ-ಪಾಂಡು ಇವರ ಬಗ್ಗೆ ಮತ್ತೊಂದು ನ್ಯಾಯ, ಇವನ್ನೂ ಅಪವಾದಗಳೆಂದು ಏಕೆ ಎಣಿಸಬೇಕು? ಮಕ್ಕಳಿಲ್ಲದ ಹೆಂಗಸು (ಆಕೆ ಸುವಾಸಿನಿ ಅಥವಾ ವಿಧವೆಯಾಗಿರಬಹುದು) ನಿಯೋಗವಿಧಿಯನ್ನು ಆಶ್ರಯಿಸಿ, ಪರಪುರುಷನಿಂದ ಸಂತತಿಯನ್ನು ಪಡೆದಾಗ ಆ ಸಂತತಿಯು ಔರಸ ಸಂತತಿಯೆಂದೆ, ಮಾನ್ಯವಾಗಿದ್ದುದರಿಂದ ಸಂತತಿಯ ಕುಲ ಅಥವಾ ವಂಶವು ಆಕೆಯ ಪತಿಯ ವಂಶವೇ ಆಗಿತ್ತು. ಈ ಆಧಾರದ ಮೇಲೆ ಧೃತರಾಷ್ಟ್ರ-ಕೌಂತೇಯರನ್ನು ಕೌರವ ಪಾಂಡವರೆಂದು ಭಾವಿಸಬೇಕು. ಇದು ಕೇವಲ ಒಂದು ಸಮಾಧಾನಕ್ಕಾಗಿ. ಆದರೆ ತಂದೆ ತಾಯಿಯರಿಂದ ಕುರುವಂಶದ ರಕ್ತವನ್ನು ಪಡೆಯದ ಕಾರಣ ಕೌರವ-

ಪಾಂಡವರು ಕುರುವಂಶೀಯರೆಂದು ನಿರ್ಧರಿಸಲು ಆಗುವುದಿಲ್ಲ. ಭೀಷ್ಮನ ಅತಿ ದಕ್ಷತೆಯಿಂದ ಎಂದು ಬೇಕಾದರೆ ಹೇಳಿ ಅಥವಾ ಎದೆಗಾರಿಕೆಯಿಂದ ಎಂದು ಬೇಕಾದರೆ ಹೇಳಿ, ಆತನು ನಿಯೋಗವನ್ನು ತಿರಸ್ಕರಿಸಿರುವರಿಂದ ಭೀಷ್ಮ ಪ್ರತಿಜ್ಞೆಯು ಕುರು ಕುಲಾಂತಕವಾಗಿ ನಿಂತಿತು. ಇದರಲ್ಲಿ ಸಂಶಯವಿಲ್ಲ. ಭೀಷ್ಮನು ಬರಿ ಮದುವೆಯಾಗದೆ ಉಳಿಯುವುದಾಗಿ ಪ್ರತಿಜ್ಞೆ ಮಾಡಿದ್ದರೆ, ಆಪತ್ಕಾಲದಲ್ಲಿ ನಿಯೋಗವನ್ನು ತಿರಸ್ಕರಿಸುವ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಆದರೆ ಭೀಷ್ಮನ ಪ್ರತಿಜ್ಞೆಯಲ್ಲಿ 'ಬ್ರಹ್ಮಚರ್ಯ', 'ಊರ್ಧ್ವರೇತಸ್' ಎಂಬ ಪದಗಳನ್ನು ಬಳಸಿದ್ದರಿಂದ ತೀವ್ರವಾದ ಗೋಜಲುಂಟಾಗಿದೆ.

ಮಹಾಭಾರತದಲ್ಲಿನ ಬ್ರಹ್ಮಚರ್ಯ ಮತ್ತು ಕೌಮಾರ್ಯ ಇವುಗಳ ಬಗೆ ಇರುವ ಉದಾಹರಣೆಗಳನ್ನು ಗಮನಿಸಿದರೆ ಭೀಷ್ಮನು ಮಾಡಿದ ಪ್ರತಿಜ್ಞೆಗಾಗಿ ನಿಯೋಗವನ್ನು ತಿರಸ್ಕರಿಸಿದುದನ್ನು ಸಮರ್ಥಿಸಲಾಗುವುದಿಲ್ಲ. ಆ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಕಲ್ಪನೆಗಳನ್ನು ಗಮನಿಸಿದರೆ, ಅಂಬಿಕೆ—ಅಂಬಾಲಿಕೆಯರೊಡನೆ ಭೀಷ್ಮನು ನಿಯೋಗ ಸಂಬಂಧವನ್ನು ಮಾಡಿದ್ದರೂ ಆತನ ಬ್ರಹ್ಮಚರ್ಯಕ್ಕೆ ಬಾಧಕವು ಬರುತ್ತಿರಲಿಲ್ಲ. ಮಹಾಭಾರತದಲ್ಲಿ ಬರುವ ಕೆಲವು ಉದಾಹರಣೆಗಳು ಮತ್ತು ಕಥೆಗಳು ಮಹಾಭಾರತ ಕಾಲದ ಮತ್ತು ಭೀಷ್ಮಕಾಲದವುಗಳಾಗಿದ್ದರೂ ಉಪಾಖ್ಯಾನಗಳಲ್ಲಿ ಬರುವ ಉದಾಹರಣೆಗಳು ಮತ್ತು ಕಥೆಗಳು ಮಹಾಭಾರತಕ್ಕೂ ಹಿಂದಿನ ಕಾಲದ್ದಾಗಿವೆ.

ಆಯುಧಶಾಲೆಯಲ್ಲಿ ಏಕಾಂತದಲ್ಲಿದ್ದ ದ್ರೌಪದಿ ಮತ್ತು ಯುಧಿಷ್ಠಿರ ಇವರನ್ನು ನೋಡಿದ್ದಕ್ಕಾಗಿ ಶಿಕ್ಷೆಯೆಂದು ಅರ್ಜುನನು ತೀರ್ಥಯಾತ್ರೆಯನ್ನು ಕೈಗೊಂಡಾಗ ಆತನು ಬ್ರಹ್ಮಚರ್ಯೆಯನ್ನು ಪಾಲನೆ ಮಾಡುತ್ತಿದ್ದನು. ಆದರೆ ಉಲೂಪಿಯ ಸೌಂದರ್ಯ ಪ್ರಭಾವದಿಂದ ಆತನ ಕಾಮವಾಸನೆಯು ಕುದಿದುಬಂದಿತು. ಆತನ ಬ್ರಹ್ಮಚರ್ಯ ವ್ರತವು ಕೇವಲ ದ್ರೌಪದಿಯ ಮಟ್ಟಿಗೆ ಅನ್ವಯಿಸುತ್ತದೆಯೆಂಬ ಯುಕ್ತಿವಾದವನ್ನು ಆಕೆಯು ಮಂಡಿಸಿದಾಗ, ಆತನು ಆಕೆಯೊಡನೆ ಒಂದು ರಾತ್ರಿಯನ್ನು ಕಳೆದನು. ಆದರೂ ಆತನ ಬ್ರಹ್ಮಚರ್ಯೆಯು ಕುಸಿಯಲಿಲ್ಲ.

ಚಿತ್ರಾಂಗದೆಯನ್ನು ನೋಡಿ ಮದುವೆಯಾಗುವುದಾಗಿ ಬೇಡಿಕೊಂಡು, ಆಕೆಯ ತಂದೆಯು ಹಾಕಿದ ಕ್ಲೇಶದಾಯಕವಾದ ನಿಯಮವನ್ನು ಒಪ್ಪಿಕೊಂಡು ಮೂರು ವರ್ಷಗಳಕಾಲ ಗಂಡನೆಂದು ಆಕೆಯೊಡನೆ ಇದ್ದನು. ಆತನಿಗೆ ಬಭ್ರುವಾಹನನೆಂಬ ಮಗನು ಹುಟ್ಟಿದನು. ಆದರೆ ಅರ್ಜುನನ ಬ್ರಹ್ಮಚರ್ಯೆಯು ಅಬಾಧಿತವಾಗಿಯೇ ಉಳಿಯಿತು. ಶ್ರೀಕೃಷ್ಣನ ಒಪ್ಪಿಗೆಯಿಂದ ಸುಭದ್ರೆಯನ್ನು ಅಪಹರಿಸಿ ಆಕೆಯನ್ನು ಮದುವೆಯಾದನು. ಆದರೂ ಆತನ ಬ್ರಹ್ಮಚರ್ಯವ್ರತಕ್ಕೆ ಭಂಗವುಂಟಾಗಲಿಲ್ಲ. ಪರಾಶರನು ಉಪಭೋಗಿಸಿದ ಮೇಲೆ ಮತ್ತು ವ್ಯಾಸನು ಹುಟ್ಟಿದ ಮೇಲೂ ಸತ್ಯವತಿಯು ಕುಮಾರಿಯಾಗಿಯೇ ಉಳಿದಳೆಂಬ ಕಾರಣದಿಂದ ಶಂತನುವಿನೊಡನೆ ಆಕೆಯ ಮದುವೆಯಾಗಲು ಯಾವ ಅಡಚಣೆಯೂ ಉಳಿಯಲಿಲ್ಲ. ಕುಂತೀ—

ಸೂರ್ಯರ ಸಮಾಗಮವಾಯಿತು. ಕರ್ಣನು ಹುಟ್ಟಿದನು. ಆದರೂ ಆಕೆಯ ಕೌಮಾರ್ಯವು ಅಭಂಗವಾಗಿಯೇ ಉಳಿಯಿತು. ಮಾಧವಿಗೆ ನಾಲ್ಕು ಜನರಿಂದ ನಾಲ್ಕು ಮಕ್ಕಳಾದರೂ ಆಕೆಯು ಕುಮಾರಿಯಾಗಿ ಮೇಲುಳಿದಿದ್ದರಿಂದ ಯಯಾತಿಯು ಆಕೆಯ ಸ್ವಯಂವರಕ್ಕೆ ಒಪ್ಪಬೇಕಾಯಿತು. ಐದು ಗಂಡಂದಿರನ್ನು ಪಡೆದಿದ್ದ ದ್ರೌಪದಿಯು ಪ್ರತಿ ಗಂಡನ ಪ್ರಥಮ ಸಮಾಗಮದ ಸಮಯದಲ್ಲಿ ವ್ಯಾಸರ ಕೃಪೆಯಿಂದ ಕುಮಾರಿಯಾಗಿಯೇ ಉಳಿದಿದ್ದರಿಂದ ಧರ್ಮಶಾಸ್ತ್ರದ ನಿಯಮದ ಉಲ್ಲಂಘನೆಯಾಗಲಿಲ್ಲ. ಈ ಉದಾಹರಣೆಗಳನ್ನು ಗಮನಿಸಿದರೆ ನಿಯೋಗಕ್ಕೆ ಒಪ್ಪಿಗೆಯನ್ನು ಪಡೆದೂ, ಭೀಷ್ಮನು ಬ್ರಹ್ಮಚರ್ಯೆಯಲ್ಲಿ ಉಳಿಯಲು ಯಾವ ಅಡ್ಡಿಯೂ ಇರುತ್ತಿರಲಿಲ್ಲವೆಂದು ಕಂಡುಬರುತ್ತದೆ. ಹೀಗೆ ಭಾವಿಸುವುದು ಅಸ್ವಾಭಾವಿಕವಾಗಲಾರದು. ಆದರೆ ಅದರಲ್ಲಿ ಒಂದು ದೃಢತೆಯಿದೆ. ಭೀಷ್ಮನ ಬ್ರಹ್ಮಚರ್ಯೆಯು ಇತರರ ಬ್ರಹ್ಮಚರ್ಯೆಗಿಂತ ಬೇರೆಯಾಗಿದೆ. ಅದು ಸಾಧಾರಣ ಬ್ರಹ್ಮಚರ್ಯೆಯಾಗಿರದೆ, ನೈಷ್ಠಿಕ ಬ್ರಹ್ಮಚರ್ಯೆಯಾಗಿದೆ. ಪ್ರತಿಜ್ಞೆಯಲ್ಲಿ 'ನೈಷ್ಠಿಕ' ಪದವು ಇಲ್ಲದಿದ್ದರೂ ಅದು ಅದಕ್ಕೆ ಅಂಟಿಕೊಂಡಿದೆ. ನೈಷ್ಠಿಕತೆಯ ನಿರ್ಲೇಪವನ್ನು ಕಾಪಾಡುವ ಸಲುವಾಗಿ ಆತನು ನಿಯೋಗವನ್ನು ತಿರಸ್ಕರಿಸಬೇಕಾಯಿತು. ನಿಯೋಗವು ನೈಷ್ಠಿಕತೆಗೆ ಭಂಗ ತರುತ್ತಿತ್ತು.

ಡಾ. ಟಿ. ಎಂ. ಸರಸ್ವತಿ

ಕವಿ–ಸವಿ

ಕವಿ ಕರ್ಮದಲಿ ಸದಾ ನಿರತ
ಪದ ಜೋಡಣೆಯಲಿ ಪರಿಣಿತ
ಅವನದೆಲ್ಲಾ ರೀತಿ–ರಸ–ಧ್ವನಿ ಅಲಂಕಾರ
ನವರಸಗಳ ಭಂಡಾರ

ಕವಿಸತಿಗೆ ಪದಾರ್ಥಗಳ ಚಿಂತೆ
ಹದವರಿತು ಬಳಸುವ ನಿಪುಣತೆ
ಇವಳದೆಲ್ಲಾ ಉಪ್ಪು–ಹುಳಿ–ಕಾರ
ಷಡ್ರಸಗಳ ಚಮತ್ಕಾರ

ಅವನ ಪದದಂತೆ ಇವಳ ಹದದಲ್ಲೂ
ಇದೆ ನವನವೋನ್ಮೇಷ
ಪುಷ್ಟಿ–ತುಷ್ಟಿಗೆ ಬೇಕು ಇವೆರಡರ
ಸಮಾವೇಶ

ನೀರು (H_2O)

ನೀರಿನಂತೆ ನಾನು
ಅವಸ್ಥಾಂತರಗಳಲಿ ಬಳಲಿದೆ
ಒಮ್ಮೆ ಹೆಪ್ಪುಗಟ್ಟಿದೆ ಭಾರವಾಗಿ
ಹಿಮದಂತೆ ಜಡವಾಗಿ

ಇನ್ನೊಮ್ಮೆ ಹರಿದೆ ಸಲಿಲದಂತೆ ಸರಾಗವಾಗಿ
ಚಿಮ್ಮಿದೆ ಸಂತಸದ ಹೊನಲಾಗಿ
ಮತ್ತೊಮ್ಮೆ ಹಗುರಾದೆ ಆವಿಯಂತೆ
ಹಾರಾಡಿದೆ ಹಕ್ಕಿಯಂತೆ

ಇವು ಸತ್ವ–ರಜ–ತಮವಂತೆ
ನಾನೇನು ಬಲ್ಲೆ ?
ಮನುಜನೂ H_2O ದಂತೆಯೇ ಸಂಮಿಶ್ರವಂತೆ
ಬೆಂದ ಭಾವಗಳಲಿ ಪುಟಕ್ಕಿಟ್ಟಂತೆ

ಎಚ್. ಎಸ್. ಹರಿಶಂಕರ್

ತಿರುಮಲಾರ್ಯನ ಶಾಸನಗಳು

ತಿರುಮಲಾರ್ಯನು ಕೇವಲ ಗ್ರಂಥಗಳಷ್ಟೇ ಅಲ್ಲ, ಶಾಸನಗಳನ್ನೂ ಬರೆದಿದ್ದಾನೆ. ಈತನ ಎರಡು ತಾಮ್ರ ಶಾಸನಗಳು ನಮಗೆ ದೊರೆತಿವೆ. ಬಹುಶಃ ಈತನ ಶಾಸನಗಳು ಅವನ ಗ್ರಂಥಗಳಿಗಿಂತ ಮೊದಲು ಬರೆದವುಗಳಾಗಿದ್ದಿರಬೇಕು.

ತಿರುಮಕೂಡಲು ನರಸೀಪುರದ ಶಾಸನದ ಕಾಲ ಕ್ರಿ.ಶ. 1663.[1] ಈ ಶಾಸನವು ಸಂಸ್ಕೃತದಲ್ಲಿದೆ. ಅಲ್ಲದೆ ಈ ಶಾಸನದ ಕೊನೆಯಲ್ಲಿ ದೇವರಾಜ ಒಡೆಯರ ಅಂಕಿತವಿರುವುದರಿಂದ, ಚಿಕ್ಕದೇವನು ಪಟ್ಟಕ್ಕೆ ಬರುವ ಮೊದಲು ಇದನ್ನು ಬರೆದಿರುವುದು ಸ್ಪಷ್ಟ. ದೊರೆ ದೇವರಾಜನು ಹೊಯ್ಸಳನಾಡಿನ, ನಾಗಮಂಗಲ ಸ್ಥಳದ ಹಳ್ಳಿಕೇರಿ ಎಂಬ ಗ್ರಾಮವನ್ನು ಮತ್ತು ಅದರೊಂದಿಗೆ ದೇವರಾಜಪುರ (ತಂಕೇಡ)ವನ್ನು ಯೇಡೂರಿವಂಶದ ಶಟಮರ್ಷಣ ಗೋತ್ರದ ವೆಂಕಟವರದಾಚಾರ್ಯನಿಗೆ ದತ್ತಿಬಿಟ್ಟನು. ಈ ವೆಂಕಟಾಚಾರ್ಯನು ದೇವಸಭೆಯಲ್ಲಿ ಸುಶೋಭಿಸುತ್ತಿದ್ದ ಬೃಹಸ್ಪತಿಯಂತೆ ಕಂಗೊಳಿಸುತ್ತಿದ್ದನು. ಈತನ ತಂದೆಯಾದ ರಮಾಕುಮಾರ ತಾತಾರ್ಯನನ್ನು ಶಾಸನವು 'ಪರವೇದಾಂತ ತತ್ವವೇತ್ತುಃ ಕೋಟಿಕನ್ಯಾಪ್ರದಾನೇನ ಪ್ರಥಿತೌದಾರ್ಯ ಶಾಲಿನಃ'[2] ಎಂದು ವರ್ಣಿಸುತ್ತದೆ. ಇವನ ತಂದೆಯಾದ ಶ್ರೀಶೈಲವಂಶದ ತಾತಾಚಾರ್ಯನಿಗೂ ದೇವರಾಜನು ಇಕ್ಕೇರಿಯೆಂಬ (ನುಲರಪುರ) ಅಗ್ರಹಾರವನ್ನು ದತ್ತಿಕೊಟ್ಟನೆಂದು ಇದೇ ಶಾಸನವು ತಿಳಿಸುತ್ತದೆ. ತಾತಾಚಾರ್ಯನು ಇದಕ್ಕೆ ಪ್ರತಿರೂಪವಾಗಿ ರಾಜ ಪ್ರಬಂಧಗಳನ್ನು ಬರೆದು ಹೇಳಿದನು. ತಿರುಪತಿಯ ವೆಂಕಟೇಶ್ವರನು ಇವನನ್ನು 'ತಾತ'ನೆಂದು ಸಂಬೋಧಿಸಿದನೆಂದು ಇಲ್ಲಿ ವರ್ಣಿತವಾಗಿದೆ.[3] ಒಟ್ಟು ಇಷ್ಟು ವಿಷಯಗಳನ್ನು ನಾವು ಈ ಶಾಸನದಲ್ಲಿ ಕಾಣಬಹುದು.

---

1. E.C. III (!) TN. 23.
2. ಅದೇ : ಸಾಲು 44.
3. ಶ್ರೀ ವೆಂಕಟೇಶ ಪರಿವರ್ಧಿತ ತಾತನಾಮ್ನಃ, ಅದೇ. ಸಾಲು 27-28.

ಮೇಲಿನ ಶಾಸನದ ಭಾಷೆ ಸಂಸ್ಕೃತ. ಇದರಲ್ಲಿ ದಿಗ್ವಿಜಯ ವರ್ಣನೆಯಾಗಲಿ ಮೈಸೂರು ಅರಸರ ವಂಶಾವಳಿಯಾಗಲೀ ಕಂಡುಬರುವುದಿಲ್ಲ. ದಾನಶಾಸನವನ್ನು ಕೊಟ್ಟ ರಾಜನ ಹೆಸರು ಹಾಗೂ ದಾನಪಡೆದವನ ವರ್ಣನೆಗಳನ್ನು ಬಿಟ್ಟರೆ ಇನ್ನಾವ ಹೆಚ್ಚಿನ ಅಂಶಗಳೂ ಇಲ್ಲಿ ನಮಗೆ ಕಂಡುಬರುವುದಿಲ್ಲ. ಈ ಶಾಸನದ ಕೊನೆಯಲ್ಲಿ ತಿರುಮಲಾರ್ಯನು 'ಅಲಸಿಂಗರಾರ್ಯಸ್ಯ ತನಯಃ ತಿರುಮಲಾಚಾರ್ಯವ್ಯಾತಾನೀತ್ತಾಂಬ್ರ ಶಾಸನ ಶ್ಲೋಕಾನ್' ಎಂದು ಮುಕ್ತಾಯಗೊಳಿಸಿದ್ದಾನೆ.

ಕ್ರಿ.ಶ. 1675 ರಲ್ಲಿ ತಿರುಮಲಾರ್ಯನಿಂದ ರಚಿತವಾದ ಚಾಮರಾಜನಗರದ 92 ನೆಯ ಶಾಸನವು ಮೇಲಿನ ಶಾಸನಕ್ಕಿಂತ ಹೆಚ್ಚು ಮಹತ್ವವನ್ನು ಪಡೆದಿದೆ ಎಂದು ಹೇಳಬಹುದು.[1] ಈ ಶಾಸನವು ರಚಿತವಾದ ಕಾಲದಲ್ಲಿ ಚಿಕ್ಕದೇವರಾಜ ಒಡೆಯನು ಶ್ರೀರಂಗಪಟ್ಟಣದ ರಾಜನಾಗಿದ್ದನು. ಈ ಶಾಸನದ ಕೊನೆಯಲ್ಲಿ 'ಶ್ರೀ ಚಿಕ್ಕದೇವ ರಾಜಃ' ಎಂದು ಕನ್ನಡದಲ್ಲಿ ರಾಜನ ಸ್ವಹಸ್ತಾಕ್ಷರವಿದೆ. ಇಲ್ಲಿ ತಿರುಮಲಾರ್ಯನು ಬಹು ಸಂಕ್ಷಿಪ್ತವಾಗಿ ಮೈಸೂರು ದೊರೆಗಳ ವಂಶಾವಳಿಯನ್ನು ತಿಳಿಸುತ್ತಾನೆ; ಚಿಕ್ಕದೇವರಾಜನ ದಿಗ್ವಿಜಯಗಳನ್ನು ವರ್ಣಿಸುತ್ತಾನೆ. ಪೂರ್ವದಲ್ಲಿ ಪಾಂಡ್ಯರ ಚೊಕ್ಕನನ್ನು ಜಯಿಸಿ ಅವನಿಂದ ತ್ರಿಪುರ ಅನಂತಪುರಿಗಳನ್ನು ವಶಪಡಿಸಿಕೊಂಡನು. ಪಶ್ಚಿಮದಲ್ಲಿ ಕೆಳದಿ ಅರಸರನ್ನು ಗೆದ್ದು ಸಕಲೇಶಪುರ ಮತ್ತು ಅರಕಲಗೂಡುಗಳನ್ನು ತನ್ನ ಅಧೀನವಲ್ಲಿಟ್ಟುಕೊಂಡನು. ಇವನ ರಾಜ್ಯವಿಸ್ತರಣಾಕಾಂಕ್ಷೆ ಇಷ್ಟಕ್ಕೇ ನಿಲ್ಲದೆ, ಉತ್ತರದಲ್ಲಿ ರಣದುಲ್ಲಾಖಾನನನ್ನು ಎದುರಿಸಿ ಅವನ ಪ್ರದೇಶಗಳಾದ ಕೇತಸಮುದ್ರ, ಕಂದಿಕೆರೆ, ಹಂದಲಕೆರೆ, ಗೂಳೂರು, ತುಮಕೂರು ಮತ್ತು ಹೊನ್ನವಳ್ಳಿಗಳನ್ನು ಗೆದ್ದುಕೊಂಡನು.[2] ಜಡಗನದುರ್ಗವನ್ನು ವಶಪಡಿಸಿಕೊಂಡು ಅದಕ್ಕೆ ಚಿಕದೇವರಾಯ ದುರ್ಗವೆಂಬ ಹೆಸರಿಟ್ಟನು. ಯವನರ ದಂಡಿಯಾತ್ರೆಯಲ್ಲಿ ಕಳೆದುಹೋಗಿದ್ದ ವರಾಹ ಮೂರ್ತಿಯನ್ನು ಶ್ರೀಮುಷ್ಣದಿಂದ ತಂದು ಶ್ರೀರಂಗಪಟ್ಟಣದಲ್ಲಿ ಪ್ರತಿಷ್ಠಾಪಿಸಿದನು.

---

1. E C. Vol. 4. Ch 92.

2. ಅದೇ : ಸಾಲುಗಳು 25ರಿಂದ 34 } ಪ್ರಾಚ್ಯಾಂ ಪಾಂಡ್ಯಂ ಚೊಕ್ಕಭೂಪಂ ವಿಜಿತ್ಯ ಸಮರೇ ಹರತ್ । ಪರಮತ್ರಿಪುರಂ ಮುಟ್ಟಾಂಜತ್ಯನಂತ್ರಗಿರೀ ಅಪಿ ॥ ಪ್ರತೀಚ್ಯಾಂ ಕೆಳದೀ ಭೂಪಾನ್ ಪ್ರಹೃತ್ಯ ಯವನಾನುಗಾನ್ । ಸಕಲೇಶಪುರಂ ಪ್ರಾಪಪರಕಲ್ಗೂಡ ಮಪ್ಯಸಾ । ಅಹರತ್ ಕೇತಸಮುದ್ರಂ ಜಿತ್ವೋದೀಚ್ಯಾಂಚ ರಣಧುಲಾಖಾನಂ । ಕಂದಿಕೆರೆ ಹಂದಲಕೆರೆಗೂಲೂರ್ತುಮಕೂರು ಹೊಂನವಳ್ಳೀಶ್ಚ । ಮೊರಸ ಕಿರಾತಾನುಗತಂ ಮುಷ್ಟಿಕಮೂಜೌವಿನಿರ್ಜಿತ್ಯ । ಹೃತ್ವಾ ಜಡಗನದುರ್ಗಂ ವ್ಯತನೋಚ್ಚಿಕದೇವರಾಯದುರ್ಗಾಖ್ಯಂ ॥ ವರಾಹಮೂರ್ತ್ಯಂ ಶ್ರೀಮುಷ್ಣಾಚ್ಚ್ಯುತಂ ಯವನವಿಪ್ಲುತಾತ್ । ಶ್ರೀರಂಗಪಟ್ಟಣಾಸ್ಥಾಪಿಸೀಮಾನೀಯಾರ್ಚತಿಭಕ್ತಿತಃ ।

E.C. ಸಂ 3. ಭಾಗ 1

ಇನ್ನು ಈ ಶಾಸನವನ್ನು ಕುರಿತು ಎರಡು ಮಾತುಗಳನ್ನು ಇಲ್ಲಿ ಹೇಳಬಹುದು. ಚಿಕ್ಕದೇವರಾಜನು ತನ್ನ ತಂದೆ ದೊಡ್ಡದೇವರಾಜನಿಗೆ ವೈಕುಂಠ ಪ್ರಾಪ್ತಿಯಾಗ ಬೇಕೆಂದು ಬಗೆದು ದೊಡ್ಡದೇವರಾಜನ ಪ್ರತ್ಯಾಬ್ದಿಕ ಪುಣ್ಯಕಾಲದಲ್ಲಿ ಶ್ರೀಕೃಷ್ಣ ದೀಕ್ಷಿತನೆಂಬುವನಿಗೆ ಚಿಕ್ಕದೇವರಾಜಪುರ (ಕಬ್ಬಿಗನಪುರ) ಮತ್ತು ಕೃಷ್ಣಾಪುರ (ಹುಲ್ಲಾನ) ಗಳೆಂಬ ಗ್ರಾಮಗಳನ್ನು ದಾನವಾಗಿಕೊಟ್ಟನು. ಇದು ಈ ಶಾಸನದಲ್ಲಿ ವರ್ಣಿತವಾಗಿದೆ.

ಈ ಶಾಸನವನ್ನು ನಾಗರಾಕ್ಷರದಲ್ಲಿ ಬರೆಯಲಾಗಿದೆ. ಶಾಸನದಲ್ಲಿ ಕವಿ ಸಂಸ್ಕೃತ ಕನ್ನಡ ಭಾಷೆಗಳೆರಡನ್ನೂ ಉಪಯೋಗಿಸಿದ್ದಾನೆ. ಪ್ರಶಸ್ತಿ ರೂಪಕವಾದ ಭಾಗವನ್ನು ಸಂಸ್ಕೃತದಲ್ಲಿಯೂ ದಾನಶಾಸನದ ವಿವರಣಾಭಾಗವಷ್ಟನ್ನು ಮಾತ್ರ ಕನ್ನಡ ದಲ್ಲಿಯೂ ಬರೆದಿದ್ದಾನೆ. ಶಾಸನದ ಕೊನೆಯಲ್ಲಿ 'ಅಲಸಿಂಗರಾರ್ಯಸ್ಯ ತನಯಃ ತಿರುಮಲಯಾರ್ಯೋऽವ್ಯತಾನೀತ್ತಾಂಬ್ರ ಶಾಸನ ಶ್ಲೋಕಾನ್' ಎಂದಿದೆ. ಆದ್ದರಿಂದ ನಮಗೆ ತಿರುಮಲಾರ್ಯನ ಹೆಸರಿನಲ್ಲಿ ಲಭ್ಯವಾಗಿರುವ ಶಾಸನಗಳೆಂದರೆ—ತಿರುಮ ಕೂಡಲಿನ 23 ನೇ ಶಾಸನ ಹಾಗೂ ಚಾಮರಾಜನಗರದ 92 ನೇ ಶಾಸನ ಎರಡೇ.

ಹೆಚ್ಚುಕಡಿಮೆ ಕ್ರಿ.ಶ. 1686ರಲ್ಲಿನ ಶ್ರೀರಂಗಪಟ್ಟಣದ 14ನೆಯ ಶಾಸನವನ್ನು[1] ನಾವು ಅವಲೋಕಿಸಿದರೆ ತಿರುಮಲಾರ್ಯನ ಕೈವಾಡ ಈ ಶಾಸನವನ್ನು ರಚಿಸುವಲ್ಲಿ ಇದ್ದಿರಬಹುದೇನೋ ಎಂಬ ಸಂಶಯ ಮೂಡಿ ಬರುತ್ತದೆ. ಈ ಶಾಸನವನ್ನು ಯಾರು ಬರೆದರೆಂದು ಗೊತ್ತಾಗುವುದಿಲ್ಲ. ಆದರೆ ಚಾಮರಾಜನಗರ 92 ರ ಶಾಸನದಿಂದ ಉದ್ಧೃತವಾದ ಹಲವಾರು ಪಂಕ್ತಿಗಳು—ವಂಶಾವಳಿಯನ್ನು ವಿವರಿಸುವ ಭಾಗ—ಶ್ರೀರಂಗಪಟ್ಟಣದ 14ನೇ ಶಾಸನದಲ್ಲಿವೆ.[2] ಆದರೆ ಇದಕ್ಕೂ ಸ್ವಾರಸ್ಯವಾದ ಇನ್ನೊಂದು ಅಂಶವನ್ನು ಈ ಮುಂದೆ ನೋಡಬಹುದು. ಕ್ರಿ.ಶ. 1722ರಲ್ಲಿ–ಚಿಕ್ಕ ದೇವರಾಜನ ನಂತರದ–ಶ್ರೀರಂಗಪಟ್ಟಣದ 64 ನೆಯ ತಾಮ್ರ ಶಾಸನದಲ್ಲಿ[3]

1. ಶ್ರೀರಂಗಪಟ್ಟಣ : 14.
2. E.C. 3. (i) SR. 14 ಸಾಲುಗಳು 1 ರಿಂದ 7 ; ಹೋಲಿಸಿ. 22 ರಿಂದ 25,
E.C. 4. (ii) Ch. 92. ,, 2 ರಿಂದ 9. ,, 13 ರಿಂದ 17.
3. E.C. 3. (i) SR. 14.

ಕಾಲ : ಕ್ರಿ.ಶ. 1722. (1645-1706)

ತಿರುಮಲಾರ್ಯನಿಂದ ರಚಿತವಾದ ಗ್ರಂಥದಿಂದ ಎತ್ತಿಕೊಂಡಿರುವ ಹಲವಾರು ಪದ್ಯಗಳನ್ನು ಇಲ್ಲಿ ನೋಡಬಹುದು.[1] ಈ ಶಾಸನದ ಕರ್ತೃ ರಾಮಾಯಣ ತಿರುಮಲೆಯಾಚಾರ್ಯ. ಈತನು ಚಿಕ್ಕದೇವರಾಜನ ಆಸ್ಥಾನದಲ್ಲಿದ್ದನೆಂದು ಶ್ರೀಹಯವದನರಾಯರು ಸ್ಥಾಪಿಸುತ್ತಾರೆ. (Hist. of Mysore. ಪುಟ 448.) ಆದರೆ ಕವಿಚರಿತೆಕಾರರು ಈತನು ಕೃಷ್ಣರಾಜನ ಆಸ್ಥಾನದಲ್ಲಿದ್ದನೆಂದು ಹೇಳುತ್ತಾರೆ. ಕವಿಚರಿತೆಕಾರರ ಅಭಿಪ್ರಾಯವನ್ನೇ ನಾವೂ ಒಪ್ಪುತ್ತೇವೆ. ಶ್ರೀಹಯವದನರಾಯರು ಕೊಡುವ ಶಾಸನಾಧಾರ (ಮೈಸೂರು ಚರಿತ್ರೆ ಪುಟ 450) ಅಷ್ಟು ಪ್ರಬಲವಾಗಿಲ್ಲ. ರಾಮಾಯಣ ತಿರುಮಲಾರ್ಯನು, ಆದ್ದರಿಂದ, ಚಿಕ್ಕದೇವನ ಆಸ್ಥಾನಕವಿಯಲ್ಲವೆಂದು ನಮ್ಮ ಅಭಿಪ್ರಾಯ. ಕಂಠೀರವ ನರಸರಾಜ (ಎರಡನೆಯ)ನ ಮಗನಾದ ಕೃಷ್ಣರಾಜನ ಆದೇಶದಂತೆ ಈ ಶಾಸನವನ್ನು ರಚಿಸಿದನು. ಶ್ರೀರಂಗಪಟ್ಟಣದ 14ನೆಯ ಶಾಸನದಲ್ಲಿ ವರ್ಣಿತವಾಗಿರುವ, ಚಿಕ್ಕದೇವರಾಜನ ವೃತ್ತಾಂತದ ಭಾಗಗಳು, ಈ 64ನೆಯ ಶಾಸನದಲ್ಲಿ ಉದ್ಧೃತವಾಗಿವೆ.[2] ಅಷ್ಟೇ ಅಲ್ಲದೆ ಈ ಶಾಸನದಲ್ಲಿ ಕಂಡುಬರುವ ನಾಲ್ಕಾರು ಸಾಲುಗಳು ತಿರುಮಲಾರ್ಯನ ಚಾಮರಾಜನಗರದ 92ನೇ ಶಾಸನ

---

1. E.C. ಅದೇ : *SR.* 64. (ಶ್ರೀರಂಗಪಟ್ಟಣದ 64ನೇ ಶಾಸನ) —(ಅಪ್ರತಿಮ ವೀರಚರಿತಂ)

ಸಾಲು 53-56. (1) ಜಗದೊಳ್ ಶ್ರೀ ಚಿಕದೇವನಿಂ ಪಿರಿಯರಿಲ್ಲೆತ್ತಾನುಮುಂ... (1) –do–ಪದ್ಯ II-1.

,, 63-66 (2) ವಲಿತಾರಾತಿ ಶಿರಾಜ್ಯುರ ಪ್ರತಿಸರಾಲಂಕಾರ...(2) –do–III-2.

,, 66-69 (3) ದಳಿತಾರೀಭಶಿರ: ಕಪಾಲತತಿ ಭೃಂಗಾರ....(3) –do–II-3.

,, 71-74 (4) ಮಯನೋ ಶಂಬರನೋದಶಾಸ. ಸುತನೋ...(4) –do–III-2.

,, 85-87 (5) ಗಂಡರಗಂಡನುಕ್ಕುವರ ಮುಕ್ಕಳ ಗಂಡ (5) –do–I-2.

,, 76-80 (6) ಒಂದು ದೆಸೆಯೊಳ್ ತುರುಕರೊನ್ದು (6) ಚಿ. ಚಿನ್ನಪ 11 ಪದ್ಯ ಗೀತಗೋಪಾಲ ಪುಟ 68

,, 80–82 (7) ಬಳಸಿಯೊಂದುಗೂಡಿ....(7) ಚಿ. ಬಿನ್ನಪ. 8ನೇ ಪದ್ಯ.

2. ಎ. ಕ. ಅದೇ : 64ನೇ ಶಾಸನದ 20 ರಿಂದ 53 ರವರೆಗಿನ ಸಾಲುಗಳು ಶ್ರೀ 14ನೇ ಶಾಸನದ 4 ರಿಂದ 32ನೇ ಸಾಲುಗಳಿಂದ ಎತ್ತಿಕೊಂಡವುಗಳು. ಹಾಗೆಯೇ 74 ರಿಂದ 76 ಮತ್ತು 82 ರಿಂದ 84 ನೇ ಸಾಲುಗಳು 14ನೇ ಶಾಸನದ 67 ರಿಂದ 74ನೇ ಸಾಲುಗಳಿಂದ ಎತ್ತಿಕೊಂಡವು.

ದಿಂದ ತೆಗೆದುಕೊಂಡವುಗಳು.[1] ಹೀಗೆ ಶಾಸನ ಕವಿಯಾಗಿ, ಗ್ರಂಥಕರ್ತನಾಗಿ ತಿರುಮಲಾರ್ಯನು ಪ್ರಸಿದ್ಧಿಗೆ ಬಂದುದಲ್ಲದೆ ಅವನ ನಂತರ ಬಂದ ರಾಮಾಯಣ ತಿರುಮಲಾರ್ಯನೂ ಸಹ ತನ್ನ ಶಾಸನವನ್ನು ಬರೆಯುವಲ್ಲಿ, ಚಿಕ್ಕದೇವರಾಜನ ವಿಷಯವನ್ನು ವರ್ಣಿಸುವಲ್ಲಿ, ಅಷ್ಟು ಭಾಗವನ್ನು ತಿರುಮಲಾರ್ಯನನ್ನು ಸ್ವಲ್ಪ ಮಟ್ಟಿಗಾದರೂ ಅನುಸರಿಸಿರುವುದು ಗಮನಾರ್ಹವಾದ ಸಂಗತಿಯೆಂದು ತೋರುತ್ತದೆ. ಇದರಿಂದ ತಿರುಮಲಾರ್ಯನ ಕೈವಾಡ ಶ್ರೀರಂಗಪಟ್ಟಣದ 14ನೆಯ ಶಾಸನವನ್ನು ರಚಿಸುವಾಗ ಇದ್ದಿರಬೇಕು ಇಲ್ಲವೆ ಇನ್ನಾವನಾದರೂ ಶಾಸನಕವಿ ತಿರುಮಲಾರ್ಯ ಶಾಸನದ ಹಲವಾರು ಸಾಲುಗಳನ್ನು ತಂದು ಇಲ್ಲಿ ಸೇರಿಸಿರಬೇಕು. ಸಾಮಾನ್ಯವಾಗಿ ಶಾಸನಗಳಲ್ಲಿ ಹೀಗೆ ಕಂಡುಬರುವುದು ಸ್ವಾಭಾವಿಕ. ಶ್ರೀರಂಗಪಟ್ಟಣದ 14ನೆಯ ಶಾಸನವು ತಿರುಮಲಾರ್ಯನ ಎರಡು ತಾಮ್ರಶಾಸನಗಳಿಗಿಂತಲೂ ಈಚಿನದು ಎಂಬ ಕಾರಣದಿಂದ ಮೇಲಿನ ಮಾತುಗಳನ್ನು ಹೇಳಲಾಗಿದೆ.

ತಿರುಮಲಾರ್ಯನ ಸಂಸ್ಕೃತ ಕೃತಿಗಳು :

ತಿರುಮಲಾರ್ಯನು 'ಚಿಕದೇವರಾಯ ವಂಶಾವಳಿ' 'ಚಿಕದೇವರಾಜವಿಜಯ' 'ಅಪ್ರತಿಮವೀರಚರಿತೆ' ಮುಂತಾದ ಗ್ರಂಥಗಳನ್ನು ಕನ್ನಡದಲ್ಲಿ ಬರೆದಿರುವುದು ನಮಗೆ ತಿಳಿದಿರುವ ವಿಷಯ. ಇಷ್ಟೇ ಅಲ್ಲದೆ ಈತನು ಸಂಸ್ಕೃತದಲ್ಲಿ ಪಂಡಿತನಾಗಿದ್ದರಿಂದ ಅನೇಕ ಸ್ತೋತ್ರಗಳನ್ನು ಸಂಸ್ಕೃತದಲ್ಲಿ ರಚಿಸಿರುವುದು ಸಹಜವೆಂದು ತೋರುತ್ತದೆ. ಆ ಸ್ತೋತ್ರಗಳ ಕೊನೆಯಲ್ಲಿ ತಿರುಮಲಾರ್ಯನು ತನ್ನ ಹೆಸರನ್ನು ಸಂಸ್ಕೃತದಲ್ಲಿ ಶ್ರೀ ಶೈಲಾರ್ಯನೆಂದೋ ಅಥವಾ ಶ್ರೀ ಶೈಲ ಸೂರಿಯೆಂದೋ ಕರೆದುಕೊಂಡಿರುವುದು ಗೊತ್ತಾಗುತ್ತದೆ.[2] ಈತನ ಸ್ತೋತ್ರ (ಸ್ತವ)ಗಳು ಚಿಕ್ಕ ಚಿಕ್ಕವು. ಅವನು ಬರೆದಿರುವ ಸ್ತೋತ್ರಗಳಲ್ಲಿ ದೊರೆತಿರುವುದನ್ನು ಈ ಕೆಳಗೆ ನೋಡಬಹುದು.[3]

---

1. ಎ.ಕ. 3 (i) SR. 64.
   ಶ್ರೀರಂಗಪಟ್ಟಣದ 64ನೇ ಶಾಸನದ 20 ರಿಂದ 23ನೇ ಸಾಲುಗಳು ಚಾಮರಾಜನಗರದ 92ನೇ ಶಾಸನದ (ಎ.ಕ. 4. ii) 6 ರಿಂದ 9ನೇ ಸಾಲುಗಳಿಂದ ತೆಗೆದುಕೊಂಡವು. ಮತ್ತು 64ನೇ ಶಾಸನದ 37 ರಿಂದ 39ನೇ ಸಾಲುಗಳು ಚಾಮರಾಜನಗರದ 92ನೇ ಶಾಸನದ 13 ರಿಂದ 17ನೇ ಸಾಲುಗಳಿಂದ ಎತ್ತಿಕೊಂಡವು 64ನೇ ಶಾಸನದ 48ನೇ ಸಾಲಿನಲ್ಲಿ ಬರುವ 'ಅಸೂತ ಚಿಕದೇವೇಂದ್ರ ಕಂಠೀರವ ಮಹೀಪತಿ' ಎನ್ನುವ ವಾಕ್ಯ 92ನೇ ಶಾಸನದ 22–23ನೇ ಸಾಲಿನಲ್ಲಿ ಸಿಗುತ್ತದೆ.
2. *History of Mysore* : Hayavadana Rao. pp : 427–28.
3. ಅದೇ : ಪುಟ 427–28.

ಮೇಲುಕೋಟೆಯ ಚಲುವನಾರಾಯಣ ಸ್ವಾಮಿಯನ್ನು ಕುರಿತು ಎಪ್ಪತ್ತೊಂಬತ್ತು ಪದ್ಯಗಳಲ್ಲಿ ಸ್ತುತಿಸಿರುವುದನ್ನು ನಾವು 'ಶ್ರೀ ಯದುಗಿರಿ ನಾರಾಯಣಸ್ತವ'ದಲ್ಲಿ ಕಾಣಬಹುದು. ಅಮ್ಮನವರನ್ನು ಕವಿಯು ಇಪ್ಪತ್ನಾಲ್ಕು ಪದ್ಯಗಳಲ್ಲಿ ಪ್ರಾರ್ಥಿಸಿ 'ಶ್ರೀ ಯದುಗಿರಿ ನಾಯಕಿಸ್ತವ' ಎಂದು ಹೆಸರಿಸಿದ್ದಾನೆ. ಶ್ರೀರಂಗಪಟ್ಟಣದ ಲಕ್ಷ್ಮೀನರಸಿಂಹ ಸ್ವಾಮಿಯ ಮೇಲೆ ರಚಿಸಿ ಬರೆದಿರುವ ಇಪ್ಪತ್ಮೂರು ಪದ್ಯಗಳ ಗ್ರಂಥ 'ಶ್ರೀಲಕ್ಷ್ಮೀನೃಸಿಂಹಸ್ತವ.' ನಾಗಮಂಗಲದ ಸೌಮ್ಯಕೇಶವದೇವರನ್ನು ಹೊಗಳಿ 'ಶ್ರೀಮಂಜುಳ ಕೇಶವ ಸ್ತವ'ವನ್ನು ಇಪ್ಪತ್ತೈದು ಪದ್ಯಗಳಲ್ಲಿ ರಚಿಸಿದ್ದಾನೆ. ಚಿಕ್ಕದೇವರಾಜ ಒಡೆಯನ ಆರಾಧ್ಯ ದೈವವಾದ ಹರದನ ಹಳ್ಳಿಯ ಅಪ್ರತಿಮ ರಾಜಗೋಪಾಲ ಸ್ವಾಮಿಯನ್ನು ಕುರಿತು ಹದಿನೆಂಟು ಪದ್ಯಗಳಲ್ಲಿ 'ಶ್ರೀ ಅಪ್ರತಿಮ ರಾಜಗೋಪಾಲಸ್ತವ' ಬಂದಿದೆ. ಮೂವತ್ತೆರಡು ಪದ್ಯಗಳಲ್ಲಿ ತಿರುಮಲಾರ್ಯನು ತನ್ನ ಕುಲದೇವರಾದ ಗೋಪಾಲನನ್ನು 'ಶ್ರೀ ಗೋಪಾಲಸ್ತವ'ದಲ್ಲಿ ಸ್ತುತಿಸಿದ್ದಾನೆ. ಕೊನೆಯದಾಗಿ ಎಪ್ಪತ್ತು ಪದ್ಯಗಳಲ್ಲಿ ಕುಂಡಿಣೀ ನದಿಯ ದಡದಲ್ಲಿರುವ ದೇವನಗರದ ಪರವಾಸುದೇವರನ್ನು ಪ್ರಾರ್ಥಿಸಿ 'ಶ್ರೀಪರವಾಸುದೇವಸ್ತವ'ವನ್ನು ವಿರಚಿಸಿದ್ದಾನೆ. 'ಶ್ರೀವೈಷ್ಣವ ಭಕ್ತಿ ಸಾಹಿತ್ಯದ ಚಿಕುಪಾಧ್ಯಾಯನ ಸಾಂಗತ್ಯಗಳಂತೆ ಈತನ ಸ್ತೋತ್ರಗಳು ಪ್ರಮುಖವಾದ ಸ್ಥಾನವನ್ನಲಂಕರಿಸುತ್ತವೆ'[1] ಎನ್ನುವುದು ಯೋಗ್ಯ ವಿಮರ್ಶೆ. ಪರವಾಸುದೇವ ಸ್ತೋತ್ರದಲ್ಲಿ ಬರುವ ಹನ್ನೆರಡು ಪದ್ಯಗಳನ್ನು ತಿರುಮಲಾರ್ಯನು ತನ್ನ 'ಚಿಕ್ಕದೇವರಾಜ ವಿಜಯ'ದಲ್ಲಿ ಬಳಸಿಕೊಂಡಿದ್ದಾನೆ. ಚಿಕ್ಕದೇವರಾಜನು ಮಣಿಪೀಠದಲ್ಲಿ ಕುಳಿತುಕೊಂಡು ದೇವರನ್ನು ಧ್ಯಾನಿಸುವ ಸಂದರ್ಭವನ್ನು ತಿರುಮಲಾರ್ಯನು ಹೀಗೆ ಚಿತ್ರಿಸುತ್ತಾನೆ. 'ಆಪರವಾಸುದೇವನಿರವಂ ನಿರವಿಸಿ ರಸಪಾರವಶ್ಯದಿಂ ಸಕ್ಕದದೊಳ್ ಪೊಗಳ್ದಂ'. ಆ ಮುಂದಿನ ಸ್ತೋತ್ರಗಳು ಪರವಾಸುದೇವಸ್ತೋತ್ರದಲ್ಲಿ ವರ್ಣಿತವಾಗಿವೆ.[2] ಒಟ್ಟಿನಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ಈತನಿಗೆ ಉತ್ಕೃಷ್ಟವಾದ ಕವಿತೆಯನ್ನು ರಚಿಸುವ ಶಕ್ತಿ ಸಾಮರ್ಥ್ಯಗಳಿದ್ದಿತೆಂಬುದನ್ನು ಅಲ್ಲಗಳೆಯುವಂತಿಲ್ಲ.

1. ಅದೇ : ಪುಟ 428.
2. ಚಿಕದೇವರಾಜ ವಿಜಯ V–136.

ಎ. ವಿ. ಪ್ರಸನ್ನ

ಮಹಾಭಾರತ—'ಪಂಪನ ಲೌಕಿಕದೃಷ್ಟಿಗೆ ಕುಮಾರವ್ಯಾಸನ ಪ್ರತ್ಯುಕ್ತಿ'

ಪಂಪ, ಕುಮಾರವ್ಯಾಸರಿಬ್ಬರೂ ಕನ್ನಡ ಸಾಹಿತ್ಯದ ಮಹಾಮೇರುಗಳು. ಇವರಿಬ್ಬರೂ ರಚಿಸಿರುವ ಮಹಾಭಾರತಕ್ಕೆ ಆಕರವಾಗಿರುವುದು ವ್ಯಾಸಭಾರತವೇ. ಪಂಪನು, "ವ್ಯಾಸ ಮುನೀಂದ್ರರುಂದ್ರ ವಚನಾಮೃತವಾರ್ಧಿಯನೀಸುವೆನ್," ಎಂದು ಹೇಳಿಕೊಂಡು, ತನ್ನ 'ವಿಕ್ರಮಾರ್ಜುನ ವಿಜಯ'ವನ್ನು ಪ್ರಾರಂಭಿಸಿದ್ದರೆ, ನಾರಣಪ್ಪನು ತನ್ನ ಹೆಸರನ್ನೇ "ಕುಮಾರ ವ್ಯಾಸ"ನೆಂದುಕೊಂಡು ವ್ಯಾಸರಿಗೆ ತನ್ನ ಗೌರವ ಸಮರ್ಪಣೆ ಮಾಡಿದ್ದಾನೆ. ಹೀಗಿದ್ದರೂ ಪಂಪ–ಕುಮಾರವ್ಯಾಸರು ಮಹಾಭಾರತದ ಕಥೆಯನ್ನು ಕಂಡಿರುವ ದೃಷ್ಟಿ ಬೇರೆಯೇ ಆಗಿದೆ. ಭಾರತದೇಶದಲ್ಲಿ ಈ ಕಥೆಯನ್ನು 'ಪಂಚಮ ವೇದ', ಎಂದೇ ಪರಿಗಣಿಸಿರುವುದನ್ನೂ ಇದೇ ಪೂಜ್ಯ ಭಾವನೆಯು ಈ ದಿನದಲ್ಲೂ ಉಳಿದುಕೊಂಡೇ ಬಂದಿರುವುದನ್ನೂ ಗಮನಿಸಿದಾಗ, ಈ ಕಾವ್ಯಕ್ಕೆ ನಮ್ಮವರು ನೀಡಿರುವ ಸ್ಥಾನದ ಕಲ್ಪನೆ ಬಂದೀತು. ಇಂತಹ ಪಂಚಮ ಕೃತಿಯನ್ನು ಕುಮಾರವ್ಯಾಸನು ಸಹ ಅತ್ಯಂತ ಪೂಜ್ಯ ಭಾವನೆಯಿಂದಲೇ ಕನ್ನಡದಲ್ಲಿ ರಚಿಸಿದ್ದಾನೆ. ಆದ್ದರಿಂದಲೇ ಇವನಿಗೆ ಕೃಷ್ಣಭಕ್ತಿಯ ಪ್ರಚಾರವೇ ಮುಖ್ಯ ಗುರಿಯಾಗಿರಬಹುದಾದರೂ ಅವನು, "ಚೋರ ನಿಂದಿಸಿ ಶಶಿಯ ಬೈದೊಡೆ, ಕ್ಷೀರವನು ಕ್ಷಯರೋಗಿ ಹಳಿದೊಡೆ, ವಾರಣಾಸಿಯ ಹೆಳವ ನಿಂದಿಸಿ ನಕ್ಕರೇನಹುದೋ.....ಭಾರತದ ಕಥನ ಪ್ರಸಂಗವ ಕ್ರೂರಕರ್ಮಿಗಳೆತ್ತಬಲ್ಲರು ?," ಎಂದು ಬಹು ಕಠಿಣವಾಗಿ ಹೇಳುವ ಆವಶ್ಯಕತೆ ಏನಿತ್ತು ? ಯಾರನ್ನು ಕುರಿತು ಕುಮಾರವ್ಯಾಸನ ಈ ಕಠೋರ ನುಡಿ ? ಭಾರತದ ಕಥನ ಪ್ರಸಂಗವನ್ನು ಘೋರ ರೌರವವನ್ನು ಕೆಡಿಸುವ ಸಾಧನವೆಂದು ತಿಳಿಯದೇ ಅದನ್ನು ಅವಹೇಳನ ಮಾಡಿದವರು ಯಾರು ? ಈ ಪ್ರಶ್ನೆಗಳಿಗೆಲ್ಲಾ ಉತ್ತರಗಳನ್ನು ಪಂಪಭಾರತದಲ್ಲಿ ಕಾಣಬಹುದಾಗಿದೆ.

ಕುಮಾರವ್ಯಾಸನ ಅಪ್ರತಿಮ ಕೃಷ್ಣಭಕ್ತಿಯನ್ನೂ ಭಾರತದ ಕಥನಪ್ರಸಂಗದ ಬಗ್ಗೆ, ಅದರ ಧಾರ್ಮಿಕ ವಿಚಾರಗಳ ಬಗ್ಗೆ, ಅವನಿಗಿರುವ ಭಕ್ತಿಶ್ರದ್ಧೆಗಳನ್ನೂ

ಕೇಳಿಕಿದಂತಾಗುವುದು, ಪಂಪನು, ಪುಣ್ಯಚರಿತೆಯಾದ ಮಹಾಭಾರತದ ಕಥೆಯನ್ನು ನಿರ್ವಹಿಸಿರುವ ರೀತಿ. ಈ ಭಾರತ ಕಥಾಮೃತವನ್ನು ಪಂಪನು "ಕಥೆಯ ಮೆಯ್ಗಿಡಲೀಯದೆ" ಹೇಳುತ್ತೇನೆಂದು ಆರಂಭಿಸಿದರೂ ಅನೇಕ ಸಂದರ್ಭಗಳಲ್ಲಿ ಕಥೆಯ ಸ್ವರೂಪವನ್ನೇ ಬದಲಾಯಿಸಿರುವುದು ಕುಮಾರವ್ಯಾಸನ ಅಸಮಾಧಾನಕ್ಕೆ ಕಾರಣವಾಗಿ, ಪಂಪನಿಗೆ ಸೂಕ್ತ ಉತ್ತರಗಳನ್ನು ನೀಡುವುದಕ್ಕಾಗಿಯೋ ಎಂಬಂತೆ ಅವನು 'ಕರ್ಣಾಟ ಭಾರತ ಕಥಾಮಂಜರಿ,'ಯನ್ನು ರಚಿಸಿದ್ದಾನೆ. ಈ ಮಾತಿಗೆ ಆಧಾರಗಳನ್ನು ಕುಮಾರವ್ಯಾಸನ ಕಾವ್ಯದಲ್ಲಿಯೇ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಪಂಪನು ತನ್ನ 'ವಿಕ್ರಮಾರ್ಜುನ ವಿಜಯ'ವನ್ನು ರಚಿಸಿ, ಅಲ್ಲಿ—"ಬೆಳಗುವೆ ನಿಲ್ಲಿ ಲೌಕಿಕಮನ್, ಅಲ್ಲಿ ಜಿನಾಗಮಮಂ"—ಎಂದು ಹೇಳಿರುವುದು "ಪುಣ್ಯ ಚರಿತವಿದು" ಎಂದು ನಂಬಿದ ಕುಮಾರವ್ಯಾಸನ ನಂಬಿಕೆಗೆ ಪೆಟ್ಟು ಬಿದ್ದಂತಾಗಿದೆ. ಪಂಪನು ಜೈನನಾದುದರಿಂದ ಅವನ ಮಟ್ಟಿಗೆ ಭಾರತವನ್ನು ಲೌಕಿಕವೆಂದೂ, ಆದಿ ಪುರಾಣವನ್ನು ಜಿನಾಗಮವನ್ನು ಬೆಳಗುವ ಕಾವ್ಯವೆಂದು ಹೇಳಿದ್ದರೂ ಸಹ, ಭಾರತ ದೇಶದಲ್ಲಿ, ಮಹಾಭಾರತಕ್ಕೆ ಇರುವ ಪೂಜ್ಯ ಸ್ಥಾನವು ಅದರ ಲೌಕಿಕ ಗುಣದಿಂದಲ್ಲದೇ, ಅದರ ಧಾರ್ಮಿಕ ಗುಣದಿಂದ ಬಂದುದಾಗಿದೆ. ಪಂಪನ ಈ "ಲೌಕಿಕ ವ್ಯಾಖ್ಯಾನಕ್ಕೆ" ಕುಮಾರವ್ಯಾಸನ ಉತ್ತರವನ್ನು ನೋಡಿ :

> ತಿಳಿಯ ಹೇಳುವೆ ಕೃಷ್ಣ ಕಥೆಯನು ಇಳೆಯ ಜಾಣರು ಮೆಚ್ಚುವಂತಿರೆ
> ನೆಲೆಗೆ ಪಂಚಮ ಶೃತಿಯನೊರೆವೆನು ಕೃಷ್ಣ ಮೆಚ್ಚಲಿಕೆ
> ಹಲವು ಜನ್ಮದ ಪಾಪರಾಶಿಯ ತೊಳೆವ ಜಲವಿದು
> ಶ್ರೀಪದಾಗಮ ಕುಲಕೆ ನಾಯಕ ಭಾರತಾಕೃತಿ ಪಂಚಮ ಶೃತಿಯ.

ಪಂಪನು ಹೇಳಿದಂತೆ ಇದು ಲೌಕಿಕ ಕಾವ್ಯವಲ್ಲ. ಇದು ಕೃಷ್ಣಕಥೆ. ಪಾಪರಾಶಿಯನ್ನು ತೊಳೆಯುವ ತೀರ್ಥ. ಆಗಮ ಕುಲಕ್ಕೇ ನಾಯಕನಂತಿರುವ ಐದನೇ ವೇದವೇ ಈ ಭಾರತ—ಎಂಬ ಕುಮಾರವ್ಯಾಸನ ಪ್ರತಿಯೊಂದು ಮಾತುಗಳು ಸಹ ಪಂಪನ ಹೇಳಿಕೆಗೆ ನೀಡಿದ ಪ್ರಬಲವಾದ, ಸಮರ್ಥವಾದ ಪ್ರತ್ಯುತ್ತರಗಳಾಗಿವೆ.

ತಾನು ಭಾರತದ ಕಥೆಯನ್ನು ಹೇಳಲು ಕಾರಣವನ್ನು ತಿಳಿಸುತ್ತಾ ಪಂಪನು, "ವರ್ಣಕಂ ಕತೆಯೊಳೊಡಂಬಡಂ ಪಡೆಯೆ, ಪೇಳ್ವೊಡೆ ಪಂಪನೆ ಪೇಳ್ಗುಮೆಂದು ಪಂಡಿತರೆ ತಗುಳ್ದು ಬಿಚ್ಚಳಿಸೆ ಪೇಳಲೊಡರ್ಚಿದೆನೀ ಪ್ರಬಂಧಮಂ," ಎಂದು ಹೇಳುವಲ್ಲಿ ಪಂಡಿತರಿಗಾಗಿ ಅರಿಕೇಸರಿಯ ಆದೇಶದಂತೆ, ("ಆತಂಗರಿಕೇಸರಿ ಸಂಪ್ರೀತಿಯೆ ಬಳಿಯಟ್ಟೆ, ಪಿರಿದನಿತ್ತು ನಿಜಾಭಿಖ್ಯಾತಿಯನಿಳೆಯೊಳ್ ನಿರಿಸಲ್ಕೀತೆರದಿತಿಹಾಸ ಕಥೆಯನೊಪ್ಪಿಸೆ ಕುರಿತಂ") ರಚಿಸಿದುದಾಗಿ ತಿಳಿಸುತ್ತಾನೆ.

ಇದಕ್ಕೆ ಉತ್ತರವಾಗಿ ಕುಮಾರವ್ಯಾಸನು, "ಪದದ ಪ್ರೌಢಿಯ ನವರಸಂಗಳ ಉದಿತವೆನುವಭಿದಾನ ಭಾವವ ಬೆದಕಲಾಗದು ಬಲ್ಲಿ ಪ್ರೌಢರುಮೀ ಕಥಾಂತರಕೆ.

ಇದು ವಿಚಾರಿಸೆ ಬರಿಯ ತುಳಸಿಯ ಉದಕದಂತಿರೆ ಇಲ್ಲಿ ನೋಳ್ಪುದು-ಪದುಮನಾಭನ ಮಹಿಮೆ ಧರ್ಮವಿಚಾರ ಮಾತ್ರವನು '', ಎಂದು ತಿಳಿಸುತ್ತಾ, ತಾನು ಈ ಕಾವ್ಯವನ್ನು ಪಂಪನಂತೆ ಪಂಡಿತರಿಗಾಗಿ, ರಾಜನಿಗಾಗಿ ಬರೆದುದಲ್ಲವೆಂದೂ ಈ ಕಾವ್ಯದಲ್ಲಿ ಯಾವ ಪಂಡಿತನು ಸಹ ಪದದ ಪ್ರೌಢಿಮೆಯನ್ನಾಗಲೀ, ನವರಸಗಳನ್ನಾಗಲೀ, ಮತ್ತಿತರ ಕಾವ್ಯದ ಲಕ್ಷಣಗಳನ್ನಾಗಲೀ ಬೆದಕಬಾರದೆಂದು ಎಚ್ಚರಿಸುತ್ತಾ, ಇದನ್ನು ತಾನು ಪ್ರೌಢಕಾವ್ಯವೆಂದು ಬರೆಯುತ್ತಿಲ್ಲವೆಂದೂ ಕೇವಲ ಕೃಷ್ಣಕಥೆಯಾಗಿ ಮಾತ್ರ ಈ ಗ್ರಂಥವನ್ನು ರಚಿಸಿರುವುದಾಗಿಯೂ ಇದನ್ನು ಕೇವಲ ತುಳಸಿಯ ಉದಕದಂತೆ ಪರಿಗಣಿಸಿ, ಪದುಮನಾಭನ ಮಹಿಮೆ ಮತ್ತು ಧರ್ಮವಿಚಾರವನ್ನು ಮಾತ್ರ ಈ ಕಾವ್ಯದಲ್ಲಿ ನೋಡಬೇಕೆಂದು ಸ್ಪಷ್ಟಪಡಿಸುತ್ತಾನೆ.

'ತುಳಸಿಯ ಉದಕ' ವೆಂಬ ಅವನ ಮಾತುಗಳು ಬಹಳ ಅರ್ಥಪೂರ್ಣವಾಗಿದೆ. ಭಕ್ತಿಯಿಂದ ಸ್ವೀಕರಿಸಿದರೆ ಅದು ತೀರ್ಥವಾಗುತ್ತದೆ. ಭಕ್ತಿಯಿಲ್ಲದವನು ಸ್ವೀಕರಿಸಿದರು ಸಹ ಅದು ಅವನಿಗೆ ಔಷಧವಾಗಿ ಉಪಯುಕ್ತವಾಗುತ್ತದೆ. ಅದಕ್ಕೇ ಕುಮಾರವ್ಯಾಸನು ಈ ಮಹಾಭಾರತವೆಂಬ ತುಳಸಿಯ ಉದಕದಲ್ಲಿ ಪದುಮನಾಭನ ಮಹಿಮೆ ಮತ್ತು ಧರ್ಮವಿಚಾರಗಳೆರಡನ್ನು ಮಾತ್ರ ನೋಡಬೇಕಾಗಿ ತಿಳಿಸಿರುವುದು. ಪಂಪನು ತನ್ನ ಓದುಗರು ಪಂಡಿತರಾಗಬೇಕೆಂದು ಬಯಸಿದರೆ, ಕುಮಾರವ್ಯಾಸನು ತನ್ನ ಕೇಳುಗರು ಸನಕಾದಿಗಳು, ಜಂಗಮ ಜನಾರ್ದನರೆಂದು ತಿಳಿಸುತ್ತಾನೆ.

ಪಂಪನ ಪಾಂಡಿತ್ಯ ಪ್ರೇಮಕ್ಕೆ ಹಾಗೂ ಪುಣ್ಯಚರಿತೆಯನ್ನು ಪಂಡಿತ ಕಾವ್ಯವೆಂದುದಕ್ಕೆ ನೀಡಿದ ಈ ಉತ್ತರದಿಂದ ಕುಮಾರವ್ಯಾಸನಿಗೆ ತೃಪ್ತಿಯಾದಂತೆ ಎನಿಸುವುದಿಲ್ಲ. ಅವನು ಪುನಃ ತನ್ನ ಕಾವ್ಯವು, "ಚಾರು ಕವಿತೆಯ ಬಳಕೆಯಲ್ಲ, ವಿಚಾರಿಸುವೊಡಳವಲ್ಲ'', ಎಂದು ತಿಳಿಸುತ್ತಾ, ಸುಂದರವಾದ ಕವಿತೆಯನ್ನು ಕಟ್ಟಲು ತಾನು ಈ ಗ್ರಂಥವನ್ನು ರಚಿಸಿಲ್ಲವೆಂದೂ ವೀರನಾರಾಯಣನೇ ನಿಜವಾದ ಕವಿಯೆಂದೂ ತಾನು ಕೇವಲ ಲಿಪಿಕಾರನೆಂದೂ ತಿಳಿಸಿ, ತನ್ನ ಕಾವ್ಯಕ್ಕೆ ಕರ್ತೃ, ಯಜಮಾನ, ಸ್ಫೂರ್ತಿ ಎಲ್ಲವೂ ವೀರನಾರಾಯಣನೇ ಎಂದು ಸ್ಪಷ್ಟಪಡಿಸುತ್ತಾ, ಪಂಪನು ತನ್ನ ರಾಜನ ಆದೇಶದಂತೆ ಕಾವ್ಯರಚನೆ ಮಾಡಿದೆ, ಎಂದು ಹೇಳಿಕೊಂಡಿರುವುದನ್ನು ಸೂಚ್ಯವಾಗಿ ಛೇಡಿಸುತ್ತಾನೆ.

ಈ ಭಾರತವು ಲೋಕಪೂಜ್ಯ ಎಂದು ಪಂಪನೇ ಹೇಳಿದರೂ ಅದಕ್ಕೆ ಅವನು ನೀಡಿರುವ ಕಾರಣವು ಕುಮಾರವ್ಯಾಸನ ದೃಷ್ಟಿಯಲ್ಲಿ ಸಮಂಜಸವಲ್ಲ. ಪಂಪನ ಈ ಹೇಳಿಕೆಯನ್ನು ನೋಡಿ :

ಚಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ, ಗಂಡಿನೊಳ್ ಭೀಮಸೇನಂ,
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ, ಚಾಪ ವಿದ್ಯಾಬಲದೊಳ್
ಕುಂಭೋದ್ಭವಂ, ಸಾಹಸದ ಮಹಿಮೆಯೊಳ್ ಫಲ್ಗುಣಂ, ಧರ್ಮದೊಳ್
ನಿರ್ಮಲಚಿತ್ತಂ, ಧರ್ಮಪುತ್ರಂ ಮಿಗಿಲ್. ಇವರ್ಗಳಿನೀ ಭಾರತಂ ಲೋಕಪೂಜ್ಯಂ

ದುರ್ಯೋಧನನ ಛಲದಿಂದಾಗಲೀ ಮದ್ರೇಶನಾದ ಶಲ್ಯನ ಬಲದಿಂದಾಗಲೀ ಮತ್ತಿತರರ ವಿಶಿಷ್ಟಗುಣಗಳಿಂದಾಗಲೀ ಭಾರತವು ಪ್ರಖ್ಯಾತವಾದ ಕಥೆಯಾಗಬಹುದೇ ಹೊರತಾಗಿ, ಅದು ಲೋಕಪೂಜ್ಯವಾಗವುದಿಲ್ಲ. ಭಾರತವು ಲೋಕಪೂಜ್ಯವಾಗಿರುವುದು ಶ್ರೀ ಕೃಷ್ಣನ ಕಾರಣದಿಂದ. ಆದರೆ ಪಂಪನು ಉದ್ದೇಶಪೂರ್ವಕವಾಗಿ ಕೃಷ್ಣನನ್ನೇ ಬಿಟ್ಟು, ಇತರರನ್ನು ಆ ಸ್ಥಾನದಲ್ಲಿ ಸ್ಥಾಪಿಸಲು ಪ್ರಯತ್ನಿಸಿರುವುದಕ್ಕೆ ಕುಮಾರವ್ಯಾಸನು, "ತಿಳಿಯ ಹೇಳುವೆ ಕೃಷ್ಣ ಕಥೆಯನು," ಎಂದೇ ಹೇಳಿ ಶ್ರೀಕೃಷ್ಣನ ಕಾರಣದಿಂದಲೇ ಇದು ಲೋಕ ಪೂಜ್ಯವಾಯಿತೆಂದು ಸ್ಪಷ್ಟಪಡಿಸುತ್ತಾನೆ. ಅಲ್ಲದೇ ಅವನ ಕಾವ್ಯವು ಲೋಕಪೂಜ್ಯವಾಗುವುದಕ್ಕೆ, 'ಕಾವ್ಯಕ್ಕೆ ಗುರು' ವಾಗುವುದಕ್ಕೆ ಕಾರಣ, ಇದು ಅರಸುಗಳಿಗೆ ವೀರ, ದ್ವಿಜರಿಗೆ ಪರಮವೇದದ ಸಾರ, ಯೋಗೀಶ್ವರರ ತತ್ತ್ವವಿಚಾರ, ಮಂತ್ರಿಜನ ಬುದ್ಧಿಗುಣ, ವಿರಹಿಗಳ ಶೃಂಗಾರ, ವಿದ್ಯಾಪರಿಣತರಲಂಕಾರ ಮುಂತಾದ ಸಮಸ್ತ ಪ್ರಯೋಜನಗಳನ್ನು ನೀಡುವುದೇ ಆಗಿದೆ.

ಅದೂ ಅಲ್ಲದೇ, ಈಗಾಗಲೇ ಪ್ರಸ್ತಾಪಿಸಿರುವಂತೆ ಕುಮಾರವ್ಯಾಸನು 'ತಿಳಿಯ ಹೇಳುವೆ ಕೃಷ್ಣ ಕಥೆಯನು,' ಎಂದೇ ಆರಂಭಿಸುತ್ತಾನೆ. ಅವನೇ ಕುಮಾರವ್ಯಾಸ ಭಾರತದ ನಾಯಕ. ದುರ್ಯೋಧನನಾಗಲೀ ಕರ್ಣನಾಗಲೀ ಧರ್ಮರಾಯನಾಗಲೀ ಅಥವಾ ಮತ್ತಾರೆ ಆಗಲೀ ಅಲ್ಲ.

ಪಂಪನು, ಭಾರತವು ಲೋಕಪೂಜ್ಯವಾಗಲು ಕಾರಣಕರ್ತರಾದ ಮಹಾಭಾರತದ ಶ್ರೇಷ್ಠ ವ್ಯಕ್ತಿಗಳನ್ನು ಪಟ್ಟಿಮಾಡುವಾಗ, ಅಭಿಮನ್ಯು, ದ್ರೌಪದಿಯರಿಗೆ ಸ್ಥಾನವನ್ನು ನೀಡಿಲ್ಲ. ಆದರೆ ಕುಮಾರವ್ಯಾಸ ಭಾರತದಲ್ಲಿ ಈ ಎಲ್ಲರೊಂದಿಗೆ ಅಭಿಮನ್ಯು-ದ್ರೌಪದಿಯರ ಪಾತ್ರಗಳ ಚಿತ್ರಣ ಸಹ ಪಂಪನ ದೃಷ್ಟಿಯನ್ನು ವಿಸ್ತರಿಸುತ್ತದೆ.

ಕವಿತಾಗುಣವಿಲ್ಲದೆ ಕಾವ್ಯರಚನೆಯನ್ನು ಮಾಡುವ ಕುಕವಿಗಳ ವಿಚಾರದಲ್ಲಿ ಪಂಪನು ಹೇಳಿರುವ—"ಬೆಳ್ಗಳ ಕೃತಿಬಂಧಮುಂ ಬರೆಪಕಾರರ ಕೈಗಳ ಕೇಡು ನುಣ್ಣನಪ್ಪಳಕದ ಕೇಡು ಪೇಳಿಸಿದೊಡರ್ಥದ ಕೇಡೆನೆ ಪೇಳ್ದು ಬೀಗಿ ಪೊಟ್ಟಳಿಸಿ ನೆಗಳ್ತೆಗಾಟಿಸುವ ದುಷ್ಕವಿಯುಂ ಕವಿಯೆಂಬ ಲೆಕ್ಕಮೇ ?" ಎಂಬ ಮಾತುಗಳಿಗೆ ಕುಮಾರವ್ಯಾಸನ ಅಭಿಪ್ರಾಯವನ್ನು ನೋಡಿ :

ಹಲಗೆ ಬಳಪವ ಪಿಡಿಯದೊಂದಗ್ಗಳಿಕೆ, ಪದವಿಟ್ಟಳುಪದೊಂದಗ್ಗಳಿಕೆ
ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ, ಬಳಸಿ ಬರೆಯಲು
ಕಂಠಪತ್ರದ ಉಲುಹುಗೆಡದಗ್ಗಳಿಕೆಯೆಂಬೀ ಬಲುಹು ಗದುಗಿನ
ವೀರ ನಾರಾಯಣನ ಕಿಂಕರಗೆ

ಕುಕವಿಗಳು ಕಾವ್ಯ ರಚಿಸಿದರೆ ಅದನ್ನು ಪ್ರತಿಮಾಡುವವರ ಕೈಗಳಿಗೆ ತೊಂದರೆ, ಸುಣ್ಣಗೆ ಇರುವ ಓಲೆಗರಿಯೂ ಹಾಳು ಎಂಬುದಾಗಿ ಪಂಪ ಹೇಳಿದರೆ, ಕುಮಾರವ್ಯಾಸ ಹೇಳುತ್ತಾನೆ—ಹಲಗೆ, ಬಳಪವನ್ನು ಉಪಯೋಗಿಸಿ, ಪದ್ಯರಚಿಸಿ, ನಂತರ ಓಲೆಗರಿಯಲ್ಲಿ ಕೊರೆಯುವ ಕ್ರಮವೇ ತನ್ನದಲ್ಲ. ಅಷ್ಟೇ ಅಲ್ಲದೇ ಓಲೆಗರಿಯ ಸ್ವರೂಪ ಸ್ವಲ್ಪವೂ ಕೆಡದ ಅಗ್ಗಳಿಕೆ ತನ್ನದು. ಹೀಗೆ ಅನೇಕ ರೀತಿಯಲ್ಲಿ ಪಂಪನಿಗೆ ಸ್ಪಷ್ಟ ಉತ್ತರಗಳನ್ನು ಕುಮಾರವ್ಯಾಸನು ನೀಡಿರುವುದನ್ನು ಗಮನಿಸ ಬಹುದು.

ಲೌಕಿಕ ದೃಷ್ಟಿಯಿಂದಲೇ ರಚಿತವಾದ ಪಂಪ ಭಾರತದ 'ಫಲಶ್ರುತಿ'ಯನ್ನು ನೋಡಿ :

> ಕರಮುಳ್ಕರ್ತರ್ಣ ಸಮಸ್ತ ಭಾರತ ಕಥಾ ಸಂಬಂಧಮುಂ ಬಾಜಿಸಲ್
> ಬರೆಯಲ್ ಕೇಳಲೊಡರ್ಚುವಂಗನಿಂದರೊಳ್ ತನ್ನಿಷ್ಟಮಪ್ಪನ್ನಮುಂ
> ತ್ತರಮುಕ್ಕುಂ ಧೃತಿ ತುಷ್ಟಿ-ಪುಷ್ಟಿ ವಿಭವಂ ಸೌಭಾಗ್ಯ ಮಿಷ್ಟಾಂಗನಾ
> ಸುರತಂ ಕಾಂತಿಯುಗುಂತಿ ಶಾಂತಿ ವಿಭವಂ ಭದ್ರಂ ಶುಭಂ ಮಂಗಳಂ.

ಈ ಸಂಪೂರ್ಣ ಭಾರತ ಕಥಾಪ್ರಸಂಗವನ್ನು ಓದುವ, ಬರೆಯುವ, ಕೇಳುವವನಿಗೆ ತನ್ನಿಷ್ಟವಾದ ಉತ್ತರೋತ್ತರ ಅಭಿವೃದ್ಧಿ, ಧೃತಿ, ತುಷ್ಟಿ—ಪುಷ್ಟಿ, ಇಷ್ಟಾಂಗನಾ ಸುರತ ವೈಭವ, ಮಂಗಳಗಳು ಉಂಟಾಗುತ್ತವೆಂದು ಪಂಪನ ಆಶಯ.

ಪುಣ್ಯ ಚರಿತವಿದು, ಕೃಷ್ಣಚರಿತವಿದು, ಎಂದು ಈ ಭಾರತವನ್ನು ಕೇಳಿ ದವರಿಗೆ ಪಂಪನ ಫಲಶ್ರುತಿಯಲ್ಲಿ ಅರ್ಥವನ್ನು ಕಾಣಲಾಗುವುದಿಲ್ಲ. ಆದ್ದರಿಂದಲೇ ಇದನ್ನು ಸರಿಪಡಿಸಿ ಕುಮಾರವ್ಯಾಸನು,

> ವೇದ ಪಾರಾಯಣದ ಫಲ, ಗಂಗಾದಿ ತೀರ್ಥ ಸ್ನಾನ ಫಲ
> ಕೃಚ್ಛ್ರಾದಿ ತಪಸಿನ ಫಲವು, ಜ್ಯೋತಿಷ್ಟೋಮ ಯಾಗ ಫಲ
> ಮೇದಿನಿಯನೊಲಿದಿತ್ತ ಫಲ, ವಸ್ತ್ರಾದಿ ಕನ್ಯಾದಾನ ಫಲವಹುದು
> ಆದರಿಸಿ ಭಾರತದೊಳೊಂದಕ್ಷರವ ಕೇಳ್ದರಿಗೆ, ಎಂದು ಹೇಳಿ

ಸಮಸ್ತ ಭಾರತ ಕಥಾಪ್ರಸಂಗವನ್ನು ಕೇಳಿದವರಿಗೆ, ಓದಿದವರಿಗೆ, ಬರೆದವರಿಗೆ ಪಂಪನು ಲೌಕಿಕ ಸಂಪದಭಿವೃದ್ಧಿಗಳನ್ನು ಹೇಳಿದರೆ, ಕುಮಾರವ್ಯಾಸನು, ಭಾರತದಲ್ಲಿ ಒಂದಕ್ಷರವನ್ನು ಕೇಳಿದವರಿಗೆ ವೇದಪಾರಾಯಣಫಲದಿಂದ ಆರಂಭಿಸಿ ವಿವಿಧ ಯಾಗ ಯಜ್ಞ ಮಾಡಿದ, ವಿವಿಧ ದಾನಗಳನ್ನು ನೀಡಿದ ಫಲವನ್ನು ಹೇಳುತ್ತಾನೆ.

ಮೇಲೆ ಹೇಳಿದ ಪಂಪ–ಕುಮಾರವ್ಯಾಸರ ಹೇಳಿಕೆ ಪ್ರತಿಹೇಳಿಕೆಗಳು ಕೇವಲ ಕಾಕತಾಳೀಯವೆನ್ನಲು ಬಾರದು. ಅಲ್ಲಿ ಇಲ್ಲಿ ಒಂದೊಂದು ಪದವೋ ವಾಕ್ಯವೋ ಪಂಪನ ಹೇಳಿಕೆಗೆ ವಿರುದ್ಧವಾಗಿದ್ದರೆ, ಕಾಕತಾಳೀಯವೆಂದುಬಿಡಬಹುದಾಗಿತ್ತು.

ಆದರೆ ಕಥೆಯ ಹೊರಗೆ ಪಂಪನು ಹೇಳಿರುವ ಪ್ರತಿಯೊಂದು ಮಾತಿಗೂ ಕುಮಾರ ವ್ಯಾಸನು ತನ್ನ ಕಾವ್ಯದಲ್ಲಿ ಕಥೆಯ ಹೊರಗೆ ಉತ್ತರವನ್ನು ಕೊಟ್ಟಿದ್ದಾನೆಂಬುದನ್ನು ಮೇಲೆ ಸವಿವರವಾಗಿ ಪ್ರಸ್ತಾಪಿಸಲಾಗಿದೆ.

ಇನ್ನು ಕಾವ್ಯದ ಕಡೆಯಲ್ಲಿ ಪಂಪನು ತನ್ನ ವಂಶಾವಳಿಯನ್ನು ಸವಿವರವಾಗಿ ತಿಳಿಸಿ, ತನಗೆ ಅರಿಕೇಸರಿ ಈ ಕಾವ್ಯವನ್ನು ರಚಿಸಿದಕ್ಕಾಗಿ ನೀಡಿದ ದಾನ ದತ್ತಿಗಳ ವಿವರಗಳನ್ನೂ ಅರಿಕೇಸರಿಯ ವಂಶಾವಳಿಯನ್ನೂ ತಿಳಿಸುತ್ತಾ ಈ ರಾಜನನ್ನು ವಿಶೇಷವಾಗಿ ಹೊಗಳಿರುತ್ತಾನೆ. ಅಲ್ಲದೇ ತನ್ನ ರೂಪ ಲಾವಣ್ಯಗಳ ಕುರಿತಾಗಿಯೂ ಸವಿವರ ವರ್ಣನೆಯನ್ನು ನೀಡುತ್ತಾನೆ. ಇದಕ್ಕೆ ವಿರುದ್ಧವಾಗಿ ಕುಮಾರವ್ಯಾಸನು ಎಲ್ಲಿಯೂ ತನ್ನ ವಂಶಾವಳಿಗಳನ್ನೇ ಆಗಲೀ ತನ್ನ ಆಕಾರ ಸ್ವರೂಪಗಳನ್ನಾಗಲೀ ಅಷ್ಟೇ ಏಕೆ, ತನ್ನ ಹೆಸರನ್ನೇ ಹೇಳಿಕೊಂಡಿರುವುದಿಲ್ಲ. ಪಂಪನ ಸವಿವರವಾದ ಇಂತಹ ವಿಚಾರಗಳಿಗೆ ಉತ್ತರ ರೂಪವಾಗಿ ತನ್ನನ್ನು 'ಕುಮಾರವ್ಯಾಸ', ಎಂದರೆ, 'ವ್ಯಾಸರ-ಶಿಷ್ಯ' ಎಂಬ ಅರ್ಥದಲ್ಲಿ ಮಾತ್ರ ಕರೆದು ಕೊಂಡು, "ಕುಮಾರವ್ಯಾಸ ಯೋಗೀಂದ್ರ'' ಎಂದುಕೊಳ್ಳುತ್ತಾನೆ.

ಇಷ್ಟೆಲ್ಲಾ ವಿವರಣೆಗಳಿಂದ, ಕುಮಾರವ್ಯಾಸನು ಉದ್ದೇಶಪೂರ್ವಕವಾಗಿ ಪಂಪನ ಭಾರತಕ್ಕೆ ಪ್ರತಿಯಾಗಿ, ಭಾರತವನ್ನು ಹೇಗೆ ರಚಿಸಬೇಕು, ಅದರ ಆಶಯ ಏನಿರಬೇಕು; ಎಂಬ ಎಲ್ಲಾ ಅಂಶಗಳನ್ನು ತಿಳಿಸುತ್ತಾ ಪಂಪನು ಭಾರತದ ಕಥೆಯ ಬಗ್ಗೆ ನೀಡಿರುವ ಎಲ್ಲ ರೀತಿಯ ಅಭಿಪ್ರಾಯಗಳಿಗೂ ಉತ್ತರ ರೂಪವಾಗಿ ತನ್ನ ಅಭಿಪ್ರಾಯಗಳನ್ನು ತಿಳಿಸಿರುತ್ತಾನೆ ಎಂಬುದು ಸ್ಪಷ್ಟಪಡುತ್ತದೆ.

ಕಾವ್ಯದ ಒಳಗಿನಿಂದ, ನನ್ನ ಈ ಅಭಿಪ್ರಾಯಕ್ಕೆ ಪುಷ್ಟಿ ನೀಡುವ ಅನೇಕ ಸಂದರ್ಭಗಳನ್ನು ಉದಾಹರಿಸಬಹುದಾದರೂ ಇಬ್ಬರಿಗೂ ಮೂಲವಾದ ವ್ಯಾಸ ಭಾರತದ ಅಂಶಗಳನ್ನೇ ಇವರುಗಳು ಹೆಚ್ಚಿನ ಸಂದರ್ಭಗಳಲ್ಲಿ ಅನುಸರಿಸಿರುವುದರಿಂದ, ಈ ಲೇಖನದ ಉದ್ದೇಶಕ್ಕೆ ಹೆಚ್ಚಿನ ಉಪಯೋಗವಾಗದು. ಆದರೂ ಕೇವಲ ಒಂದೆರಡು ಪ್ರಸಂಗಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗಿದೆ.

ಮಹಾಭಾರತದಲ್ಲಿ ಶ್ರೀಕೃಷ್ಣನ ಮಹಿಮೆಯ ಪ್ರಥಮ ದರ್ಶನವಾಗುವುದು ದ್ರೌಪದಿಯ ವಸ್ತ್ರಾಪಹರಣ ಸಮಯದಲ್ಲಿ. ಆದರೆ ಪಂಪನು ಇಲ್ಲಿ ಶ್ರೀಕೃಷ್ಣನ ಪ್ರಸ್ತಾಪವೇ ಇಲ್ಲದಂತೆ ಮಾಡಿಬಿಟ್ಟಿದ್ದಾನೆ. ದುಶ್ಶಾಸನನು ದ್ರೌಪದಿಯ "ಉಟ್ಟುದುವರಂ ಕೈದಂದು ಕೃಷ್ಣೋರಗನಂ ಪಿಡಿದ ಬೆಳ್ಳಾಳಂತುಮ್ಮನೆ ಬೆಮರುತ್ತು ಮಿರ್ದಂ'', ಎಂದುಹೇಳಿ ಈ ಪ್ರಸಂಗವನ್ನು ಮುಕ್ತಾಯ ಮಾಡಿಬಿಡುತ್ತಾನೆ.

ಆದರೆ ಕುಮಾರವ್ಯಾಸ ಭಾರತದಲ್ಲಿ, ಇದೇ ಸನ್ನಿವೇಶದಲ್ಲಿ ದ್ರೌಪದಿಯು ಕಡೆಯ ಪ್ರಯತ್ನವಾಗಿ ಕೃಷ್ಣನನ್ನು ಬೇಡಿಕೊಳ್ಳುತ್ತಾಳೆ. ಸುಮಾರು ಮೂವತ್ತು

ಷಟ್ಪದಿಗಳಲ್ಲಿ ಕೃಷ್ಣನನ್ನು ಕೊಂಡಾಡಿ ಕೂಗಿ ಕರೆಯುತ್ತಾಳೆ! ಪಂಪ ಒಂದೇ ವಾಕ್ಯವನ್ನೂ ಹೇಳದೇ ಬಿಟ್ಟದಕ್ಕೆ ಪ್ರತಿಯಾಗಿ ಕುಮಾರವ್ಯಾಸ ಇಷ್ಟು ದೀರ್ಘವಾಗಿ ಕೃಷ್ಣಮಹಿಮೆಗೆ ಅವಕಾಶ ಮಾಡಿದ್ದಾನೆ. ಹೇಗೆ ಆದರೂ ಎರಡೂ ರೀತಿಗಳು 'ಅತಿ-ಮಿತಿ'ಯ ದೋಷದಿಂದ ಕೂಡಿದೆ ಎಂದು ಹೇಳದೇ ನಿರ್ವಾಹವಿಲ್ಲ.

ಮತ್ತೊಂದು ಪ್ರಸಂಗ ಸುಭದ್ರಾ ಪರಿಣಯ. ಸಂಗ್ರಹವಾಗಿ ಕಥೆಯು ಮೈಗೆಡಲೀಯದೇ ಭಾರತದ ಕಥೆಯನ್ನು ಹೇಳಲು ಹೊರಟ ಪಂಪ ತನ್ನ ಆಯತಪ್ಪಿ ಕಾವ್ಯದ ಒಟ್ಟು ಹದಿನಾಲ್ಕು ಆಶ್ವಾಸಗಳಲ್ಲಿ ಎರಡು ಆಶ್ವಾಸಗಳನ್ನು ಈ ಸಣ್ಣ ಪ್ರಸಂಗಕ್ಕಾಗಿ ಉಪಯೋಗಿಸಿ, ಅರ್ಜುನನನ್ನು ಅನವಶ್ಯಕವಾಗಿ ಸೂಳೆಗೇರಿಯಲ್ಲಿ ಸಂಚರಿಸುವಂತೆ ಮಾಡಿ, ಅಲ್ಲಿನ ವರ್ಣನೆಯನ್ನು ಸಹ ಸವಿಸ್ತಾರವಾಗಿ ಮಾಡಿ, ಅಷ್ಟಾದಶ ವರ್ಣನೆಯ ಉದ್ದೇಶವನ್ನು ಪೂರೈಸಿದ್ದಾನೆ. ಈ ಅತಿಯಾದ ವಿಸ್ತಾರದ ಬದಲಿಗೆ ಕುಮಾರವ್ಯಾಸನು ಸಂಕ್ಷಿಪ್ತವಾಗಿ ಈ ಪ್ರಸಂಗವನ್ನು ನಿರ್ವಹಿಸುತ್ತಾನೆ. ಬಹಳ ಸರಳವಾಗಿ, "ಬಾಲಕಿಗೆ ಸನ್ಯಾಸಿ ದೇವರ ಮೇಲೆ ಮನವಾಯ್ತುವರಿಗೀಕೆಯಲಿ ನೆಲಸಿತು ಚಿತ್ತ ಕಾಣೆನು ಜಪಸಮಾಧಿಗಳ," ಎಂದು ಮಾರ್ಮಿಕವಾಗಿ ಹೇಳಿ ಈ ಪ್ರಸಂಗವನ್ನು ಬೇಗ ಮುಗಿಸುತ್ತಾನೆ.

ಕುಮಾರವ್ಯಾಸನು ತನ್ನನ್ನು 'ಕುಮಾರವ್ಯಾಸ ಯೋಗೀಂದ್ರ' ಎಂದು ಕರೆದು ಕೊಂಡವ. ಪಂಪನ ವಿರೋಧವಾಗಿ ಉದ್ದೇಶಪೂರ್ವಕವಾಗಿ ಪ್ರತಿಕ್ರಿಯಿಸುತ್ತಾನೆಯೋ? ಎಂಬ ಪ್ರಶ್ನೆಯೊಂದು ಸಹಜವಾಗಿ ಏಳುತ್ತದೆ. ಈಗಾಗಲೇ ತಿಳಿಸಲಾಗಿರುವಂತೆ, ಪಂಪನು ಮಹಾಭಾರತದ ಕಥೆಯ ಬಗ್ಗೆ ಮಾಡಿರುವ ಪತ್ರಿಯೊಂದು ಹೇಳಿಕೆಗೂ, ಕುಮಾರವ್ಯಾಸನು ನಿಸ್ಸಂದಿಗ್ಧವಾಗಿ ಉತ್ತರಗಳನ್ನು ನೀಡಿರುವುದನ್ನು ಕೇವಲ ಕಾಕತಾಳೀಯವೆನ್ನಲು ಬಾರದೆಂಬುದಕ್ಕೆ ಅವರಿಬ್ಬರ ಹೇಳಿಕೆಗಳನ್ನು ಮೇಲೆ ವಿವರಿಸಿರುವಂತೆ ಪರಿಶೀಲಿಸಿರುವುದೇ ಸಾಕಾಗುತ್ತದೆ. ಕುಮಾರವ್ಯಾಸನು ತನ್ನನ್ನು 'ಯೋಗೀಂದ್ರ' ಎಂದು ಕರೆದುಕೊಂಡಿದ್ದರೂ ಅವನ ಪಾತ್ರಗಳು ಆಡುವ ಮಾತುಗಳು ಎಂದಿಗೂ, ಯಾವ ಕಾರಣಕ್ಕೂ ಅವನನ್ನು ಕೇವಲ 'ಯೋಗೀಂದ್ರ' ಎಂಬ ಪಟ್ಟಕ್ಕೆ ಕಟ್ಟಿಹಾಕುವುದಿಲ್ಲ. ಉದಾಹರಣೆಗೆ ದುರ್ಯೋಧನನು ತನ್ನ ತಂದೆಗೆ ಹೇಳುವ ಈ ಮಾತನ್ನು ನೋಡಿ —"ನೂರು ಮಕ್ಕಳ ಹಡೆದು ಬರಿದೆ ಕೆಡಿಸಿದೆ ಎನ್ನ ತಾಯಿ ಜವ್ವನವ." ಅದೇ ರೀತಿ ಅವನು ಕೃಷ್ಣನಿಗೆ ಹೇಳುವ ಮಾತನ್ನು ನೋಡಿ "ನೀನಖಿಳ ಗೋಪೀ ಜಾರ, ಜಾರೆಯರ ಮಕ್ಕಳಿಗೆ ನೀ ಜೀವ ತಪ್ಪೇನು." ದ್ರೌಪದಿ ತನ್ನ ಗಂಡಂದಿರನ್ನು ನಿಂದಿಸಲು ಹೇಳುವ "ಗಂಡರೋ ನೀವ್ ಭಂಡರೋ," ಎಂಬ ಮಾತಾಗಲಿ, "ಕೌರವ ನಾಯಿ ಕಾಲಲಿ ನೊಂದೆನು," ಎಂಬ ಮಾತಾಗಲೀ, ಆಯಾ ಸಂದರ್ಭಕ್ಕೆ ಉಚಿತವಾಗಿರುವಂತೆ ಓದುಗರಿಗೆ ಅನ್ನಿಸುತ್ತದೆ. ಭಾಷೆಯನ್ನು

ಇಷ್ಟು ಶಕ್ತಿಶಾಲಿಯಾಗಿ, ಸಂದರ್ಭೋಚಿತವಾಗಿ 'ಮಡಿ-ಮೈಲಿಗೆ' ಬಿಟ್ಟು ಉಪಯೋಗಿಸುವ ಈ 'ಯೋಗೀಂದ್ರನಿಗೆ' ಪಂಪನ ಅಭಿಪ್ರಾಯಕ್ಕೆ ವಿರೋಧವನ್ನು ತನಗೆ ಸರಿಕಂಡಂತೆ ವ್ಯಕ್ತಪಡಿಸುವುದು ಶಕ್ಯವಲ್ಲವೇ ?

ಪಂಪನು ಭಾರತದ ಕಥೆಯನ್ನು ಕಂಡ, ಬರೆದ ರೀತಿ ಸರಿಯಿಲ್ಲವೆಂದು ಕುಮಾರವ್ಯಾಸನ ಸ್ಪಷ್ಟ ಅನಿಸಿಕೆ. ಅದಕ್ಕೆ ಉತ್ತರ ರೂಪವೇ ಅವನ "ಕರ್ಣಾಟಕ ಭಾರತ ಕಥಾಮಂಜರಿ", ಎಂಬುದನ್ನು ಸಾದರಪಡಿಸುವ ಉದ್ದೇಶದಿಂದ ಮಾತ್ರ ಈ ಲೇಖನವನ್ನು ಸಿದ್ಧಪಡಿಸಿದೆ. ಇದರಲ್ಲಿ ಆದಿಕವಿಯಾದ, ಕನ್ನಡಿಗರಿಗೆ ಪೂಜ್ಯನಾದ ಪಂಪನ ವಿರೋಧವಾಗಿ ಅಭಿಪ್ರಾಯ ನೀಡಲಾಗಿಲ್ಲವೆಂದು ಸ್ಪಷ್ಟಪಡಿಸುತ್ತಾ ಈ ಲೇಖನವನ್ನು ಮುಗಿಸುತ್ತೇನೆ.

ಕೆ.ಸಂ. ೬೧೦೦ ಎಂ.ಯು.ಪಿ.ಎಂ —೬೦೦ ಪ್ರತಿಗಳು—೮-೧೨-೯೯